ಅಖಿಲ ಭಾರತ ಪತ್ರಿಕೆ
ಜನವರಿ 2026



# ನಗುವೆ ನಲಿವು

ಬೆಲೆ : 15/-



ಫೋಟೋ: ಇಮೇಜಿಂಗ್ ಸಾವಿತ್ರಿ

# ಅಖಿಲ ಭಾರತ ಪತ್ರಿಕೆ
## ಜನವರಿ 2026

ಸಂಪುಟ: 36 ಸಂಚಿಕೆ: 01



**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ:**
ಡಾ॥ ಆರ್.ಕೆ. ಕುಲಕರ್ಣಿ



**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
https://www.sriaurobindo
complex.org/archive.php
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.


## ಪರಿವಿಡಿ

### ನಗುವೆ ನಲಿವು

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು


**ನಗುವೆ ನಲಿವು** 4

**ದೈವೀ ಮುಗುಳ್ನಗೆ** 6
ಅನು: ನಾಗಜ್ಯೋತಿ ಮಾನ್ವಿ

**ನಗುವಿನೊಂದಿಗೇ ಜೀವಿಸಿ** 11

**ಭಗವಂತನಿಂದ ಮಂದಸ್ಮಿತ ವದನ** 21

**ಎಲ್ಲವನ್ನೂ ಸರಳ–ಸುಂದರಗೊಳಿಸುವ ನಗು** 25
ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್

**ನಗುವಿನ ಪುನರ್–ಸ್ಥಾಪನೆ** 27
ಅನು: ಡಾ॥ ಮಹಾದೇವ ಸಕ್ರಿ

**ಶ್ರೀ ಅರವಿಂದರ 'ಗೀತಾ ಪ್ರಬಂಧಗಳು'** 40
ಅನು: ಜಾನ್ವಿ

**ಶ್ರೀ ಅರವಿಂದರ 'ಉರ್ವಶಿ'** 44
ಅನು: ಶ್ರೀ ಕಿಶೋರಕುಮಾರ ಕಾಸಾರ (ಸಮಷ್ಟಿ)

**ಮುಖಪುಟದ ಕವನಗಳು** 55

**ವಾರ್ತಾಪತ್ರ** 59

## ಸಂಪಾದಕರ ಟಿಪ್ಪಣಿ

ಒಂದು 'ಮುಗುಳ್ನಗೆ'ಯು ಹಲವಾರು ಸಂಗತಿಗಳನ್ನು ಸಂಕೇತಿಸುತ್ತದೆ. ಬಹಿರಂಗದಲ್ಲಿ ಘಟಿಸುವ ಎಂತಹದೇ ವಿಪ್ಲವಕಾರೀ ಘಟನೆಗಳಿಗೂ ಎದೆಗುಂದದ ಭಾವವನ್ನು ಸಂಕೇತಿಸುತ್ತದೆ. ಅಂತರಂಗದ ತುಮುಲಗಳನ್ನು ಜಯಿಸುವ ಸಂಕೇತವೂ ಆಗಿದೆ. ಆಂತರಿಕ ಸಾಮರ್ಥ್ಯವನ್ನು ಮತ್ತು ದಿವ್ಯತ್ವದಿಂದ ಪೂರ್ಣಗೊಂಡಿರುವ ಕೃಪೆಯನ್ನು ಪ್ರತಿನಿಧಿಸುತ್ತದೆ. ಜೊತೆಗೆ ಸಾಕ್ಷಾತ್ಕಾರಗೊಂಡಿರುವ ಆತ್ಮದ ಹಂತವನ್ನು ಪ್ರತಿನಿಧಿಸುತ್ತದೆ. ನಗುವದಕ್ಕೆ ಸಮರ್ಥನಾಗಿರುವದೇ ಮಾನವನ ಅಸ್ಮಿತೆಯೂ ಆಗಿದೆ. ಯಾವಾಗ ದೈವತ್ವವು ಮಾನವನ ಸ್ವರೂಪದಲ್ಲಿ ಅವತರಣಗೊಳ್ಳುತ್ತದೆಯೋ ಮತ್ತು ಈ ಭೂಬದುಕಿನ ಸಾಕಾರವನ್ನು ಪಡೆದುಕೊಳ್ಳುತ್ತದೆಯೋ ಆಗ ಭೂಮಿಗೆ ಅರ್ಪಿಸುವ ಸಲುವಾಗಿಯೇ ಈ 'ಮುಗುಳ್ನಗೆ'ಯೂ ಪ್ರಾಪ್ತವಾಗುತ್ತದೆ. ಇದು ನವನವೀನ ಭರವಸೆಯನ್ನು, ಆತ್ಮವಿಶ್ವಾಸವನ್ನು ಹೃದಯದ ತುಂಬ ತುಂಬುತ್ತದೆ. ಸರ್ವಸ್ವವೂ ಶುಭಕರವಾಗಿ ಮಂಗಳಮಯವಾಗಿರಲಿ ಎನ್ನುವ ಉದಾತ್ತ ಧ್ಯೇಯವನ್ನು ಒದಗಿಸುತ್ತದೆ. ಇದೆಲ್ಲವೂ ಸಾಧ್ಯವಾಗುವಲ್ಲಿ ದೈವತ್ವವು ಇಲ್ಲಿ ಅಸ್ತಿತ್ವದಲ್ಲಿ ಇರುವದೇ ಮೂಲವೆನ್ನುವದನ್ನು ಈ'ಮುಗುಳ್ನಗೆ'ಯು ಸಂಕೇತಿಸುತ್ತದೆ. (ಎಐಎಮ್)

## ಸಂಪಾದಕೀಯ

ಶ್ರೀ ಅರವಿಂದರ 'ಸಾವಿತ್ರಿ'ಯಲ್ಲಿ ಮುಗುಳುನಗೆ ಎನ್ನುವದು ದೈವತ್ವದ ಸಾಮೀಪ್ಯವನ್ನು ಸಂಕೇತಿಸುತ್ತದೆ. ಇದು ಚೇತನಕ್ಕೆ ಆಧಾರವೂ ಆಗಿದ್ದು ಜೀವಾತ್ಮನ ತೋಷವೂ ಆಗಿದೆ. ಇದನ್ನೇ ಶ್ರೀ ಅರವಿಂದರು 'ಒಂದು ಮುಗುಳ್ನಗೆಯೂ ಸಹಿತ ಮರುಭೂಮಿಯ ಹೃದಯವನ್ನು ಅರಳಿಸಬಲ್ಲುದು' ಎಂದು ಅಭಿವ್ಯಕ್ತಿಸುತ್ತಾರೆ. ನವೀನ ಬೆಳಗಿನ ಆಗಮನಕ್ಕಾಗಿ ಜೊತೆಗೆ ಇದು ಶ್ರೀಮಾತೆಯ ಸಂತೋಷದ ಕುರುಹಾಗಿ ಮತ್ತು ಇಡೀ ವಿಶ್ವವನ್ನೇ ಯಾತನೆಗಳಿಂದ ಮುಕ್ತಗೊಳಿಸುವ ತೋಷದ ಭರತವನ್ನು ಪ್ರತಿನಿಧಿಸುತ್ತದೆ. ಇದೇ ಮೃಣ್ಮಯದ ಬದುಕು ಅನಂತತೆಯನ್ನು ಸ್ಪಂದಗೊಳ್ಳುವ ನೈಜ ಸಂಗತಿಯನ್ನು ತೋರಿಸುತ್ತದೆ. ಮಾನವನ ಆತ್ಮವು ಪರಮಾತ್ಮನೊಡನೆ ಸಂವಾದಿಸುವದೇ 'ಮುಗುಳು ನಗೆ'ಯಾಗಿದೆ. ಇದು ಬದುಕಿಗೆ ಭರವಸೆಯನ್ನು, ಆಂತರಿಕ ಶಾಂತಿಯನ್ನು ಮತ್ತು ತಮವು ಎದುರಾದರೂ ಅದನ್ನು ಸಮರ್ಥವಾಗಿ ಎದುರಿಸುವ ಸಾಮರ್ಥ್ಯವನ್ನು ಒದಗಿಸುತ್ತದೆ. ಆಧ್ಯಾತ್ಮಿಕ ಸ್ವರೂಪದತ್ತ ರೂಪಾಂತರಣ ಹೊಂದಿ ಯಾನವನ್ನು ಮುನ್ನಡೆಸುವಲ್ಲಿ ಮುಂಚೂಣಿಯಲ್ಲಿ ಇರುತ್ತದೆ.

ಹೀಗಾಗಿ ಸಾವಿತ್ರಿಯಲ್ಲಿ ಅಭಿವ್ಯಕ್ತಗೊಂಡಿರುವ 'ಮುಗುಳ್ನಗೆ'ಯು ಕೇವಲ ಒಂದು ಭಾವೋತ್ತೇಜಕವಾಗಿರುವ ಪ್ರಕ್ರಿಯೆಯಾಗಿರುವದಿಲ್ಲ. ಇದೊಂದು ಜಾಗ್ರತೆಗಾಗಿ ಇರುವ ಒಂದು ಜಾಜ್ವಲ್ಯಮಾನವಾಗಿರುವ ಆಧ್ಯಾತ್ಮಿಕ ಸಂಕೇತವಾಗಿರುತ್ತದೆ. ದೈವತ್ವವೇ ಪ್ರೇಮದ ಸ್ವರೂಪದಲ್ಲಿ ಪ್ರಕಾಶನಗೊಂಡಿರುತ್ತದೆ. ಜೊತೆಗೆ ಮಾನವನ ಆತ್ಮವು ಪರಮಾತ್ಮನೊಡನೆ ಸಮಸ್ಪಂದಿಯಾಗಿ ಸಂವಾದ ನಡೆಸುವ ಮೂಲಕ ಏಕತೆಯ ನೆಲೆಗೆ ಮತ್ತು ಜಗತ್ತನ್ನು ಅನಂತತೆಯ ಹಂತಕ್ಕೆ ರೂಪಾಂತರಣಗೊಳಿಸುತ್ತಿರುವ ಹಂತವಾಗಿದೆ. ಇದನ್ನೇ 'ಸಾವಿತ್ರಿ;ಯಲ್ಲಿ, 'ತೇಜದುಂಬಿದ ಕಿರಣಗಳು ಎಂದರೆ ಪರಮಾತ್ಮನ ಹಿರಣ್ಮಯಪೂರ್ಣವಾಗಿರುವ ಮುಗುಳ್ನಗೆ' ಎಂದು ಅಭಿವ್ಯಕ್ತಿಸಲಾಗಿದೆ. (ಪಿಪಿಕೆ)

# ನಗುವೆ ನಲಿವು

**– ಅನು: ನಾಗಜ್ಯೋತಿ ಮಾನ್ವಿ**

**ಮುಗುಳ್ನಗುವಿನ ಸಾಮರ್ಥ್ಯ**

ನನ್ನ ಪ್ರೀತಿಯ ಮಗುವೇ, ಈ ವರ್ಷವು ನಿನಗೆ ಎಲ್ಲಾ ಪರಿಸ್ಥಿತಿಯಲ್ಲಿಯೂ ಮುಗುಳ್ನಗುವ ಸಾಮರ್ಥ್ಯ ನೀಡಲಿ. ಸೂರ್ಯನು ಮೋಡಗಳನ್ನು ಚದುರಿಸಿದ ಹಾಗೆ ಮುಗುಳ್ನಗು ಕಣ್ಣುಗಳನ್ನು ಚದುರಿದುತ್ತದೆ.

ನನ್ನ ಪ್ರೀತಿ ಮತ್ತು ಆಶೀರ್ವಾದಗಳೊಂದಿಗೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/216**

ನೀನು ಮುಗುಳ್ನಕ್ಕಾಗ, ಅದು ನನ್ನ ಹೃದಯದಲ್ಲಿ ಬೆಳಕಾಗಿಸುತ್ತದೆ.

*

ಆ ಬೆಳಕಿನಲ್ಲಿ ನೀವು ಮೇಲೇರಿರಿ. ಅಲ್ಲಿ ಎಲ್ಲವೂ ಶಾಂತ, ಶಾಶ್ವತ ಮುಗುಳ್ನಗೆಯಿಂದ ಕಾಣಲ್ಪಡುತ್ತದೆ – ಅಲ್ಲಿ ನೀವು ನನ್ನ ಸತತ ಮತ್ತು ಕೋಮಲ ಸಂಘದಲ್ಲಿರುತ್ತೀರಿ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಮೇ, 1962**

ಸೂರ್ಯನು ಮೋಡಗಳನ್ನು ಚದುರಿಸಿದ ಹಾಗೆ ಮುಗುಳ್ನಗುವು ತಪ್ಪುಗಳನ್ನು ಚದುರಿಸುತ್ತದೆ.

*

ಒಬ್ಬರು ಯಾವಾಗಲೂ ಅತಿರೇಕವಾಗಿ ಮುಗುಳ್ನಗುತ್ತಾರೆಂದು ನನಗನಿಸುತ್ತಿಲ್ಲ. ಎಲ್ಲಾ ಪರಿಸ್ಥಿತಿಯಲ್ಲಿಯೂ ಹೇಗೆ ಮುಗುಳ್ನಗಬೇಕೆಂಬುದನ್ನು ತಿಳಿದವರು ಆತ್ಮನ ನಿಜ ಸಮತೆಗೆ ಬಹಳ ಹತ್ತಿರವಿರುತ್ತಾರೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/177**

ಸಾಮಾನ್ಯವಾಗಿ ಹೇಳಬೇಕೆಂದರೆ, ಮನುಷ್ಯ ಒಂದು ಪ್ರಾಣಿಯಾಗಿದ್ದು ತನ್ನನ್ನು ತಾನು ಬಹಳ ಗಂಭೀರವಾಗಿ ತೆಗೆದುಕೊಳ್ಳುತ್ತಾನೆ. ಎಲ್ಲಾ ಪರಿಸ್ಥಿತಿಯಲ್ಲಿಯೂ ತನ್ನಡೆಗೆ ತಾನು ಹೇಗೆ ಮುಗುಳ್ನಗಬೇಕೆಂಬುದನ್ನು ಕಲಿಯಬೇಕು, ನಾವು ನಮ್ಮ ದುಃಖ ಮತ್ತು ನಿರಾಸೆಗಳೆಡೆಗೆ, ಮಹತ್ವಾಕಾಂಕ್ಷೆ ಮತ್ತು ಬಳಲುವಿಕೆಗಳೆಡೆಗೆ, ಆಕ್ರೋಶ ಮತ್ತು ಪ್ರತಿಭಟನೆಗಳೆಡೆಗೆ ಮುಗುಳ್ನಬೇಕು – ನನ್ನನ್ನು ನಾನು ಮೀರಲು ಇರುವ ಅದೆಂತಹ ಶಕ್ತಿಶಾಲಿ ಅಸ್ತ್ರವಾಗಿದೆ!

*

ಎಲ್ಲಾ ಪರಿಸ್ಥಿತಿಯಲ್ಲಿಯೂ ಮತ್ತು ಯಾವಾಗಲೂ ಮುಗುಳ್ನಗುವುದನ್ನು ಕಲಿಯುವುದು; ನಿಮ್ಮ ದುಃಖಗಳೆಡೆಗೆ ಹಾಗೂ ನಿಮ್ಮ ಸಂತೋಷಗಳು, ನಿಮ್ಮ ಬಳಲುವಿಕೆ ಹಾಗೂ ನಿಮ್ಮ ಭರವಸೆಗಳನ್ನು ನೋಡಿ ನಗಬೇಕು, ಮುಗುಳ್ನಗುವಿಗೆ ಸ್ವಯಂ ಪ್ರಭುತ್ವದ ಸಾರ್ವಭೌಮ ಸಾಮರ್ಥ್ಯವಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/177**

ನೀವು ಯಾವಾಗಲೂ ಜೀವನದೆಡೆಗೆ ಮುಗುಳ್ನಕ್ಕರೆ, ಜೀವನವೂ ನಿಮ್ಮೆಡೆಗೆ ಮುಗುಳ್ನಗುತ್ತದೆ.

*

ಶಾಶ್ವತ ಮುಗುಳ್ನಗೆ: ಕೇವಲ ದೈವನು ಮಾತ್ರ ನೀಡುವ ಕರುಣೆಯಾಗಿದೆ.

*

> *"ನಿಮ್ಮ ವೈರಿಯನ್ನು ಪ್ರೀತಿಸಿ ಮತ್ತು ಅವನೆಡೆಗೆ ಮುಗುಳು ನಗೆ ಚೆಲ್ಲಿ": ಎಂಬ ಈ ಸೂಕ್ತಿಯನ್ನು ಬಹುಸಾರಿ ನಾವು ಕೇಳಿದ್ದೇವೆ. ಒಂದು ಬೂಟಾಟಿಕೆಯ ಅಥವಾ ವ್ಯವಹಾರಿಕ ಮುಗುಳ್ನಗೆಯನ್ನು ಹೇಗೋ ನಿರ್ವಹಿಸುವುದು ಸುಲಭ, ಆದರೆ ಯಾರು ಅನೇಕಬಾರಿ ಅನ್ಯಾಯದ ರೀತಿಯಲ್ಲಿ ವ್ಯವಹರಿಸುತ್ತಾರೋ ಅವರೆಡೆಗೆ ನಿಜವಾಗಿ ಮುಗುಳ್ನಗುವುದು ಅಸಾಧ್ಯ. ನಾವು ನಂಬಿಕೆಯನ್ನು ಕಳೆದುಕೊಳ್ಳುತ್ತೇವೆ, ಅವರಿಂದ ಯಾವ ಒಳ್ಳೆಯದನ್ನೂ ನಿರೀಕ್ಷಿಸುವುದಿಲ್ಲ; ಅವರ ಬಗ್ಗೆ ನಾವು ಸಂಪೂರ್ಣ ಉಪೇಕ್ಷೆ*

*ಮತ್ತು ನಿರಾಸಕ್ತ ಮನೋಭಾವ ಹೊಂದುವುದು ಸಹಜ. ನಾವು ಇದರಿಂದ ಹೊರ ಬರುವುದು ಹೇಗೆ?*

ನೀವು ಎಲ್ಲಾ ಅವಮಾನ ಮತ್ತು ಅಪಚಾರಗಳನ್ನು ಮೀರಿದಾಗ ಮಾತ್ರ ನಿಮ್ಮ ವೈರಿಯೆಡೆಗೆ ನಿಜವಾಗಿ ಮುಗುಳ್ನಗು ತೋರಬಹುದು. ಇದು ಯೋಗಿಕ ಮನೋಭಾವಕ್ಕೆ ಬೇಕಾದ ಪ್ರಾಥಮಿಕ ಷರತ್ತಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/178**

ಒಬ್ಬ ವೈರಿಯೆಡೆಗೆ ಮುಗುಳ್ನಗುವುದು ಅವನನ್ನು ನಿಶ್ಶಸ್ತ್ರಗೊಳಿಸಿದಂತೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/178 – ಶ್ರೀಮಾತೆ**

## ದೈವೀ ಮುಗುಳ್ನಗೆ

ನಿಮ್ಮ ಸಾಧನದಲ್ಲಿ, ಪ್ರಾಣಿಕ ಬಯಕೆ ಮತ್ತು ಅದು ಸೃಷ್ಟಿಸುವ ಗೊಂದಲವನ್ನು ಖಂಡಿತವಾಗಿ ಕಿತ್ತುಹಾಕಬೇಕು. ಶ್ರೀಮಾತೆಯವರು ಎಲ್ಲರೆಡೆಗೂ ಮುಗುಳ್ನಗುತ್ತಾರೆ ಮತ್ತು ಅದನ್ನು ಕೆಲವರಿಗೆ ತೋರಿ ಮತ್ತು ಇನ್ನು ಕೆಲವರೆಡೆಗೆ ತೋರಲಾರದೆ ಇರಲಾರರು. ಆದರೆ ಜನರು ಇದರ ತದ್ವಿರುದ್ಧ ಯೋಚಿಸುತ್ತಾರೆ ಏಕೆಂದರೆ ಅವರಲ್ಲಿ ಕೆಲವು ಪ್ರಾಣಿಕ ಗೊಂದಲ, ಖಿನ್ನತೆ ಮತ್ತು ಬಯಕೆ ಅಥವಾ ಅಸೂಯೆಯ ಕೆಲವು ಚಿಂತನೆಗಳು, ಹೊಟ್ಟೆಕಿಚ್ಚು ಅಥವಾ ಸ್ಪರ್ಧಾತ್ಮಕ ಮನೋಭಾವ ಅವರು ನೋಡುವ ದೃಷ್ಟಿಯನ್ನು ವಿಕಾರಗೊಳಿಸುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/537 – ಶ್ರೀ ಅರವಿಂದರು**

ನೋಡು... "ಪರಮೇಶ್ವರನು ಮುಗುಳ್ನಗುತ್ತಿದ್ದಾನೆ" ಎಂದು ನಾನು ಹೇಳಿದಾಗ ಅದರ ಅರ್ಥವು ವಿಶೇಷವಾಗಿದೆ. ಮಗುಳ್ನಗುತ್ತಿರುವ ಒಂದು ಮುಖವನ್ನು ನಾನು ಕಾಣುತ್ತೇನೆ ಎಂದು ಇದರ ಅರ್ಥವಲ್ಲ. ಆದರೆ... ಅದೊಂದು ಆನಂದ ಭರಿತವಾದ ಪ್ರಕಾಶಮಯ ಕಂಪನ!... ನಿನಗೆ ತಿಳಿದಂತೆ ಸೂರ್ಯನು ಮಸುಕಾದ ಮತ್ತು ಮಂಕಾದ ಮತ್ತು ಶೀತಲವಾದ ಮತ್ತು ಬಹುತೇಕ ಹೋಲಿಕೆಯಲ್ಲಿ ಕಪ್ಪಾಗಿದ್ದಾನೆ. ಮತ್ತು 'ಅದು' ತೊಲಗಿಹೋದಾಗ... (ಅದನ್ನು ತಮ್ಮ ಭಾವಭಂಗಿಯಲ್ಲಿ

ತೋರಿಸುತ್ತಾ) ಅದು ತೊಡೆದು ಹೋದಾಗ!! ಅಂದರೆ, ಯಾರು ಆಗಮಿಸಿ, ಆವಿರ್ಭವಿಸುವರೋ, ಎಲ್ಲವೂ ಬದಲಾವಣೆ ಹೊಂದಿದಾಗ ಅಸ್ತಿತ್ವದಲ್ಲಿರುವರೋ, ಅವರಿಗೆ ಈ ವಿರುದ್ಧ ಪರಿಸ್ಥಿತಿಯು ಉಂಟಾದಾಗ ಆಶ್ಚರ್ಯದ ಭಾವವು ಆಗುವುದಿಲ್ಲ.

ನೋಡು... ನೀನು ಆಶ್ಚರ್ಯದಿಂದ ತುಂಬಿ ಹೋಗಬಲ್ಲೆ!! (ನಾನು ಇದನ್ನು ಹೇಗೆ ಹೇಳಲಿ?...) ಒಂದು ಬಗೆಯ ನಗು – ಉಲ್ಲಾಸಭರಿತ ಬೆಳಕಿನ ನಗು – ಅದು ಪ್ರೇಮದ ಉತ್ಕಟತೆಯಿಂದ ತುಂಬಿಕೊಂಡಿರುತ್ತದೆ ಮತ್ತು... ಹೌದು, ಇದೇ ಆನಂದವಾಗಿರಬೇಕು, ನೈಜ ಆನಂದ! (ಮತ್ತೊಂದು ಬಗೆಯ ಹಾವಭಾವ ತೋರುತ್ತಾ) ಈ ರೀತಿ, ಆ ರೀತಿ, ಈ ರೀತಿ, ಆ ರೀತಿ...

*

**ವಸ್ತುಗಳು ಅಹಿತಕರವಾದಾಗ**

ನಾನು ಈಗತಾನೇ ಹೇಳಿದ್ದೆ "ಪ್ರತಿಯೊಂದು ಅಹಿತಕರವೆಂದೆನಿಸುತ್ತದೆ": "ಸಾನಿಧ್ಯ"ದ ಪ್ರಜ್ಞೆಯಿಲ್ಲದ ಜಗತ್ತು ಸಹ ಇದೇ ಸ್ಥಿತಿಯಲ್ಲಿರುತ್ತದೆ. ಜನರಿಗೆ ಎಲ್ಲವೂ ಚೆನ್ನಾಗಿದೆ ಮತ್ತು ನಾವೂ ಸಹ ಸಂತೋಷವಾಗಿದ್ದೇವೆ, ನಮ್ಮ ಪರಿಸರಗಳು ನಮಗೆ ಅನುಕೂಲವಾಗಿವೆ, ಮತ್ತು ಎಲ್ಲವೂ ಚೆನ್ನಾಗಿದೆ ಮತ್ತು ನಾವು ಆರೋಗ್ಯಕರವಾಗಿದ್ದೇವೆ ಮತ್ತು ಮಾನವೀಯ ಸ್ಥರದಲ್ಲಿ ಎಲ್ಲವೂ ಹೊಂದಾಣಿಕೆಯಾಗಿದೆ ಎಂದೆನಿಸಿದಾಗ – ಆ ಇನ್ನೊಂದು ಸ್ಥಿತಿಗೆ ಹೋಲಿಸಿದಾಗ ಇದು ಅಲೆಯಾಗಿ ಅಹಿತರವೆನಿಸುತ್ತದೆ.

ಆಗ ನೀವು ಕೇವಲ ಮುಗುಳ್ನಗಬಹುದು. ಇವರು ಕೆಟ್ಟ ಮನಸ್ಥಿತಿಯಲ್ಲಿದ್ದಾರೆ ಮತ್ತು ಅವರು ಸಿಟ್ಟಿಗೆದ್ದರು ಮತ್ತು ಏನೋ ಕೆಟ್ಟದಾಯಿತು ಮತ್ತು ಜನರು ಜಗಳವಾಡಿದರು ಮತ್ತು ಪ್ರಕೃತಿಯು ಚಂಡಮಾರುತವನ್ನು ತಂದೀತು; ಇವೆಲ್ಲವುಗಳಿಂದ ಪ್ರಭಾವಕ್ಕೊಳಗಾಗದೆ ದುಃಖಪಡುವ ಬದಲಾಗಿ ನೀನು ಕೇವಲ ಮುಗುಳ್ನಗಬಹುದು, ಏಕೆಂದರೆ ಪ್ರತಿಯೊಂದೂ ಒಳ್ಳೆಯದು ಮತ್ತು ಕೆಟ್ಟದು, ಬೆಳಕು ಮತ್ತು ಕತ್ತಲು – ಎಲ್ಲವೂ ಒಂದೇ ತರಹ ಮತ್ತು "ಅದಕ್ಕೆ" ಹೋಲಿಸಿದರೆ ಎಲ್ಲವೂ ಅಹಿತಕರವೆನಿಸುತ್ತದೆ. ಆತನನ್ನು ನೋಡಲು ನೀವು ಮೇಲೇರಿದಾಗ ನಿಮಗಾದ ಅನುಭವವು ಅದೇ ಆಗಿ ಉಳಿಯುವುದಿಲ್ಲ. ಏಕೆಂದರೆ "ಹೌದು,

ಮೇಲೇರಿದಾಗ ಎಲ್ಲವೂ ಬಹಳ ಚೆನ್ನಾಗಿದೆ", ಆದರೆ ನೀವು ಕೆಳಗೆ ಬಂದಾಗ ಎಲ್ಲವೂ ಭಯಾನಕವಾಗಿದೆ. ಆದರೆ ನಾನು ಅದರ ಬಗ್ಗೆ ಹೇಳುತ್ತಿಲ್ಲ: ಇಲ್ಲಿಯ ಸದ್ಯದ ಅನುಭವ – ಇನ್ನೊಂದು ಶಬ್ದದಲ್ಲಿ ಹೇಳಬೇಕೆಂದರೆ, ಜಗತ್ತು ಯಾವ ರೀತಿಯಲ್ಲಿ "ಇರಬೇಕಾಗಿದೆ". ಜಗತ್ತು ಯಾವ ರೀತಿಯಲ್ಲಿರಬೇಕಾಗಿದೆ, ಅದು ಹಾಗೆ ಆಗುತ್ತದೆ... ಜನರು ಅದಕ್ಕೆ ಒಪ್ಪಿಗೆ ಕೊಟ್ಟಾಗ.

ಜನರು ತಮ್ಮ ಅಹಿತರಕ್ಕೆ ಬಹಳ ಮೋಹಗೊಂಡಿದ್ದಾರೆ, ಮತ್ತು ಅತಿರೇಕವಾಗಿ ಮೋಹಗೊಂಡಿದ್ದಾರೆ ಮತ್ತು ಅದಕ್ಕೆ ಅಂಟಿಕೊಂಡಿದ್ದಾರೆ. ಅವರಿಗೆ ಅಹಿತಕರವೆನಿಸದಿದ್ದಾಗ ಜೀವಂತವಾಗಿದ್ದೇವೆ ಎಂದು ಅನಿಸುವುದಿಲ್ಲ. ಆದರೆ ಅವರಿಗೆ ಇದು ತಿಳಿದಿಲ್ಲ.

ಕೆಲವೊಮ್ಮೆ, ವೈಯಕ್ತಿಕ ಅಥವಾ ಸಾಮೂಹಿಕ ವಿಕಾಸದಲ್ಲಿ, ಕೆಲವೊಂದು ಹಂತಗಳಿವೆ, ಅಲ್ಲಿ ಅವರು ಈ ಅಹಿತಕರ ಭಾವದಿಂದ ಹೊರಬಂದಿರುತ್ತಾರೆ, ಹಾಗೆಂದರೆ ಅದರಲ್ಲಿ ನೀನು ನಂಬಿಕೆಯಿಡುವುದಿಲ್ಲ, ಅದರ ಸತ್ಯ ಮತ್ತು ಮಹತ್ವದಲ್ಲಿ ನೀನು ನಂಬಿಕೆಯಿಟ್ಟಿರುವುದಿಲ್ಲ, ಆದರೆ ನೀನು ಇನ್ನೂ ಆ ಬೇರೆ ವಸ್ತುವನ್ನು ಇನ್ನೂ ಪಡೆದಿರುವುದಿಲ್ಲ, ಆದರೆ ನೀನು ಇನ್ನೂ ಆ ಬೇರೆ ವಸ್ತುವನ್ನು ಇನ್ನೂ ಪಡೆದಿರುವುದಿಲ್ಲ, ಹಾಗಾಗಿ ಅವೆರಡರ ಮಧ್ಯದಲ್ಲಿ ನೀನಿರುವೆ... ಅಲ್ಲಿ ಕಠಿಣ, ಮಂದ ಮತ್ತು ಸಂವೇದನರಹಿತವೆಂದೆನಿಸುತ್ತದೆ. ಇದರಲ್ಲಿ ಒಂದು ವಸ್ತುವಿನ ಉತ್ಸಾಹವೂ ಇರುವುದಿಲ್ಲ ಮತ್ತು ಇನ್ನೊಂದರ ಸಂತೋಷವೂ ಇನ್ನೂ ಸಿಕ್ಕಿರುವುದಿಲ್ಲ; ನೀನು ಅವೆರಡರ ಮಧ್ಯದಲ್ಲಿರುತ್ತೀಯ ಮತ್ತು ಅದು ಸ್ವಲ್ಪ ಬಂಜರು ಎಂದೆನಿಸುತ್ತದೆ. ಆದರೆ ಕೆಲವೇ ಜನರು ಈ ಸ್ಥಿತಿಯನ್ನು ತಲುಪಿರುತ್ತಾರೆ. ಈ ಜನರೇ ಹೀಗೆ ಹೇಳುತ್ತಾರೆ, "ನನಗೆ ಈ ಜಗತ್ತು ಬೇಕಾಗಿಲ್ಲ" ಮತ್ತು ಅವರು ಜಗತ್ತಿನಿಂದ ದೂರ ಹೋಗುತ್ತಾರೆ. ಆದರೆ ಆ ವಿಷಯಕ್ಕೆ ಬಂದರೆ...

ಒಂದು ವೇಳೆ ಆ ವಸ್ತು ಸತತವಾಗಿದ್ದು, ಸ್ಥಾಪಿತವಾಗಿದ್ದರೆ ಅದನ್ನು ಸಾಕ್ಷಾತ್ಕರಿಸಿಕೊಂಡಿದ್ದಾರೆಂದು ಅರ್ಥ, ಓಹ್!...

ಮತ್ತು ನೀವು ಅದನ್ನು ಭಾವಿಸಲು ಯಾವಾಗ ಸಾಧ್ಯವೆಂದರೆ – ನೀವು ಅದನ್ನು ಭಾವಿಸಲು ಪ್ರಯತ್ನ ಮಾಡಬಾರದು, ನಾನು ಭಾವಿಸುತ್ತಿದ್ದೇನೆ ಎಂದು ಭಾವಿಸಬಾರದು, ಮತ್ತು ಇದು ಬಹಳ ಕಷ್ಟಕರ, ಏಕೆಂದರೆ ಅದು ಬಂದ ತಕ್ಷಣ,

ನಮ್ಮೊಳಗೆ ಏನೋ ಒಂದು ಭಾವಿಸಲು ಪ್ರಯತ್ನಿಸುತ್ತದೆ ಮತ್ತು ತತ್‌ಕ್ಷಣ ಇದನ್ನು ಭಾವಿಸಲು ಅಸಾಧ್ಯ: ನಾನು ಭಾವಿಸುತ್ತಿದ್ದೇನೆ ಎಂಬ ಭಾವನೆ ಬಂದರೆ, ಆಗ ಅದು ಅದಾಗಿ ಉಳಿದಿರುವುದಿಲ್ಲ.

ಓಹ್, ಅದು ಆಗಲೇ ಕೆಟ್ಟುಹೋಗಿದೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 13 ಅಕ್ಟೋಬರ್, 1965**

**ದೇವರ ಕಠೋರತೆ**

ದೋಷವೆಂದರೆ ಹಳೆಯ ಹಠಮಾರಿ ಸಲಹೆಯು ಮರುಕಳಿಸುತ್ತಿರುವುದು, ಹಾಗಾಗಿ ಅದು ಹೊರಬರಬೇಕಾಗಿರುವ ಹಳೆಯ ಪ್ರತಿಕ್ರಿಯೆಗಳನ್ನು ತರುತ್ತದೆ. ಇದರಿಂದ ನಾವು ಹೊರಬರಬೇಕಾಗಿದೆ ಅದಕ್ಕಾಗಿಯೇ ಈ ಹಳೆಯ ಪ್ರತಿಕ್ರಿಯೆಗಳು ಬರುತ್ತಿವೆ. ಅತಿಮಾನಸ, ದೇವರಗಳ ಬಗ್ಗೆ ನಿನ್ನಲ್ಲಿರುವ ಹಳೆಯ ತಪ್ಪು ವಿಚಾರಗಳಾದ ಶ್ರೇಷ್ಠತೆ ಮತ್ತು ಕಠೋರತೆಗಳು ನಿನ್ನಲ್ಲಿ ಹಳೆಯ ತಪ್ಪು ವಿಚಾರಗಳನ್ನು ಮತ್ತು ನಿರಾಶಾದಾಯಕ ಭಾವನೆಗಳನ್ನು ತರುತ್ತಿದೆ. ಈ ಕಠೋರತೆ ಮತ್ತು ಕಠಿಣತೆಯ ಬಗ್ಗೆ ನೀವು ಮಾತನಾಡುತ್ತಿರುವುದು ಕೊಳಕಾದ ವಿಷಯ – ನಾನು ಈ ರೀತಿಯಲ್ಲಿ ವ್ಯಕ್ತಪಡಿಸಿದ್ದಕ್ಕಾಗಿ ಕ್ಷಮೆ ಕೇಳುತ್ತೇನೆ ಇದನ್ನು ಬೇರೆಯ ರೀತಿಯಲ್ಲಿ ಹೇಳಲು ಸಾಧ್ಯವೇ ಇಲ್ಲ. ಸತ್ಯವೇನೆಂದರೆ ನಾನು ಸಾರ್ವಜನಿಕವಾಗಿ ನನ್ನನ್ನು ನಾನು ವ್ಯಕ್ತಪಡಿಸಿಕೊಳ್ಳುವುದಿಲ್ಲ ಮತ್ತು ನಾನು ಹಾಗೆ ಎಂದೂ ಇಲ್ಲ. ಸೂರತ್ ರಾಷ್ಟ್ರೀಯ ಸಮ್ಮೇಳನದಲ್ಲಿ ನಾನು ಭಾಗವಹಿಸಿದ್ದಾಗ – ನೇವಿನ್ಸನ್‌ನ ನೋಡಿದಂತೆ ನಾನು ಮಾತ್ರವಲ್ಲ ಬೇರೆ ಎಲ್ಲರೂ ಗಂಭೀರವಾಗಿ ಕುಳಿತಿದ್ದರು ಹಾಗಾಗಿ ಆತ ನನ್ನನ್ನು ರಾಜಕೀಯವಾಗಿ ಅಪಾಯಕಾರಿ ವ್ಯಕ್ತಿ "ಎಂದೂ ಮುಗುಳ್ನಗದ ವ್ಯಕ್ತಿ" ಎಂದು ನನ್ನ ಕರೆದ ಆದರೆ ನಾನು ಯಾವಾಗಲೂ ಮುಗುಳ್ನಗುತ್ತೇನೆ ಎಂದು ಎಲ್ಲರಿಗೂ ತಿಳಿದಿತ್ತು. ನೀನು ಆ ನೇವಿನ್ಸನ್‌ನ ಹಾಗೆ ನನ್ನ ಬಗ್ಗೆ ತಿಳಿದುಕೊಂಡಿರುವೆ ಅಥವಾ X ಬರೆದುದನ್ನು ನೀನು ಒಪ್ಪಿರಬಹುದು, ಆತನು ನನಗೆ ಹೀಗೆ ಬರೆದಿದ್ದಾನೆ – ನೀವೇಕೆ ಕೇವಲ ತುಟಿಯಿಂದ ನಗುವಿರಿ. ಮತ್ತು ಶ್ರೀಮಾತೆಯವರ ಮುಗುಳ್ನಗುವಿನ ಹಾಗೆ ನಿಮ್ಮ ನಗು ನನಗೆ ಸಂತೃಪ್ತಿಯನ್ನು ಕೊಟ್ಟಿಲ್ಲ ಎಂದು ದೂರಿದ್ದಾನೆ. ಅದೇನೇ ಇರಲಿ Y ಗೆ ನೀನು ಏನನ್ನಾದರೂ ಹೇಳಿರಬಹುದು ಅಥವಾ Y ನಿನಗೆ ಏನನ್ನಾದರೂ ಹೇಳಿರಬಹುದು,

ನಾನು ಯಾವಾಗಲೂ ಮೋಜು ಮತ್ತು ಹಾಸ್ಯಕ್ಕೆ ನನ್ನ ಪತ್ರದಲ್ಲಿ ಬಹಳ ಸ್ಥಾನವನ್ನು ಕೊಟ್ಟಿದ್ದೇನೆ ಮತ್ತು ನನ್ನ ವ್ಯಕ್ತಿತ್ವವು ಸಹಜವಾಗಿ ಹೀಗೆ ಪತ್ರಗಳ ಮೂಲಕ ಹರಿದು ಬರುತ್ತದೆ. ನಾನು ಎಂದೂ ಜೀವನದಲ್ಲಿ ಕಠೋರವಾಗಿಲ್ಲ – ಅದು ಸ್ಟ್ಯಾಲಿನ್, ಮುಸಲೋನಿಯ ರೀತಿಯಾಗಿದೆಯೇ ಹೊರತು ನನ್ನದಲ್ಲ; ನಾನು ಕಠೋರ ವ್ಯಕ್ತಿಗಳ ಜೊತೆಗೆ ನನ್ನ ಜೀವನದ ಗುರಿಯನ್ನು ಹಠಮಾರಿತನದಿಂದ ಪಾಲಿಸುತ್ತೇನೆ ಮತ್ತು ಯಾವಾಗಲೂ ಹಾಗೆಯೇ ಮಾಡಿದ್ದೇನೆ. ನಿರಾಶಾದಾಯಕ ಕಲ್ಪನೆಗಳನ್ನು ನೀವೇ ಸೃಷ್ಟಿ ಮಾಡಿ ಅದನ್ನೇ ನಿಜವಾದ ಶ್ರೀ ಅರವಿಂದರೆಂದು ತೆಗೆದುಕೊಳ್ಳಬೇಡ.

## ದೈವೀ ಹಾಸ್ಯ

ಅಂದ ಹಾಗೆ ನೀನು ನರಸಿಂಹ ಹಿರಣ್ಯ ಕಶ್ಯಪುನಂತಹ ರೂಪವನ್ನು ನಿನ್ನ ಕಲ್ಪನೆಯಲ್ಲಿ ತಂದುಕೊಂಡರೆ (ಹಿರಣ್ಯ ಕಶ್ಯಪುನನ್ನು ಸಂಹಾರ ಮಾಡಿದ ನರಸಿಂಹ ಅವತಾರ), ನಿನ್ನನ್ನೂ ಸಹ ಅಧಿಮಾನಸವು ಪ್ರಭಾವಿಸುತ್ತಿದೆ ಎಂದು ನಾನೀಗ ಚಿಂತಿಸಬೇಕಾಗಿದೆ. ನನಗೆ ವೈಯಕ್ತಿಕವಾಗಿ ಆ ನರಸಿಂಹನೆಂಬ ಸಭ್ಯ ವ್ಯಕ್ತಿಯ ಪರಿಚಯವಿಲ್ಲ! ಅವನ ಬಗ್ಗೆ ಅಲ್ಲಿ ಇಲ್ಲಿ ಕೇವಲ ಕೇಳಿ ಗೊತ್ತು ಅಷ್ಟೇ. ಅವನು ಅಧಿಮಾನಸದಲ್ಲಿದ್ದರೂ, ನಾನು ನಿಜವಾಗಿಯೂ ಅವನನ್ನು ಗುರುತಿಸಲಿಲ್ಲ. ಆತನೊಂದು ಸಂಕೇತ ಎಂದು ನಾನು ಯಾವಾಗಲೂ ಭಾವಿಸಿದ್ದೆ... ಅಥವಾ ಬಹುಶಃ ಅವನೊಂದು ಬಗೆಯ ದೈವೀಕರಣಗೊಂಡ ಆದಿಮಾನವನಾದ ನಿಯಾಂಡರ್ಥಾಲ್ ಮತ್ತು ಅವನನ್ನು ಹಿರಣ್ಯ ಕಶ್ಯಪುವಿನ ಸಂಹಾರಕ್ಕಾಗಿ, ನಿಯಾಂಡರ್ಥಾಲ್ ರೀತಿಯಲ್ಲಿಯೇ ಅವನನ್ನು ಬಗೆದು ಸೀಳಲು ಕಳುಹಿಸಲಾಗಿದೆ ಎಂದು. (ಈ ಹಿರಣ್ಯ ಕಶ್ಯಪು ಯಾರೇ ಆಗಿರಲಿ!!). ನನ್ನ ಬಗ್ಗೆ ಹೇಳುವುದಾದರೆ ನಾನು ಆ ಮೇಲಿನ ಸ್ತರದಲ್ಲಿ ಅತ್ಯಂತ ಪ್ರಶಾಂತವಾಗಿ, ಜನೀವಾ ನಗರದ ಯಾವುದೇ ವ್ಯಕ್ತಿಯಷ್ಟು ಪ್ರಶಾಂತವಾಗಿ ಕುಳಿತಿರುತ್ತಿದ್ದೆ. ಆಂತರಿಕವಾಗಿ ಅತ್ಯಂತ ನಿಕಟವಾದ ಬಾಂಧವ್ಯದಿಂದ ಮತ್ತು ಬಹಿರಂಗವಾಗಿ ತುಟಿಯ ಮುಗುಳ್ನಗೆಯ ಮೂಲಕ ಜನರನ್ನು ಸಾಲು ಸಾಲಾಗಿ ಬರಮಾಡಿಕೊಳ್ಳುತ್ತಾ ಕುಳಿತಿದ್ದೆ. ಆದ್ದರಿಂದ, ಈ ನರಸಿಂಹನ ವಿಷಯಕ್ಕೆ ಜಾಗವಾದರೂ ಎಲ್ಲಿದೆ? ಅದೂ ಅಲ್ಲದೆ, ವಿಕಾಸದಲ್ಲಿ ಈ ನರ–ಪಶುವಿನ ಅವಸ್ಥೆಯನ್ನು ದಾಟಿ ನಾನು ಮುಂದೆ ಹೋಗಿರುವೆ ಎಂದು ನನಗೆ ತೋರುತ್ತದೆ – ಬಹುಶಃ ನನ್ನನ್ನು ನಾನೇ ಸ್ತುತಿಸಿಕೊಳ್ಳುತ್ತಿದ್ದೇನೆಯೇ? –

ಆದ್ದರಿಂದ ಮತ್ತೆ ಈ ನರಸಿಂಹನ ವಿಷಯ ಯಾಕೆ? ಅತಿ ಗಂಭೀರವಾದ ಕಷ್ಟ, ಸಮಸ್ಯೆಗಳಿಂದ ನನ್ನನ್ನು ರಕ್ಷಿಸುತ್ತಿರುವ ಒಂದು ಶಕ್ತಿಯು ನನ್ನ ಹಿಂದೆ ಇದೆ ಎಂದಷ್ಟೇ ಹೇಳಬಹುದು – ನಿಜವಾಗಿಯೂ ಇವು ಅತಿ ಗಂಭೀರ – ಇವು ದರ್ಶನ ದಿನದ ಪೂರ್ವದಲ್ಲಿ, ಮೇಲೆ ಕೆಳಗೆ ಸುತ್ತಿ ಮುತ್ತುತ್ತಿದ್ದವು. ಹಾಗಿರುವಾಗ, ನನ್ನ ಒಂದು ಭಾಗವಾಗಲಿ ಅಥವಾ ನಾನೇ ಆಗಲಿ ಆ ನರಸಿಂಹನೊಡನೆ ತಾದಾತ್ಮ್ಯ ಹೊಂದಿಲ್ಲ. ಆದ್ದರಿಂದ ಈ ನರಸಿಂಹ ಈಗ ನಿರ್ಗಮಿಸಲಿ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/49 – ಶ್ರೀ ಅರವಿಂದರು**

ಈ ವಿಶ್ವದ ಸೃಷ್ಟಿಕರ್ತನನ್ನು ಪ್ರತಿಯೊಬ್ಬರೂ ಟೀಕಿಸುತ್ತಾರೆ – ಎಲ್ಲರಿಗಿಂತಲೂ ಆತನೇ ಅತೀ ಹೆಚ್ಚು ಟೀಕಿಸಲ್ಪಟ್ಟಿದ್ದಾನೆ. ಆತನು ಇದೆಲ್ಲವನ್ನು ಮುಗುಳ್ನಗುವಿನಿಂದ ತೆಗೆದುಕೊಳ್ಳುತ್ತಾನೆಂದು ನನಗೆ ಭರವಸೆಯಿದೆ.

ಈ ಮುಗುಳ್ನಗು ಸತತವಾಗಿದೆ. ಮತ್ತು ಇದೊಂದು ಅತ್ಯದ್ಭುತವಾದ ಮುಗುಳ್ನಗು ಇವಕ್ಕೆ ಎಲ್ಲಾ ದುರಂತಗಳನ್ನು ಆನಂದವನ್ನಾಗಿಸುವ ಶಕ್ತಿಯಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/139**

## ನಗುವಿನೊಂದಿಗೇ ಜೀವಿಸಿ

**– ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್, ಬೆಂಗಳೂರು**

### ಮುಗುಳ್ನಗುತ್ತಾ ಕಷ್ಟಗಳನ್ನು ಎದುರಿಸು

ಅಗ್ನಿಯ ಪ್ರಭಾವದಿಂದ, ಕಷ್ಟಗಳು ಮತ್ತು ಅಡೆತಡೆಗಳನ್ನು ನೀನು ನಗು ನಗುತ್ತಾ ಎದುರಿಸತೊಡಗುವುದೇ ನಿನ್ನ ಭಾವನೆಗಳು ಪರಿವರ್ತನೆಯಾಗಿವೆ ಎಂಬುದರ ಮತ್ತೊಂದು ಸಂಕೇತ ಅಥವಾ ಚಿಹ್ನೆ. ನಿನ್ನ ತಪ್ಪುಗಳ ಬಗ್ಗೆ ಗೋಳಾಡುತ್ತಾ ನೀನಿನ್ನು ಬೂದಿ ಬಳಿದುಕೊಂಡು ದುಃಖ ಸೂಚಕ ವಸ್ತ್ರ ಧರಿಸಿ ಕೂರುವದಿಲ್ಲ. ಜೊತೆಗೆ ನೀನು ಈ ಕ್ಷಣದಲ್ಲಿ ಕೆಳಗೆ ಬಿದ್ದಿರುವನೆಂದು ವಿಷಣ್ಣ ವದನನೂ ಸಹ ಆಗುವುದಿಲ್ಲ. ಒಂದು ಮುಗುಳ್ನಗೆಯಿಂದ ನೀನು ಖಿನ್ನತೆಯನ್ನು ದೂರ ಸರಿಸುವೆ. ಒಂದು ನೂರು ತಪ್ಪುಗಳು ಸಹ ನಿನಗೆ ಬೇಸರವನ್ನು ಉಂಟು ಮಾಡುವುದಿಲ್ಲ.

ನೀನು ತಪ್ಪು ಮಾಡಿರುವೆ ಎಂಬುದನ್ನು ಒಂದು ಮುಗುಳ್ನಗೆಯೊಂದಿಗೆ ಗುರುತಿಸುವೆ ಮುಂದೆ ಇನ್ನೆಂದೂ ಅದೇ ತಪ್ಪನ್ನು ಮಾಡುವುದಿಲ್ಲವೆಂದು ಸಹ ಒಂದು ಮುಗುಳ್ನಗೆಯೊಂದಿಗೆ ನಿರ್ಧರಿಸುವೆ. ದುಷ್ಟ ಶಕ್ತಿಗಳು ಎಲ್ಲಾ ಖಿನ್ನತೆ ಮತ್ತು ದುಃಖವನ್ನು ಉಂಟು ಮಾಡುವವು. ನಿನಗೆ ವ್ಯಾಕುಲತೆಯನ್ನು ಉಂಟು ಮಾಡುವದರಿಂದ ಅವುಗಳಿಗೆ ಅತ್ಯಧಿಕ ಸಂತೋಷವಾಗುವದು. ನಮ್ರತೆಯು ಒಂದು ಮನೋಭಾವನೆ ಮತ್ತು ಖಿನ್ನತೆಯು ಮತ್ತೊಂದು ವಿಭಿನ್ನವಾದ ಮನೋಭಾವನೆ. ಮೊದಲನೆಯದು ದಿವ್ಯ ಚಲನೆಯಾಗಿದ್ದು, ಎರಡನೆಯದು ದುಷ್ಟ ಶಕ್ತಿಗಳ ಒರಟಾದ ಹೊರ ಸೂಸುವಿಕೆಯಾಗಿದೆ. ಆದುದರಿಂದ, ಸಂತಸಭರಿತನಾಗಿ ನಿನ್ನ ಕಷ್ಟಗಳನ್ನು ಎದುರಿಸು, ಬದಲಾಯಿಸಲಾಗದ ಹರ್ಷದಿಂದ ಎಲ್ಲ ಕಡೆಯಿಂದ ಪರಿವರ್ತನೆಯ ಹಾದಿಗೆ ಅಡೆತಡೆಯನ್ನು ಉಂಟುಮಾಡುವ ತೊಂದರೆಯನ್ನು ವಿರೋಧಿಸು. ಆತನನ್ನು ನೋಡಿ ನಗೆ ಚೆಲ್ಲುವುದೇ ಶತ್ರುವನ್ನು ಕಿತ್ತೊಗೆಯಲು ಅತ್ಯುತ್ತಮವಾದ ಹಾದಿ! ನೀನು ಅನೇಕ ದಿನಗಳ ಕಾಲ ಹೋರಾಡಬಹುದು ಮತ್ತು ಜಗಳವಾಡಬಹುದು ಆದರೂ ಆತನು ಶಕ್ತಿಭರಿತನಾಗಿ ಎದುರು ನಿಲ್ಲುತ್ತಿದ್ದರೆ, ಆತನನ್ನು ನೋಡಿ ನಕ್ಕು ಬಿಡು, ತಕ್ಷಣವೇ ಆತನು ಓಡಿಹೋಗುವನು. ಒಂದು ಸ್ವಾಭಿಮಾನಯುಕ್ತ ನಗೆ ಮತ್ತು ದಿವ್ಯದಲ್ಲಿ ಶ್ರದ್ದೆಗಳೇ ಸಾಧ್ಯವಾಗಬಹುದಾದ ಧ್ವಂಸಕಾರಕ ಶಕ್ತಿ.– ಅದು ವೈರಿಯ ಮುಂಭಾಗವನ್ನು ಒಡೆದು ಛಿದ್ರಗೊಳಿಸುವುದು, ಅವನ ಸುತ್ತಲೂ ಅಲ್ಲೋಲ ಕಲ್ಲೋಲವನ್ನು ಉಂಟು ಮಾಡುವುದು ಮತ್ತು ವಿಜಯೋತ್ಸಾಹಿಯಾಗಿ ನಿನ್ನನ್ನು ಮುನ್ನಡೆಸುವದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/139**

## ಮುಗುಳ್ನಗೆಯಾಗಿ ಅಡ್ಡಿ ಆತಂಕಗಳನ್ನು ಬದಲಾಯಿಸುವದು

ಅಸಹ್ಯಕಾರಕವಾಗಿದೆ ಈ ಪ್ರಪಂಚ ಎಂಬುದನ್ನು ನಾವೆಲ್ಲರೂ ಒಪ್ಪಿಕೊಳ್ಳುವೆವು, ಅದು ಏನಾಗಿರಬೇಕೋ ಅದಾಗಿಲ್ಲ. ಹೀಗಾಗಿ ನಾವು ಈಗ ಮಾಡಬೇಕಾದ ಕೆಲಸವೇನೆಂದರೆ ಅದು ಬೇರೆಯ ತರಹ ಇರುವಂತೆ ಮಾಡುವ ಸಲುವಾಗಿ ಏನು ಮಾಡಬೇಕು ಎಂಬುದರ ಕಡೆ ಗಮನ ಹರಿಸಬೇಕು. ಮತ್ತು ನಾವು ಒಂದು ವಿಷಯವನ್ನು ಅರ್ಥ ಮಾಡಿಕೊಳ್ಳಬಲ್ಲೆವು, ಸ್ವತಃ ನಾವೇ ಅದಕ್ಕೆ ಅತ್ಯುತ್ತಮ ಉಪಕರಣಗಳು ಅಲ್ಲವೇ. (ನಾವು ಇದನ್ನು ಇನ್ನೂ ಸಂಪೂರ್ಣವಾಗಿ

ತಿಳಿದುಕೊಂಡಿಲ್ಲ,) ನೆರೆಹೊರೆಯವರ ಬಗ್ಗೆ ತಿಳಿದುಕೊಳ್ಳುವುದಕ್ಕಿಂತಲೂ ನಿನ್ನ ಬಗ್ಗೆ ನಿನಗೆ ಹೆಚ್ಚಿನ ಅರಿವು ಇರುವದಲ್ಲವೇ? – ಉದಾಹರಣೆಗೆ ನಕ್ಷತ್ರಗಳಲ್ಲಿ ಪ್ರಕಟವಾಗಿರುವ ಚೇತನಕ್ಕಿಂತಲೂ ಮಾನವ ಸತ್ತೆಯಲ್ಲಿ ಪ್ರಕಟವಾಗಿರುವ ಚೇತನದ ಬಗ್ಗೆ ನೀನು ಹೆಚ್ಚು ಉತ್ತಮವಾಗಿ ಅರ್ಥಮಾಡಿಕೊಳ್ಳಬಲ್ಲೆ. ಆದುದರಿಂದ ನೀನು ಸ್ವಲ್ಪ ಹಿಂಜರಿತದ ನಂತರ ಹೀಗೆ ಹೇಳುವೆ "ಆದರೇನು ನಾನೇ ಅದಕ್ಕೆ ಅತ್ಯುತ್ತಮ ಉಪಕರಣ. ನಾನಾರೆಂದು ನನಗೆ ಅತ್ಯುತ್ತಮವಾಗಿ ತಿಳಿದಿಲ್ಲ. ಆದರೆ ಇಂತಹ ವಸ್ತುಗಳ ಸಂಗ್ರಹವಾದ ನಾನು, ಬಹುಶಃ ಇದೇ ನನ್ನ ಕೆಲಸವಾಗಿದೆ, ನನ್ನ ಭಾಗದ ಕೆಲಸವು ಇದೇ ಆಗಿದೆ ಮತ್ತು ನನ್ನಿಂದ ಸಾಧ್ಯವಾದಷ್ಟು ಉತ್ತಮವಾಗಿ ನಾನು ಇದನ್ನು ಮಾಡಿದರೆ, ಬಹುಶಃ ನಾನು ಮಾಡಬಹುದಾದ ಅತ್ಯುತ್ತಮ ಕೆಲಸವೇ ಅದಾಗುವುದು." ಇದೇ ಬಹಳ ದೊಡ್ಡ ಪ್ರಾರಂಭ. ನಿಜಕ್ಕೂ ಬಹಳ ದೊಡ್ಡದು. ಅದು ಅಗಾಧವಾದದೇನೂ ಅಲ್ಲ, ನಿನ್ನ ಸಾಧ್ಯತೆಗಳ ಪರಿಮಿತಿಯನ್ನು ಮೀರಿದುದೂ ಅಲ್ಲ. ನೀನು ನಿನ್ನ ಕೆಲಸವನ್ನು ಹೊಂದಿರುವೆ, ನೀನು ಅದನ್ನು ಯಾವಾಗಲೂ ನೆರವೇರಿಸಬಹುದಾಗಿದೆ – ನಿನ್ನ ಸಾಮರ್ಥ್ಯಕ್ಕೆ ಅನುಗುಣವಾಗಿರುವ ಕಾರ್ಯಕ್ಷೇತ್ರ ಆದರೆ ಸಾಕಷ್ಟು ವೈವಿಧ್ಯಮಯ, ಸಂಕೀರ್ಣ, ವಿಸ್ತೃತ, ಆಸಕ್ತಿದಾಯಕವಾಗಿರಲು ಸಾಕಷ್ಟು ಆಳವಾಗಿಯೂ ಇದೆ. ಮತ್ತು ಈ ಅಜ್ಞಾತ ಪ್ರಪಂಚವನ್ನು ನೀನು ಪರಿಶೋಧಿಸು.

ಅನೇಕ ಜನರು ನಿನಗೆ ಈ ರೀತಿ ಹೇಳುತ್ತಾರೆ, "ಆದರೆ ಇದು ಅಹಂಕಾರ!" ನೀನು ಅಹಂಕಾರಯುಕ್ತ ರೀತಿಯಲ್ಲಿ ಅದನ್ನು ಮಾಡಿದರೆ ಅದು ಅಹಂಕಾರ, ಅಂದರೆ ನಿನ್ನ ಸ್ವಂತ ಲಾಭಕ್ಕಾಗಿ, ನೀನು ಶಕ್ತಿಗಳನ್ನು ಪಡೆಯಲು ಪ್ರಯತ್ನಿಸಿದರೆ, ಇತರರ ಮೇಲೆ ಪ್ರಭಾವ ಬೀರುವಷ್ಟು ಶಕ್ತಿವಂತನಾಗಬೇಕೆಂದು ಬಯಸಿದರೆ ಅಥವಾ ನಿನಗೆ ಅನುಕೂಲಕರ ಜೀವನವನ್ನು ಸಾಗಿಸಲು ಅವಶ್ಯಕವಾದ ಸಾಧನವನ್ನು ಅರಸಿದರೆ ಅದು ಅಹಂಕಾರವಾಗುವದು. ಸಹಜವಾಗಿ ನೀನು ಈ ಮನೋಭಾವದಿಂದ ಕೆಲಸ ಮಾಡಿದರೆ ಅದು ಅಹಂಕಾರವಾಗುವದು. ಆದರೆ ಇದರ ರೀತಿ ಹೇಗಿರುವದೆಂದರೆ, ನೀನು ಇದರಿಂದ ಏನನ್ನೂ ಸಾಧಿಸಲಾಗುವದಿಲ್ಲ! ನೀನು ನಿನ್ನನ್ನೇ ಮೋಸ ಪಡಿಸತೊಡಗುವೆ, ನೀನು ಹೆಚ್ಚಾದ ಭ್ರಮೆಗಳಲ್ಲಿ ಜೀವಿಸುವೆ ಮತ್ತು ನೀನು ಇನ್ನೂ ಹೆಚ್ಚು ಹೆಚ್ಚಾದ ಅಸ್ಪಷ್ಟತೆಯೊಳಗೆ ಬೀಳುವೆ. ಪರಿಣಾಮವಾಗಿ, ವಿಷಯಗಳು ನಾವು ಯೋಚಿಸುವುದಕ್ಕಿಂತಲೂ ಹೆಚ್ಚು

ವ್ಯವಸ್ಥಿತವಾಗಿರುವವು, ನೀನು ನಿನ್ನ ಕೆಲಸವನ್ನು ಅಹಂಕಾರಭರಿತನಾಗಿ ಮಾಡಿದರೆ, (ನಮಗೆ ಎಟುಕುವಂತೆಯೇ ನಮ್ಮ ಕಾರ್ಯಕ್ಷೇತ್ರವು ಯಾವಾಗಲೂ ಇರುವುದು ಎಂದು ನಾವು ಹೇಳಿದ್ದೇವೆ), ಅದರಿಂದ ಏನೂ ಪ್ರಯೋಜನವಿರುವದಿಲ್ಲ, ಆದುದರಿಂದ ಅವಶ್ಯಕವಾದ ನಿಬಂಧನೆ ಏನೆಂದರೆ ನಾವು ಅದನ್ನು ದಿವ್ಯ ಕಾರ್ಯದಲ್ಲಿನ ಸಾಕ್ಷಾತ್ಕಾರಕ್ಕಾಗಿ ಅಭೀಪ್ಸೆಯಲ್ಲಿ ಅತ್ಯಧಿಕ ಪ್ರಾಮಾಣಿಕವಾಗಿ ಮಾಡಬೇಕು. ಆದುದರಿಂದ ನೀನು ಅದನ್ನು ಆ ರೀತಿ ಪ್ರಾರಂಭಿಸಿದರೆ, ಬಹಳ ದೂರ ಸಾಗಿ ಹೋಗಬೇಕಾಗಿದ್ದರೂ, ಆಯಾಸವಿಲ್ಲದೆ ನಿನ್ನ ಕುತೂಹಲಭರಿತ ಪ್ರಯಾಣವನ್ನು ಮುಂದುವರಿಸುವೆ. ಆದರೆ ನೀನು ಅದನ್ನು ತೀವ್ರ ಸಂಕಲ್ಪದೊಂದಿಗೆ ಮಾಡಬೇಕು, ಎಡೆಬಿಡದೆ ಮುಂದುವರಿಯಬೇಕು. ತಪ್ಪುಗಳನ್ನು ನೋಡಿ ನಗುವ ಮತ್ತು ಕಷ್ಟಗಳನ್ನು ಕಂಡು ಮುಗುಳ್ನಗುವ ತೊರೆಯಲಾಗದ ಸಂತಸದೊಂದಿಗೆ ಮಾಡಬೇಕು. ನಂತರ ಎಲ್ಲವೂ ಸಮರ್ಪಕವಾಗಿ ಮುಂದುವರೆಯುವುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/253–254**

## ಮೇಧಾವಿತನದ ಮುಗುಳ್ನಗೆ

ನಾವು ನಮ್ಮಲ್ಲಿ ಅನೇಕ ಅಡಗಿರುವ ಗಂಟುಗಳನ್ನು ಕಾಣುವೆವು, ಪ್ರಾರಂಭದಲ್ಲಿ ಕಾಣದಿರುವ ಸಣ್ಣ ಸಣ್ಣ ವಿಷಯಗಳು; ನಾವು ಒಂದು ವಿಧವಾದ ಆಂತರಿಕ ಹುಡುಕಾಟವನ್ನು ಕೈಗೊಳ್ಳುವೆವು. ಸಣ್ಣ ಅಂಧಕಾರಭರಿತ ಮೂಲೆಗಳನ್ನು ಬೇಟೆಯಾಡುವೆವು ಮತ್ತು ನಮಗೆ ನಾವೇ ಹೀಗೆ ಹೇಳಿಕೊಳ್ಳುವೆವು, “ಏನು, ನಾನು ಹಾಗೆ ಇದ್ದೆನೇ! ಇದು ನನ್ನ ಒಳಗೆ ಇದ್ದಿತು, ನಾನು ಈ ಸಣ್ಣ ವಿಷಯವನ್ನು ನನ್ನ ಒಳಗೆ ಹುದುಗಿಸಿಕೊಂಡಿದ್ದೆ!” – ಕೆಲವೊಮ್ಮೆ ಎಷ್ಟೊಂದು ಜಿಪುಣತನ, ಎಷ್ಟೊಂದು ಕೀಳು ಬುದ್ಧಿ, ಎಷ್ಟೊಂದು ದುಷ್ಟತೆ. ಮತ್ತು ಒಮ್ಮೆ ನಾವು ಅದನ್ನು ಶೋಧಿಸಿದೆವೆಂದರೆ ಎಷ್ಟೊಂದು ಅದ್ಭುತ! ನಾವು ಅದರ ಮೇಲೆ ಬೆಳಕು ಚೆಲ್ಲುವೆವು, ಅದು ಕಾಣದಾಗುವುದು ಮತ್ತು ನಿನ್ನನ್ನು ಹಿಂದೆ ಅಷ್ಟೊಂದು ದುಃಖದ ಕಡೆ ನೂಕುತ್ತಿದ್ದ ಪ್ರತಿಕ್ರಿಯೆಗಳು ಇರುವುದಿಲ್ಲ. ನೀನು ಹಿಂದೆ ಹೇಳುತ್ತಿದ್ದ: “ಓ ನಾನು ಅಲ್ಲಿಗೆ ಎಂದೂ ತಲುಪುವುದಿಲ್ಲ” ಎಂಬ ಪ್ರಲಾಪಗಳು ಸಹ ಇರುವುದಿಲ್ಲ. ಉದಾಹರಣೆಗೆ, ನೀವು ಒಂದು ಸಂಕಲ್ಪವನ್ನು ಕೈಗೊಳ್ಳುವಿರಿ (ಗೋಚರಿಸುವಿಕೆಗೆ ಬಹಳ ಸರಳವೆನಿಸುವುದು): ನಾನು ಇನ್ನೆಂದೂ ಸುಳ್ಳು ಹೇಳುವುದಿಲ್ಲ.”

ಇದ್ದಕ್ಕಿದ್ದಂತೆ ಏಕೆ ಮತ್ತು ಹೇಗೆ ಎಂಬ ಪರಿಜ್ಞಾನವೇ ಇಲ್ಲದೆ, ತನ್ನಂತೆ ತಾನೇ ಸುಳ್ಳು ಮೇಲೇರಿಬರುವುದು ಮತ್ತು ನೀನು ಅದನ್ನು ಉಚ್ಚರಿಸಿದ ಮೇಲೆ ಗಮನಿಸುವೆ: ನಾನು ಈಗ ತಾನೇ ಹೇಳಿದುದು ಸರಿಯಲ್ಲ – ಅದು ಸಮರ್ಪಕವಾಗಿಲ್ಲ. "ನಾನು ನಿಜಕ್ಕೂ ಹೇಳಬೇಕೆಂದುಕೊಂಡಿದ್ದೇ ಬೇರೆ." ಆದುದರಿಂದ ನೀನು ಹುಡುಕತೊಡಗುವೆ, ಹುಡುಕಾಟ... "ಅದು ಹೇಗೆ ಆಯಿತು? ನಾನು ಆ ರೀತಿ ಹೇಗೆ ಯೋಚಿಸಿದೆ ಮತ್ತು ಮಾತನಾಡಿದೆ? ನನ್ನೊಳಗೆ ಯಾರು ಮಾತನಾಡಿದರು, ನನ್ನನ್ನು ಯಾರು ನೂಕಿದರು?..." ನಿನಗೆ ನೀನು ಒಂದು ತೃಪ್ತಿಕರವಾದ ಉತ್ತರವನ್ನು ನೀಡಿ ಹೀಗೆ ಹೇಳಬಹುದು, "ಅದು ಹೊರಗಿಂದ ಬಂದಿತು" ಅಥವಾ "ಅದು ಅಪ್ರಜ್ಞಾವಸ್ಥೆಯ ಕ್ಷಣವಾಗಿದ್ದಿತು". ಮತ್ತು ನಂತರದಲ್ಲಿ ಅದರ ಬಗ್ಗೆ ಯೋಚಿಸುವುದಿಲ್ಲ. ಮತ್ತು ಮುಂದಿನ ಸಲ, ಅದು ಪುನಃ ಪ್ರಾರಂಭವಾಗುವುದು, ಅದರ ಬದಲಾಗಿ, ನೀನು ಈ ರೀತಿ ಹುಡುಕುವೆ: "ಸುಳ್ಳು ಹೇಳುವವನ ಉದ್ದೇಶ ಏನಾಗಿರಬಹುದು? "ಮತ್ತು ಸಾಕಷ್ಟು ಶೋಧನೆಯ ನಂತರ ಇದ್ದಕ್ಕಿದ್ದಂತೆ ಒಂದು ಮೂಲೆಯಲ್ಲಿ ತನ್ನನ್ನು ತಾನು ಸಮರ್ಥಿಸಿ–ಕೊಳ್ಳುತ್ತಿರುವದೇನನ್ನೋ ನೀನು ಕಾಣುವೆ. ಅದು ಮುಂದಕ್ಕೆ ಬರುವುದು ಅಥವಾ ತನ್ನ ದೃಷ್ಟಿಕೋನವನ್ನು ಅದು ಸಮರ್ಥಿಸಿಕೊಳ್ಳುವುದು (ಅದು ಏನೇ ಆಗಿರಬಹುದು, ಅನೇಕಾನೇಕ ಕಾರಣಗಳು ಇವೆ), ಅದು ನಿಜವಾಗಿ ಏನಾಗಿರುವುದೊ ಅದಲ್ಲದೆ ಸ್ವಲ್ಪ ಬೇರೆಯದೇ ಆದ ರೀತಿಯಲ್ಲಿ ಕಾಣಿಸಿಕೊಳ್ಳುವುದು. ಅದರಿಂದ ಜನರು ನಿನ್ನ ಬಗ್ಗೆ ಉತ್ತಮವಾದ ಅಭಿಪ್ರಾಯವನ್ನು ಹೊಂದುವರು ಮತ್ತು ನೀನು ಓರ್ವ ಗಣ್ಯ ವ್ಯಕ್ತಿ ಎಂದು ಭಾವಿಸುವರು... ಅದೇ ನಿನ್ನೊಳಗೆ ಮಾತನಾಡಿದುದು – ನಿನ್ನ ಕ್ರಿಯಾಶೀಲ ಚೇತನವಲ್ಲ, ಆದರೆ ನಿನ್ನೊಳಗೆ ಇದ್ದು ಚೇತನವನ್ನು ಮುಂದೆ ನೂಕಿದುದು. ನೀನು ಜಾಗರೂಕನಾಗಿ ಇರದೆ ಇದ್ದಾಗ, ಅದು ನಿನ್ನ ಬಾಯಿ, ನಿನ್ನ ನಾಲಿಗೆಯನ್ನು ಉಪಯೋಗಿಸಿಕೊಂಡಿತು! ಅಲ್ಲಿಯೇ ಇದೆ ಅದರ ಇರವು! ಸುಳ್ಳು ಹೊರಗೆ ಬಂದಿತು. ನಾನು ನಿನಗೆ ಈ ಉದಾಹರಣೆಯನ್ನು ಕೊಡುತ್ತಿರುವೆ – ಇತರ ಲಕ್ಷಾಂತರ ಉದಾಹರಣೆಗಳು ಇವೆ. ಮತ್ತು ಅದು ತುಂಬಾ ಕುತೂಹಲಕಾರಿಯಾಗಿದೆ. ಇದನ್ನು ಆಂತರ್ಯದಲ್ಲಿ ಗುರುತಿಸಿ "ಇದು ಬದಲಾಗಬೇಕು" ಎಂದು ಪ್ರಾಮಾಣಿಕವಾಗಿ ತನಗೆ ತಾನು ಹೇಳಿಕೊಳ್ಳುವವರೆಗೂ ಈ ರೀತಿ ಮುಂದುವರಿಯುವುದು. ಈ ಬದಲಾವಣೆಯು ಉಂಟಾದ ಮೇಲೆ ಒಂದು ಆಂತರಿಕ ಸ್ಪಷ್ಟತೆಯನ್ನು ಪಡೆಯುವೆವು, ನಿಧಾನವಾಗಿ ಇತರರಲ್ಲಿ

ಏನಾಗುತ್ತಿವೆ ಎಂಬುದರ ಬಗ್ಗೆ ಜಾಗೃತವಾಗುವೆವು ಮತ್ತು ಅವರು ಯಾವ ರೀತಿ ಇರಬೇಕೋ ಆ ರೀತಿ ಇರದೆ ಇದ್ದಾಗ ಕೋಪಗೊಳ್ಳುವ ಬದಲು ಯಾವ ರೀತಿ ಸಂದರ್ಭಗಳು ಸೃಷ್ಟಿಯಾಗುವವೆಂಬುದನ್ನು ನಾವು ಅರಿಯುವೆವು ಮತ್ತು ಆತನು ಹೀಗೇಕೆ ಇರುವನೆಂಬುದನ್ನೂ ಸಹ ನಾವು ಅರಿಯುವೆವು ಮತ್ತು ಪ್ರತಿಕ್ರಿಯೆಗಳು ಹೇಗೆ ಉಂಟಾಗುವವೆಂಬುದನ್ನೂ ಸಹ ತಿಳಿಯುವೆವು... ನಂತರ ಅರಿವು ಮೂಡಿದ ಮೇಲೆ, ನಾವು ಮುಗುಳ್ನಗುವೆವು. ಮತ್ತು ಅದರ ಬಗ್ಗೆ ತೀಕ್ಷ್ಣವಾದ ತೀರ್ಮಾನವನ್ನೂ ಕೈಗೊಳ್ಳುವದಿಲ್ಲ. ನಮ್ಮೊಳಗೆ ಇರುವ ಅಥವಾ ಇತರರಲ್ಲಿ ಇರುವ ಕಷ್ಟವನ್ನು, ಅದು ಯಾವುದೇ ಕೇಂದ್ರದಲ್ಲಿ ಪ್ರಕಟವಾಗಿದ್ದರೂ, ಅದನ್ನು ಪರಿವರ್ತನೆಗೊಳಿಸೆಂದು ಬೇಡಿಕೊಂಡು ದಿವ್ಯ ಚೇತನಕ್ಕೆ ಅರ್ಪಿಸಲಾಗುವುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/336–337**

**ಮರಣವನ್ನು ನೋಡಿ ಮುಗುಳ್ನಗುವದು**

ಕೆಲವರಿಗೆ ತಮ್ಮ ದೇಹದ ಮೇಲೆ ಮನಸ್ಸಿನ ನಿಯಂತ್ರಣ ಎಷ್ಟರಮಟ್ಟಿಗೆ ಇರುವದೆಂದರೆ ಅವರಿಗೆ ಏನು ಅನಿಸುವುದಿಲ್ಲ. ಕೆಲವು ನಿರ್ದಿಷ್ಟ ಯೋಗಿಗಳ ಈ ರೀತಿಯ ಬಗ್ಗೆ ನಾನು ನಿನಗೆ ಈಗಾಗಲೇ ವಿವರಿಸಿದ್ದೆನು. ಅವರ ಮೇಲೆ ಹೇರಲಾದ ವೇದನೆಯು ಅವರಿಗೆ ತಮ್ಮ ಗುರಿಯನ್ನು ತಲುಪಲು ಅಂದರೆ ಸಾಕ್ಷಾತ್ಕಾರವನ್ನು ಪಡೆಯಲು ನೆರವಾಗುವ ಒಂದು ಹೆಜ್ಜೆಯೆಂದು ಅವರು ಭಾವಿಸಿದಾಗ ಅಂದರೆ ದಿವ್ಯದೊಂದಿಗೆ ಸಮ್ಮಿಲನವಾಗಲು ಇದರಿಂದ ಒಂದೇ ಕ್ಷಣದಲ್ಲಿ ಹಲವಾರು ಹಂತಗಳನ್ನು ಒಮ್ಮೆಲೇ ದಾಟಿ ಹೋಗಬಹುದು ಎನಿಸಿದರೆ ಅವರಿಗೆ ನೋವಿನ ಅನುಭವವೇ ಉಂಟಾಗುವುದಿಲ್ಲ. ಅವರ ದೇಹದೊಳಗೆ ಮಾನಸಿಕ ಕಲ್ಪನೆಯಿಂದ ವಿದ್ಯುತ್ಪ್ರವಾಹವಾಗಿದೆಯೇನೋ ಎಂಬಂತೆ ಆಗುವದು. ಈ ರೀತಿ ಅನೇಕ ಸಲ ಸಂಭವಿಸಿದೆ, ನಿಜವಾದ ಉತ್ಸಾಹವನ್ನು ಹೊಂದಿರುವವರಿಗೆ ಇದು ಸಾಮಾನ್ಯ ಅನುಭವವಾಗಿದೆ. ಜೊತೆಗೆ ಯಾರಾದರೂ ಏನಾದರೊಂದು ಕಾರಣಕ್ಕಾಗಿ ತಮ್ಮ ದೇಹವನ್ನು ತೊರೆದು ಹೊಸದನ್ನು ಸ್ವೀಕರಿಸಬೇಕಾದಾಗ, ಅವರು ತಮ್ಮ ಮರಣವು ಬೇಸರದಿಂದ ತುಂಬಿದ ಸೋಲಾಗುವ ಬದಲು ಅದು ಮಹೋನ್ನತ, ಸಂತಸಭರಿತ ಮತ್ತು ಉತ್ಸಾಹಭರಿತವಾಗುವಂತೆ ಮಾಡುವುದು ಉತ್ತಮವಲ್ಲವೇ? ಯಾರು ಅಂಟಿಕೊಂಡೇ ಇರುವರೋ, ಅಂತ್ಯವನ್ನು ಒಂದೆರಡು

ನಿಮಿಷಗಳು ಸಹ ಮುಂದೂಡಲು ಎಲ್ಲಾ ಪ್ರಯತ್ನಗಳನ್ನು ಮಾಡುವವರು ಮತ್ತು ಭಯಾನಕವಾದ ವೇದನೆಯ ಉದಾಹರಣೆಗಳನ್ನು ನೀಡುವವರು ತಮ್ಮ ಜೀವದ ಬಗ್ಗೆ ಅವರಿಗಿರುವ ಅಜ್ಞಾನವನ್ನು ತೋರ್ಪಡಿಸುತ್ತಿರುವರು ಎಂದು ಮಾತ್ರ ಹೇಳಬಹುದು... ನಿಜಕ್ಕೂ ಬಹುಶಃ ಅದೊಂದು ಉಪಕರಣ ಅಷ್ಟೇ ಅಲ್ಲವೇ? ನಾವು ಈ ಅಪಘಾತವನ್ನು ಒಂದು ಉಪಕರಣವಾಗಿ ಪರಿವರ್ತಿಸಬಹುದು, ಯಾರಾದರೂ ಪ್ರಜ್ಞಾಭರಿತರಾಗಿದ್ದರೆ ಅದನ್ನು ಒಂದು ಸುಂದರ ವಸ್ತುವಾಗಿಸಬಹುದು, ಬಹಳ ಸುಂದರವಾದ ವಸ್ತು, ಇತರ ವಸ್ತುಗಳ ರೀತಿಯಲ್ಲಿ, ಮತ್ತು ಗಮನಿಸು, ಅದರ ಬಗ್ಗೆ ಹೆದರಿಕೆಯನ್ನು ಹೊಂದಿಲ್ಲದಿರುವವರು, ಗಾಭರಿಯಾಗಿಲ್ಲದಿರುವವರು, ಅದರ ಬಗ್ಗೆ ಯಾವಾಗಲೂ ಯೋಚಿಸದಿರುವವರಿಗೆ ಸಾಯಲು ಯಾವುದೇ ಭಯವಿರುವುದಿಲ್ಲ. ಅವರು ಎದುರಿಸುತ್ತಿರುವ, ಈ ಭೀತಿಯು ಯಾರ ಮನಸ್ಸಿನಲ್ಲಿ ಯಾವಾಗಲೂ ಒತ್ತಡವನ್ನು ಹೇರಿ ಅದರಿಂದ ತಪ್ಪಿಸಿಕೊಳ್ಳಬೇಕೆಂದು ಬಯಸುವದಿಲ್ಲವೋ ಮತ್ತು ಯಾರು ಇದನ್ನು ತಮ್ಮಿಂದ ಆದಷ್ಟು ದೂರವಿಡಬೇಕೆಂದು ಅಪೇಕ್ಷಿಸುವರೋ ಅಂತಹವರಿಗೆ ಹೆದರಿಕೆ ಇರುವುದಿಲ್ಲ. ಇವರು ಸಮಯ ಬಂದಾಗ, ತಲೆ ಎತ್ತಿ ನಗು ನಗುತ್ತ "ನಾನು ಇಲ್ಲಿದ್ದೇನೆ" ಎಂದು ಹೇಳಬಲ್ಲ ಶಕ್ತಿಯನ್ನು ಹೊಂದಿರುವರು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/354**

**ಹಿಂದಕ್ಕೆ ಸರಿದು ಮುಗುಳ್ನಗು**

ನೀನು ತಪ್ಪು ಮಾಡಿರುವೆ ಎಂಬ ಗ್ರಹಿಕೆಯು ನಿನಗೆ ಯಾವಾಗಲಾದರೂ ಸ್ವಾಭಾವಿಕವಾಗಿ – ಪ್ರಯತ್ನವಿಲ್ಲದೆ ಅಸಂಕಲ್ಪಿತವಾಗಿ – ಉಂಟಾಗಿದೆಯೇ? ನಿನ್ನನ್ನು ಬಡಿದೆಬ್ಬಿಸುವ ಬಾಹ್ಯ ಪ್ರತಿಕ್ರಿಯೆಯ ಬಗ್ಗೆ ನಾನು ಮಾತನಾಡುವುದಿಲ್ಲ. ಅಂದರೆ ನೀನು ಇದ್ದಕ್ಕಿದ್ದಂತೆ ಜಾಗೃತನಾಗಿ "ಓ ದೇವರೇ, ನಾನೇನು ಮಾಡಿದೆ" ಎಂದು ಹೇಳುವುದರ ಬಗ್ಗೆ ನಾನು ಮಾತನಾಡುತ್ತಿಲ್ಲ. ನೀನು ಏನಾದರೂ ಮಾಡಿದಾಗ, ನಿನಗೆ ಯಾವುದಾದರು ಭಾವನೆಯು ಉಂಟಾದಾಗ, ನೀನು ಏನಾದರೂ ಹೇಳಿದಾಗ, – ಉದಾಹರಣೆಗೆ ಪ್ರತಿದಿನ ನಾನು ಕೇಳಿಸಿಕೊಳ್ಳುವ 10–12 ಉಪಯೋಗರಹಿತ ಜಗಳಗಳು (ಕೊನೆಯ ಪಕ್ಷ) (ಅಂತಹ ಚಿಕ್ಕ ವಿಷಯಗಳಿಗೆ ಈ ಬುದ್ಧಿವಂತ ಜನರು ಹೀಗೆ ಜಗಳವಾಡುವರಲ್ಲ ಎಂದು

ಆಶ್ಚರ್ಯವಾಗುವದು) ಹೆಡ್ಡತನ, ಸರಿ, ಹೇಳಬಾರದಂತಹ ಮಾತುಗಳನ್ನು ನೀನು ಉಚ್ಚರಿಸಿದ್ದರೆ, ಅಂದರೆ ತಿಳಿಗೇಡಿತನದ ಮಾತುಗಳು ನೀನು ನಿಜಕ್ಕೂ ಪೆದ್ದ ಎಂಬುದು ಗೊತ್ತಾಗುತ್ತದೆಯೇ – ಮತ್ತಷ್ಟು ಕೆಟ್ಟದಾಗಿ ಹೇಳಬಾರದೆಂದು ಹೀಗೆ ಹೇಳುತ್ತಿದ್ದೇನೆ – ಅಸಂಕಲ್ಪಿತವಾಗಿ?.... ನೀನು ಯಾವಾಗಲೂ ಒಂದು ಕಾರಣವನ್ನು ಹೇಳುವೆ. ಇನ್ನೊಬ್ಬರು ತಪ್ಪು ಮಾಡುತ್ತಿರುವರು ಎಂಬ ಭಾವನೆ ನಿನ್ನೊಳಗೆ ಯಾವಾಗಲೂ ಇರುವದು, ನೀನು ಮಾಡುತ್ತಿರುವುದು ಸಮರ್ಪಕವಾಗಿದೆ ಮತ್ತು ಆತನಿಗೆ ಆತನ ತಪ್ಪನ್ನು ತಿಳಿಸಿಕೊಡಬೇಕು, ಅಲ್ಲವೇ? ಇಲ್ಲದೆ ಹೋದರೆ ಆತನಿಗೆ ಗೊತ್ತಾಗುವುದೇ ಇಲ್ಲ! ಎಂದು ಭಾವಿಸುವೆ ನಾನು ಇದನ್ನು ಸ್ವಲ್ಪ ಎದ್ದುಕಾಣುವ ರೀತಿಯಲ್ಲಿ ಹೇಳುತ್ತಿರುವೆ, ಸೂಕ್ಷ್ಮ ದರ್ಶಕದ ಕೆಳಗೆ ನೋಡುತ್ತಿರುವೆಯೇನೋ ಸ್ವಲ್ಪ ದೊಡ್ಡದಾಗಿ ಕಾಣಿಸಲಿ ಎಂಬಂತೆ. ಆದರೆ ಅದು ಹಾಗೆ ಇರುವುದು. ಹಾಗೆ ಅದು ಇರುವವರೆಗೂ ನೀನು ನೈಜ ಚೇತನದಿಂದ ಲಕ್ಷಾಂತರ ಮೈಲಿ ದೂರದಲ್ಲಿರುವೆ. ನಿನಗೆ ತತ್‌ಕ್ಷಣದಲ್ಲಿ ಸಹಜವಾಗಿ ಹಿಂದೆ ಸರಿಯಲು ಸಾಧ್ಯವಾಗದಿದ್ದರೆ, ಇನ್ನೊಬ್ಬ ಮಾನವನ ಜಾಗದಲ್ಲಿ ನಿನ್ನನ್ನು ನಿಲ್ಲಿಸಿ ಆತನಿಗೆ ಈ ಭಾವನೆ ಏಕೆ ಬರುತ್ತಿದೆಯೆಂದು ಅರ್ಥ ಮಾಡಿಕೋ, ನಿನ್ನ ದೌರ್ಬಲ್ಯವನ್ನು ಸಹ ಗಮನಿಸು, ಎರಡನ್ನೂ ಹೋಲಿಸಿ ಒಂದು ನಿರ್ಧಾರವನ್ನು ಮಾಡು: "ಓ ಅದಕ್ಕೇ, ಅದೇ ಸತ್ಯ ಸಂಗತಿ". ಅದರ ಅರ್ಥ ನೀನು ಇನ್ನು ಬಹಳ ಹಿಂದೆ ಇರುವೆ ನಿನಗೆ ಅದನ್ನು ಸ್ವಾಭಾವಿಕವಾಗಿ ಮಾಡಲು ಸಾಧ್ಯವಾದರೆ, ಅದು ಸಹಜ ಚಲನೆಯಾಗಿದ್ದರೆ, ಅದು ಹೆಚ್ಚು ಸಮಯವನ್ನು ತೆಗೆದುಕೊಳ್ಳದಿದ್ದರೆ ನೀನು ಸ್ವಲ್ಪ ಪ್ರಗತಿಯನ್ನು ಹೊಂದಿರುವೆ ಎಂದು ತೃಪ್ತಿಪಡಬಹುದು... ದಿನದಲ್ಲಿ ಈ ರೀತಿ ಅನುಭವ ನಿನಗೆ ಎಷ್ಟು ಸಲ ಆಗುವುದು? ನೀನು ಬಾಹ್ಯದಲ್ಲಿ ಜಗಳವಾಡದಿದ್ದರೂ, ನಿನ್ನ ತಲೆಯಲ್ಲಿ ಈ ಪ್ರತಿಕ್ರಿಯೆ ಎಷ್ಟು ಸಲ ಇರುವದು? ಅಲ್ಲಿ, ತಲೆಯಲ್ಲಿ ಪುಟಿದೇಳುವಂತಹುದು, ಬದಲಾಗಿ ಘಟನೆಯು ಸಂಭವಿಸುತ್ತಿರುವಾಗ, ಅದನ್ನು ನೋಡುತ್ತಿರುವಾಗ, ಸಮನ್ವಯತೆಯ ಜ್ಞಾನವು ಇವೆಲ್ಲ ಏಕೆ ಮತ್ತು ಹೇಗೆ ಸಂಭವಿಸುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳುವರು – ಯಾವಾಗಲೂ ಇದರ ಬಗ್ಗೆ ತೀವ್ರವಾದ ಪ್ರತಿಕ್ರಿಯೆಯನ್ನು ತೋರದೆ ಮುಗುಳ್ನಗೆಯೊಂದಿಗೆ ಅವೈಯಕ್ತಿಕವಾಗಿ ಘಟನೆಯನ್ನು ಅಂತ್ಯಗೊಳಿಸುವರು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/63–64**

**ವೈರಿಯತ್ತ ಮುಗುಳ್ನಗೆ ಬೀರುವುದು**

*ನೀನು ಇಲ್ಲಿ ಹೇಳಿರುವೆ: "ವೈರಿಯ ಕಡೆ ಮುಗುಳ್ನಗೆ ಬೀರುವದೆಂದರೆ ಆತನ ಅಸ್ತ್ರಗಳನ್ನು ಕೆಳಗೆ ಹಾಕಿದಂತೆ." "ಮುಗುಳ್ನಗು" ಎಂದರೇನು? ವೈರಿಯ ಕಡೆ ನೋಡಿ ಮುಗುಳ್ನಗೆ ಬೀರಬಾರದು!*

ಯಾರಾದರೂ ಹಾಗೆ ಮಾಡಬಾರದೇ!... ನಾನು ಇಲ್ಲಿ ಹೇಳಿರುವುದು ಒಂದು ಅನುಭವ. ಸಾಮಾನ್ಯ ನುಡಿಗಳಲ್ಲಿ ನಾನು ವ್ಯಕ್ತಪಡಿಸಿರುವ ಒಂದು ಅನುಭವದ ದಾಖಲೆ. ಆದರೆ, ಒಂದು ನಿರ್ದಿಷ್ಟ ಕ್ಷಣದಲ್ಲಿ, ಅತ್ಯಂತ ಅಂಧಕಾರಯುಕ್ತ ಉದ್ದೇಶದಿಂದ ಯಾರಾದರೂ ಬಂದರೆ, ನಾವು ಆತನ ಕಡೆ ಮುಗುಳ್ನಗೆ ಬೀರಿದರೆ, ಆತನ ಜಂಘಾ ಬಲವೇ ಉಡುಗಿಹೋಗುವುದು. ಆತನಿಗೆ ನಂತರದಲ್ಲಿ ಏನನ್ನೂ ಮಾಡಲು ಸಾಧ್ಯವಾಗುವುದಿಲ್ಲ. ಆದರೆ ನಾವು ಪ್ರಾಮಾಣಿಕವಾದ ಮುಗುಳ್ನಗೆಯನ್ನು ಬೀರಬೇಕು. ನಾವು ಬರೀ ಹಲ್ಲು ಕಿರಿಯಬಾರದು ಅಥವಾ ಕೃತಕ ನಗೆ ಬೀರಬಾರದು ಮತ್ತು ಬೇರೇನೋ ಯೋಚಿಸುತ್ತಾ... (ನಗೆ) ನಾನು ಪೂರ್ಣವಾದ ಅರ್ಥದಲ್ಲಿ 'ಮುಗುಳ್ನಗೆ'ಯನ್ನು ಸೂಚಿಸುತ್ತಿರುವೆನು. ಅಂದರೆ, ನಾವು ಸಾಕಷ್ಟು ನಮ್ಮ ಒಡೆಯರಾಗಿದ್ದರೆ ಮತ್ತು ವಿಷಯಗಳಿಗಿಂತ ಮೇಲೆ ಉನ್ನತ ಸ್ಥಾನದಲ್ಲಿದ್ದರೆ, ಮೇಲಿನಿಂದ ದರ್ಶಿಸಬಲ್ಲ ಉನ್ನತ ಚೇತನದಲ್ಲಿ ಇದ್ದರೆ – ಸಾಮಾನ್ಯ ಮಾನವ ಚೇತನಕ್ಕೆ ಅತ್ಯಂತ ನಾಟಕೀಯ ಮತ್ತು ಭಯಂಕರವಾಗಿ ಇರುವದು ಸಹ ನಿನ್ನನ್ನು ಮುಗುಳ್ನಗುವಂತೆ (ಬಾಲಿಶತೆಯನ್ನು ಕಂಡಂತೆ) ಮಾಡುವದು. ಆದುದರಿಂದ, ಎಲ್ಲದರ ಕಡೆ ನೋಡಿ ಮುಗುಳ್ನಗಬಲ್ಲ ಮನಸ್ಥಿತಿಯಲ್ಲಿ ನಾವು ಇದ್ದರೆ (ಏಕೆಂದರೆ ಆಗ ಪ್ರತಿಯೊಂದರ ಕಾರಣವನ್ನು ನಾವು ಅರಿತಿರುವೆವು, ಮತ್ತು ಎಲ್ಲಾ ವಿಷಯಗಳಲ್ಲಿ ಕೆಲಸ ಮಾಡುತ್ತಿರುವ ಶಕ್ತಿಗಳನ್ನು ನಾವು ಅರಿತಿರುವೆವು) ನಾವು ಅಂತಹ ಪ್ರಜ್ಞೆಯನ್ನು ಹೊಂದಿದ್ದು, ಸಂಭವಿಸುವ ಘಟನೆಯನ್ನು ಕಂಡು ಮುಗುಳ್ನಕ್ಕರೆ, ತಕ್ಷಣವೇ ಪರಿಸ್ಥಿತಿಗಳು ಬದಲಾಗುವವು. ಆದರೆ ಇದು ಸ್ವಲ್ಪ ಬಾಹ್ಯ ಮತ್ತು ಸಾಮಾಜಿಕ ಮುಗುಳ್ನಗೆಯಾಗಿರಬಾರದು ಅಷ್ಟೇ. ಮುಗುಳ್ನಗುತ್ತಿರುವದು ಚೈತ್ಯ ಸತ್ತೆಯಾಗಿರಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/369–70**

**ಎಲ್ಲಾ ವಸ್ತುಗಳ ಕಡೆ ಮುಗುಳ್ನಗೆಯೊಂದಿಗೆ ದೃಷ್ಟಿ ಹರಿಸು**

ನೀನು ಹೇಳುವೆ, "ನಾನು ಇರುವದೇ ಹಾಗೆ, ನಾನು ಅದಕ್ಕೆ ಏನು ಮಾಡಲಿ? ಪ್ರಕೃತಿಯಿಂದ ನನ್ನನ್ನು ನಾನು ಬೇರ್ಪಡಿಸುವೆ, ಆಕೆಗೆ ಇಷ್ಟ ಬಂದಂತೆ ಮಾಡಲು ಅನುವು ಮಾಡಿಕೊಡುವೆ, ನಾನು ಈ ಪ್ರಕೃತಿಯಲ್ಲ, ನಾನು ಪುರುಷ. ಓ ಆಕೆಯು ತನ್ನ ಹಾದಿಯಲ್ಲಿ ಚಲಿಸುತ್ತಿರಲಿ; ಆದರೇನು, ನಾನು ಆಕೆಯನ್ನು ಬದಲಾಯಿಸಲಾರೆ." ಇದು ಅತ್ಯಧಿಕವಾಗಿ ಅನುಕೂಲಕರ. ಆದುದರಿಂದಲೇ ಜನರು ಇದನ್ನು ಅಂಗೀಕರಿಸುವರು. ಏಕೆಂದರೆ ಅವರು ತಾವು ಪುರುಷನಲ್ಲಿ ಇರುವೆವೆಂದು ಕಲ್ಪಿಸಿಕೊಳ್ಳವರು, ಆದರೆ ಅತ್ಯಂತ ಚಿಕ್ಕ ಸೆಳೆತದಿಂದ ಅವರು ಪ್ರಕೃತಿಯಲ್ಲಿ ಪುನಃ ಬೀಳುವರು ಮತ್ತು ನಂತರ ಕೋಪಗೊಳ್ಳುವರು ಅಥವಾ ದುಃಖಿತವಾಗುವರು ಅಥವಾ ಖಾಯಿಲೆಯನ್ನು ಹೊಂದುವರು. ಅಷ್ಟೇ.

ಪುರುಷನೊಂದಿಗಿನ ಈ ರೀತಿಯ ಗುರುತಿಸುವಿಕೆಯನ್ನು ನಿರ್ದಿಷ್ಟವಾಗಿ ಪಡೆದವರೊಬ್ಬರ ಬಗ್ಗೆ ನಾನು ಕೇಳಿದ್ದೆನು. ಅವರು ಒಂದು ಅಸಾಮಾನ್ಯವಾದ ವಾತಾವರಣವನ್ನು ಹೊರಹೊಮ್ಮಿಸಿದ್ದರು; ಆದರೆ ಆತನು ಅಪಾಯಕಾರಿಯಾದ ಕ್ರಾಂತಿಕಾರರನ್ನು ಆಹ್ವಾನಿಸಿದನು. ಅವರು ಭೂಮಿಯ–ಪ್ರಕೃತಿಯಲ್ಲಿನದೇನನ್ನೋ ಬದಲಾಯಿಸುವ ಇಚ್ಛೆಯನ್ನು ಹೊಂದಿದ್ದರು – ಅವರ ಅಪೇಕ್ಷೆ, ಉದಾಹರಣೆಗೆ, ದುಃಖವನ್ನು ತೊಡೆದು ಹಾಕುವದು ಅಥವಾ ಅಂತಿಮವಾಗಿ ಮರಣದ ಅವಶ್ಯಕತೆಯನ್ನು ಇಲ್ಲವಾಗಿಸುವದು, ಇದರಿಂದ ಒಂದು ವಿಕಸನವು ಉಂಟಾಗಲೆಂದು, ನಾಶವು ಇಲ್ಲದೆ ಇರುವ ಒಂದು ಪ್ರಕಾಶಭರಿತ ಪ್ರಗತಿ: "ಓ ಆ ರೀತಿ ಯೋಚಿಸುವವರು ಅಪಾಯಕರವಾದ ಕ್ರಾಂತಿಕಾರಿಗಳಾಗಿರುವರು. ಅವಶ್ಯವೆನಿಸಿದರೆ, ಅವರನ್ನು ಸೆರೆಮನೆಗೆ ಕಳಿಸಬಹುದು.

ಆದರೆ ಓರ್ವ ಶ್ರೇಷ್ಠ ಯೋಗಿಯೆನಿಸಿಕೊಳ್ಳದೆಯೇ ಮೇಧಾವಿಯಾಗ–ಬಯಸಿದರೆ, ಈ ಎಲ್ಲಾ ವಿಷಯಗಳ ಕಡೆ ಮುಗುಳ್ನಗುತ್ತಾ ದೃಷ್ಟಿಹರಿಸಬಹುದು ಮತ್ತು ಅವುಗಳಿಂದ ಬಾಧೆ ಪಡಬೇಕಾಗಿರುವದಿಲ್ಲ. ನೀನು ನಿನ್ನದೇ ಆದ ಅನುಭವವನ್ನು ಹೊಂದು; ಅದನ್ನು ಸಾಧ್ಯವಾದಷ್ಟು ಸತ್ಯ ಮತ್ತು ಪೂರ್ಣವಾಗುವಂತೆ ಮಾಡು; ಆದರೆ ಪ್ರತಿಯೊಬ್ಬರೂ ಅವರದೇ ಆದ ಅನುಭವವನ್ನು ಹೊಂದಲಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/62–63**

## ಉಪಕಾರ ಬುದ್ಧಿಯನ್ನು ಹೊಂದಿರುವ ಮುಗುಳ್ನಗೆಯ ಶಕ್ತಿ

ಪ್ರತಿಯೊಂದರ ಕಡೆ ಉಪಕಾರಭರಿತ ಮುಗುಳ್ನಗೆಯನ್ನು ಬೀರು. ನಿನ್ನೊಳಗೆ ಸಂಘರ್ಷವನ್ನು ಉಂಟು ಮಾಡುತ್ತಿರುವ ಎಲ್ಲಾ ವಿಷಯಗಳು ನಿನಗೆ ಪಾಠ ಕಲಿಸುತ್ತಿವೆ ಎಂದು ತಿಳಿದುಕೋ. ಆಗ ನಿನ್ನ ಜೀವನವು ಹೆಚ್ಚು ಶಾಂತಿಯುಕ್ತವಾಗಿರುವದಲ್ಲದೆ ಹೆಚ್ಚು ಪರಿಣಾಮಕಾರಿಯಾಗಿರುವದು. ಏಕೆಂದರೆ ನಿನ್ನೊಳಗೆ ನೀನು ಪಡೆಯಬೇಕೆಂದಿರುವ ಪರಿಪೂರ್ಣತೆಯು ಇತರರಲ್ಲಿ ಕಾಣದೆ ಇದ್ದಾಗ ನಿನ್ನಲ್ಲಿ ಉಂಟಾಗುವ ಸಂಘರ್ಷದಿಂದ ನಿನ್ನ ಶಕ್ತಿಯ ಬಹುಪಾಲು ಸೋರಿಹೋಗುವುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/22–23 – ಶ್ರೀಮಾತೆ**

## ಭಗವಂತನಿಂದ ಮಂದಸ್ಮಿತ ವದನ

ಎಲ್ಲಾ ಅಡೆತಡೆಗಳನ್ನು ಕರಗಿಸುವ ಸೂರ್ಯನ ಕಿರಣದಂತೆ ಇರುವದು ವಿಶ್ರಾಂತಿಭರಿತ ನಿದ್ದೆ ಮತ್ತು ಸುಮಧುರ ಮುಗುಳ್ನಗೆ. ಸೂರ್ಯನು ಬೆಣ್ಣೆಯನ್ನು ಕರಗಿಸುವ ರೀತಿಯಲ್ಲಿ ಒಂದು ಮಧುರ ಮುಗುಳ್ನಗೆಯು ಪ್ರತಿಯೊಂದು ದುಷ್ಟ ಉದ್ದೇಶವನ್ನು ಕರಗಿಸುವುದು.

**ಶ್ರೀಮಾತೆ ನೀವು ಈ ರೀತಿ ಹೇಳಿದಿರಿ: 24.12.57**

ಸದಾಕಾಲ ಮುಗುಳ್ನಗುತ್ತಲೇ ಇರಬೇಕು, ಕಷ್ಟಗಳು ಬಂದಾಗ ಇನ್ನೂ ಹೆಚ್ಚಾಗಿ ಮುಗುಳ್ನಗಬೇಕು. ಸೂರ್ಯನ ಕಿರಣಗಳಂತೆ ಇರುವವು ಮುಗುಳ್ನಗೆಗಳು, ಅವು ಮೋಡಗಳನ್ನು ಕರಗಿಸುವವು... ನಿನಗೆ ಮೂಲಭೂತ ಪರಿಹಾರವು ಬೇಕಾಗಿದ್ದರೆ ಅದು ಇದರೊಳಗೆ ಇದೆ: ನೇರವಾದ ನಡವಳಿಕೆ, ಸಂಪೂರ್ಣವಾಗಿ ಮುಚ್ಚುಮರೆ ಇರದಿರಲಿ. ನಿನ್ನೊಳಗೆ ಏನು ನಡೆಯುತ್ತಿರುವದು ಎಂಬುದನ್ನು ನನಗೆ ಪೂರ್ತಿಯಾಗಿ ತಿಳಿಸು, ಅದರಿಂದ ನಿನಗೆ ಉಪಶಮನವು ಬಹಳ ಬೇಗ ಉಂಟಾಗುವುದು, ಒಂದು ಪೂರ್ಣ ಮತ್ತು ಸಂತಸಕರ ಉಪಶಮನ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/101**

ದಿವ್ಯ ಮೇಧಾವಿತನಕ್ಕೆ ಅತ್ಯಂತ ಶೀಘ್ರವಾದ ಹಾದಿ ಯಾವುದೆಂದರೆ ಎಲ್ಲಾ ಪರಿಸ್ಥಿತಿಗಳಲ್ಲಿ ಹೇಗೆ ಮುಗುಳ್ನಗುತ್ತಿರುವದು ಎಂಬುದನ್ನು ಅರಿಯುವುದೇ ಆಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 17/366**

ಮೋಡಗಳ ಮೇಲೆ ಸೂರ್ಯನು ಕ್ರಿಯಾಶೀಲನಾಗುವಂತೆ, ಒಂದು ಮುಗುಳ್ನಗೆಯು ಕಷ್ಟಗಳ ಮೇಲೆ ಕೆಲಸ ಮಾಡುತ್ತದೆ – ಅದು ಅವುಗಳನ್ನು ಚದುರಿಸುತ್ತದೆ.

*

ಯಾರೂ ಅತಿ ಹೆಚ್ಚಾಗಿ ಮುಗುಳ್ನಗಲು ಸಾಧ್ಯವಿಲ್ಲ ಎಂಬುದು ನನ್ನ ಚಿಂತನೆ: ಎಲ್ಲಾ ಪರಿಸ್ಥಿತಿಗಳಲ್ಲಿ ಹೇಗೆ ಮುಗುಳ್ನಗಬೇಕೆಂದು ಅರಿತವರು ಜೀವದ ನೈಜ ಸಮತ್ವವನ್ನು ಸಮೀಪಿಸಿರುವರು.

*

ಯಾರಾದರೂ ನಿರಂತರವಾಗಿ ಮುಗುಳ್ನಗಬಲ್ಲವರಾದರೆ, ಅವರು ನಿರಂತರವಾಗಿ ಯುವಕರಾಗಿರುವರು.

*

ನೀನು ಜೀವನವನ್ನು ಉದ್ದೇಶಿಸಿ ಸದಾ ಮುಗುಳ್ನಗಬಲ್ಲೆಯಾದರೆ, ಜೀವನವು ಯಾವಾಗಲೂ ನಿನ್ನ ಕಡೆ ಮುಗುಳ್ನಗುವುದು.

*

ನಿರಂತರವಾದ ಮುಗುಳ್ನಗೆ: ದಿವ್ಯ ಮಾತ್ರ ಆ ಕೃಪೆಯನ್ನು ನೀಡಬಹುದು.

ವೈರಿಯ ಕಡೆ ತಿರುಗಿ ಮುಗುಳ್ನಗುವುದೆಂದರೆ ಅವನನ್ನು ನಿಶ್ಶಸ್ತ್ರನನ್ನಾಗಿ ಮಾಡಿದಂತೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/177–78**

ಮುಗುಳ್ನಗದಿರುವ ಒಂದು ದೈವವು ಈ ವಿನೋದಭರಿತ ವಿಶ್ವವನ್ನು ರಚಿಸಲು ಸಾಧ್ಯವಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/345** **– ಶ್ರೀಮಾತೆ**

ಸಂತಸಭರಿತ ಮನಸ್ಸು ಮತ್ತು ಶಾಂತ ಹೃದಯವನ್ನು ಇರಿಸಿಕೊಳ್ಳಿ. ನಿನ್ನ

ಸಮನ್ವಯತೆಯನ್ನು ಯಾವುದೂ ಕದಡದಿರಲಿ ಮತ್ತು ಗುರಿಯ ಕಡೆ ಅಚಂಚಲ ಬುದ್ಧಿಯೊಂದಿಗೆ ನನ್ನೊಡನೆ ಮುನ್ನಡೆಯಲು ಪ್ರತಿದಿನ ಅವಶ್ಯಕವಾದ ಪ್ರಗತಿಯನ್ನು ಪಡೆಯಿರಿ.

*

ನೀನು ನಾಟಕೀಯತೆಯನ್ನು ತೋರ್ಪಡಿಸುವಾಗ ನೀನು ನೀಡುವ ನೆರವಿಗಿಂತಲೂ ಮೌನವಾಗಿ ಸಂತಸದಿಂದಿರುವಾಗ ನೀಡುವ ನೆರವು ಅಧಿಕವಾಗುವುದು ಎಂಬುದನ್ನು ಎಂದಿಗೂ ಮರೆಯಬಾರದು.

*

ಸಂತೋಷವಾಗಿರು, ನನ್ನ ಮಗುವೇ, ಅದೇ ಪ್ರಗತಿಗೆ ಅತ್ಯುತ್ತಮವಾದ ಹಾದಿಯಾಗಿದೆ.

*

ಮುಗುಳ್ನಗೆಯಲ್ಲಿ ಕಷ್ಟಗಳನ್ನು ಜಯಿಸುವ ಶಕ್ತಿಯು ನಿಟ್ಟುಸಿರಿಗಿಂತಲೂ ಹೆಚ್ಚಾಗಿದೆ.

*

ದಿವ್ಯದ ಕಡೆ ನಿರಂತರವಾದ ಅಭೀಪ್ಸೆಯನ್ನು ಹೊಂದಿ ಆಂತರಿಕವಾಗಿ ಜೀವಿಸುವಿಕೆಯು – ಮುಗುಳ್ನಗೆಯೊಂದಿಗೆ ಜೀವನದತ್ತ ಮುಖ ತಿರುಗಿಸುವ ಸಾಮರ್ಥ್ಯವನ್ನು ನೀಡುವದು. ಜೊತೆಗೆ ಬಾಹ್ಯ ಪರಿಸ್ಥಿತಿಗಳು ಯಾವುದೇ ತರಹ ಇದ್ದರೂ ಶಾಂತವಾಗಿ ಇರುವಂತೆ ಮಾಡುವುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/232**

ನಾವು ಅಹಂಕಾರವನ್ನು ಜಯಿಸಿದಾಗ, ದಿವ್ಯ ಮುಗುಳ್ನಗೆಯನ್ನು ಉದ್ದೇಶಿಸಿ ಧ್ಯಾನ ಮಾಡಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/257**

ದುಷ್ಟ–ಸಂಕಲ್ಪ, ಅಸೂಯೆ, ಜಗಳಗಳು ಮತ್ತು ನಿಂದನೆಗಳ ವಿಚಾರದಲ್ಲಿ ನಾವು ಅವೆಲ್ಲವುಗಳ ಮೇಲಿರಬೇಕು ಮತ್ತು ವಿಶ್ವಾಸದ ಮುಗುಳ್ನಗೆಯೊಂದಿಗೆ ಅತ್ಯಂತ

ಕಹಿಯಾದ ಪದಗಳಿಗೆ ಉತ್ತರ ನೀಡಬೇಕು. ತನ್ನ ಬಗ್ಗೆ ಮತ್ತು ತನ್ನ ಪ್ರತಿಕ್ರಿಯೆಗಳ ಬಗ್ಗೆ ಸಂಪೂರ್ಣವಾದ ನಂಬಿಕೆ ಇಲ್ಲದಿದ್ದರೆ ಸಾಮಾನ್ಯವಾಗಿ ಮೌನದಿಂದ ಇರುವುದು ಉತ್ತಮ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/264**

ಭಾವನೆಗಳ ಸಮರ್ಪಣೆ: ಆನಂದ ನೀಡುವ ನಿರಹಂಕಾರಿ ಮತ್ತು ಸುವಾಸನಾಭರಿತ. ಅದು ತನ್ನ ಕಡೆಗೆ ಗಮನವನ್ನು ಸೆಳೆಯುವ ಅಪೇಕ್ಷೆ ಇಲ್ಲದೆ ಜೀವನದತ್ತ ಮುಗುಳ್ನಗೆ ಬೀರುವದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/354**

ಪುಟ್ಟ ಕಂದನೇ, ನಿನ್ನ ಮುಗುಳ್ನಗೆಯನ್ನು ಉಳಿಸಿಕೊಂಡಿರು; ನಿನಗೆ ಸಾಮರ್ಥ್ಯವನ್ನು ನೀಡುವದು ಅದೇ ಆಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/65**

ಪರಿಪೂರ್ಣ ನಂಬಿಕೆಯೊಂದಿಗಿನ ಪ್ರಶಾಂತ ಮುಗುಳ್ನಗೆಯೊಂದಿಗೆ ಎಲ್ಲದರ ಕಡೆ ದೃಷ್ಟಿ ಹರಿಸುವದು ನಿಜಕ್ಕೂ ಬುದ್ಧಿವಂತಿಕೆಯಾಗಿದೆ. ಏಕೆಂದರೆ, ಆತನ ಈಗಿನ ಚೇತನದೊಂದಿಗೆ ಪರಮೋತ್ತಮ ಒಡೆಯನ ಗುರಿಗಳನ್ನು ಮಾನವನು ಅರ್ಥಮಾಡಿಕೊಳ್ಳುವುದು ಅಸಾಧ್ಯ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/278 – ಶ್ರೀಮಾತೆ**

ವಿಷಮ ಪರೀಕ್ಷೆಗಳು ಎಲ್ಲರಿಗೂ ಇರುವವು. ನಾವು ಅದನ್ನು ಯಾವ ರೀತಿಯಲ್ಲಿ ಎದುರಿಸುವೆವು ಎಂಬುದೇ ವ್ಯತ್ಯಾಸವನ್ನು ಉಂಟು ಮಾಡುವುದು. ಕೆಲವರು ಮುಗುಳ್ನಗುತ್ತಿರುವರು ಕೆಲವರು ಕಳವಳವನ್ನು ಹೊಂದುವರು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/229**

## ಎಲ್ಲವನ್ನೂ ಸರಳ–ಸುಂದರಗೊಳಿಸುವ ನಗು

ನಿನ್ನೆ ಯಾರೋ ನನಗೆ ಈ ರೀತಿ ಪತ್ರ ಬರೆದಿದ್ದರು: "ಎಲ್ಲವೂ ಇರಲಿ, ದಿವ್ಯವೆಂದರೆ ಏನು?" ನಾನು ಈ ರೀತಿ ಉತ್ತರಿಸಿದೆ. ನಾನು ಆತನಿಗೆ ನೇರವಾಗಲು ಉತ್ತರಿಸುತ್ತಿರುವೆ, ಆದರೆ ಉತ್ತಮವಾದ ಇನ್ನೂ ಅನೇಕ ಉತ್ತರಗಳಿರಬಹುದು. ಪ್ರತಿಯೊಂದು ಉತ್ತಮವಾದುದಾಗಿರಬಹುದು.

"ದಿವ್ಯವನ್ನು ಜೀವಿಸಬೇಕು ಆದರೆ ವಿವರಿಸಲಾಗದು."

ನಂತರ ನಾನು ಹೇಳಿದೆ: ನೀನು ನನ್ನನ್ನು ಪ್ರಶ್ನಿಸಿರುವದರಿಂದ, ನಾನು ಉತ್ತರಿಸುತ್ತಿರುವೆ. ನನ್ನ ಉತ್ತರ: "ದಿವ್ಯವು ಸಮಗ್ರ ಪರಿಪೂರ್ಣತೆ, ಅಸ್ತಿತ್ವದಲ್ಲಿ ಇರುವ ಎಲ್ಲದರ ನಿರಂತರ ಮೂಲ ಸ್ರೋತ. ಅದರ ಬಗ್ಗೆ ನಾವು ಹಂತ ಹಂತವಾಗಿ ಜಾಗೃತಗೊಳ್ಳುವೆವು. ಆದರೆ ಸದಾಕಾಲ ಸಮಸ್ತ ನಿರಂತತೆಯಿಂದ ನಾವು ಆತನೇ ಆಗಿರುವೆವು." ಒಮ್ಮೆ ಒಬ್ಬರು ನನಗೆ ಈ ರೀತಿ ಹೇಳಿದರು "ಅದು ಅವರಿಗೆ ಚಿಂತಿಸಲು ಅಸಾಧ್ಯವಾದ ವಿಷಯವಾಗಿದೆ ಎಂದು" ಆದುದರಿಂದ ನಾನು ಆತನಿಗೆ ಈ ರೀತಿ ಉತ್ತರಿಸಿದೆ: "ಇಲ್ಲ! ಅದು ನಿನಗೆ ಸಹಾಯ ಮಾಡುವದಿಲ್ಲ. ನೀನು ಎಲ್ಲವೂ ದಿವ್ಯವೇ ಎಂದು ಯೋಚಿಸಬೇಕಾಗಿದೆ ಅಷ್ಟೇ. (ಅತ್ಯಧಿಕವಾಗಿ, ಹೌದು) ನಮ್ಮ ಅತ್ಯುನ್ನತಿಯಲ್ಲಿ ನಾವು ಏನಾಗಬೇಕೆಂದಿರುವೆವೋ ಅದು, ಅತ್ಯಂತ ಪ್ರಕಾಶಭರಿತ ಅಭೀಪ್ಸೆ. ನಾವು ಏನಾಗಬೇಕೆಂದಿರುವೆವೋ ಅದೆಲ್ಲಾ, ಅದೇ ದಿವ್ಯವಾಗಿದೆ." ಆತನಿಗೆ ಮಹದಾನಂದವಾಯಿತು ಮತ್ತು ಈ ರೀತಿ ನನಗೆ ಹೇಳಿದರು: "ಓ! ಅದು ನಿಜಕ್ಕೂ ಸುಲಭವಾದ ಹಾದಿಯಾಗಿದೆ."...

ಅದೇ ಸಮಯದಲ್ಲಿ, ವಿವರಣೆಯ ಅವಶ್ಯಕತೆಯಿರುವ "ಆ ಏನೋ ಒಂದು" ಎಂಬ ದೃಷ್ಟಿಕೋನ ಕಾಣಿಸಿಕೊಂಡಾಗ ಎಲ್ಲೆಡೆ ಒಂದು ಅಗಾಧ ಮೌನವು ಆವರಿಸಿತು ಮತ್ತು ಒಂದು ಮಹತ್ತಾದ ಅಭೀಪ್ಸೆ (ಮೇಲೇರುತ್ತಿರುವ ರೀತಿಯಲ್ಲಿ ಒಂದು ಜ್ವಾಲೆಯ ರೀತಿಯಲ್ಲಿ ಚಹರೆ), ಈ ಅಭೀಪ್ಸೆಯು ಹೊಂದಿದ ಎಲ್ಲಾ ರೂಪಗಳು. ಅದು ಬಹಳ ಕುತೂಹಲಕಾರಿಯಾಗಿತ್ತು... ಭೂಮಿಯ ಅಭೀಪ್ಸಾ ಕಥೆ... ನಾವು ಯಾವ ಅದ್ಭುತ ಅಜ್ಞಾತಕ್ಕೆ ಅರ್ಹರಾಗಬೇಕೆಂದಿರುವೆವೋ ಅದು.

ಪ್ರತಿಯೊಬ್ಬರೂ – ಜೊತೆಗೂಡಬೇಕೆಂದು ನಿಯಮಿತರಾಗಿರುವವರೆಲ್ಲರೂ – ಆತನ ಸರಳತೆಯಲ್ಲಿ ತಾನು ಅನುಸರಿಸುವ ಸೇತುವೆಯೊಂದೇ ಇರುವದು

ಎಂದು ನಂಬುವನು. ಇದರ ಪರಿಣಾಮ: ಮಾತುಗಳು, ತತ್ತ್ವಶಾಸ್ತ್ರಗಳು, ಸಿದ್ಧಾಂತಗಳು, ದೃಢ ನಂಬಿಕೆಗಳು – ಕಾಳಗ.

ಪರಿಪೂರ್ಣವಾಗಿ ನೋಡಿದಾಗ ಅದು ಬಹಳ ಕುತೂಹಲಕಾರಿಯಾಗಿದೆ, ಬಹಳ ಆಕರ್ಷಕ, ಮುಗುಳ್ನಗೆಯೊಂದಿಗೆ ವೀಕ್ಷಿಸುವದು. ಓ ಈ ಮುಗುಳ್ನಗೆ... ಆ ಹೊರ ವೀಕ್ಷಣೆ. ಈ ಮುಗುಳ್ನಗೆ, "ಇದನ್ನು ನೀನು ಎಷ್ಟು ಸಂಕೀರ್ಣಗೊಳಿಸುತ್ತಿರುವೆ ಮತ್ತು ಅದು ಎಷ್ಟು ಸರಳವಾಗಿರಬಹುದು!" ಎಂದು ಹೇಳುತ್ತಿರುವಂತೆ ಇದೆ.

ಸಾಹಿತ್ಯಕವಾಗಿ ವ್ಯಕ್ತಪಡಿಸಬೇಕಾದರೆ, ನಾವು ಹೀಗೆ ಹೇಳಬಹುದು: "ಇಂತಹ ಸರಳವಾದ ವಿಷಯಕ್ಕೆ ಅಂದರೆ ನಾನು ನಾನಾಗಿರಲು" ಎಷ್ಟೊಂದು ಸಂಕೀರ್ಣತೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/64–65 – ಶ್ರೀಮಾತೆ**

ಮುಕ್ತವೂ ವಿಶಾಲವೂ ಆದ ವಿಶ್ವದೆದುರಿಗೆ ಈ ಹೃದಯವು ಅನುಭೂತಿಗಾಗಿ
ತೆರೆದುಕೊಂಡಿದೆ,
ಆಧ್ಯಾತ್ಮದ ಶ್ವೇತಚಿಲುಮೆಗಳಿಂದ ಉಕ್ಕಿಬಂದ ಪ್ರೇಮವು,
ಅಜ್ಞಾನದ ಆಳಕುಹರದಲ್ಲಿ ಕುಳಿತ ದುಃಖವನ್ನು ಅಳಿಸಿಹಾಕಿತು;
ಅವಳ ಚಿರಂತನವಾದ ನಗುವಿನಲ್ಲಿ ದುಃಖವು ಕಳೆದುಹೋಯಿತು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 33/313–14 – ಶ್ರೀ ಅರವಿಂದರು**

ದುಃಖದ ಕತ್ತಲೆಯಂತೆ ಸಂತೋಷದ ಬೆಳಕೂ ಸಹ ಪ್ರಚ್ಛನ್ನವಾದ ಶಕ್ತಿಯೇ ಆಗಿದೆ. ಆ ಕತ್ತಲೆಯ ವಿರುದ್ಧ ಸಂತೋಷದ ಬೆಳಕನ್ನು ಎಲ್ಲರೊಂದಿಗೆ ಹಂಚುತ್ತ ಸಾಗುವದರಿಂದ ದುಃಖವನ್ನು ನಾಶಪಡಿಸಬಹುದು.

ಯಾವಾಗ ನೀವು ಸಂತೋಷವಾಗಿರುವಿರೋ ಆಗ ನೀವು ಬೆಳಕಿಗೆ ಹತ್ತಿರವಾಗುತ್ತಾ ಸಾಗುತ್ತೀರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/179–80**

ಎಂದಿಗೂ ಗೊಣಗುತ್ತ ಕಾಲವನ್ನು ಕಳೆಯದಿರಿ. ಏಕೆಂದರೆ, ಯಾವಾಗ ನೀವು ಗೊಣಗುತ್ತೀರೋ ಆಗ ಎಲ್ಲ ರೀತಿಯ ಅನೃತ ಶಕ್ತಿಗಳು ನಿಮ್ಮೊಳಗೆ ಪ್ರವೇಶಿಸಿ

ನಿಮ್ಮನ್ನು ಪ್ರಪಾತದೆಡೆ ಎಳೆಯಲು ಪ್ರಾರಂಭಿಸುತ್ತವೆ. ಹಾಗಾಗಿ ಸದಾ ನಗುತ್ತಲಿರಿ. ನಾನು ಯಾವಾಗಲೂ ತಮಾಷೆ ಮಾಡುವುದನ್ನು ಗಮನಿಸಿರುತ್ತೀರಿ. ಆದರೆ, ಅದು ಬರಿ ತಮಾಷೆಯಲ್ಲ. ಬದಲಿಗೆ ಅದು ಜನ್ಮದಿಂದಲೇ ಬಂದ ಒಂದು ಅತಿಂದ್ರೀಯ ಬಲವಾಗಿದೆ. ನಗು ಮತ್ತು ದಿವ್ಯತೆಯ ಎದುರು ನಿಲ್ಲಲು ಯಾವ ಅನೃತ ಶಕ್ತಿಗಳಿಗೂ ಸಾಧ್ಯವಿಲ್ಲ. ನಗುವೊಂದು ನಿಮ್ಮ ಜೊತೆಗಿದ್ದರೆ ಕೊನೆಯಲ್ಲಿ ಎಲ್ಲವೂ ಉತ್ತಮವಾಗಿಯೇ ನೆರವೇರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/221**

## ನಗುವಿನ ಪುನರ್–ಸ್ಥಾಪನೆ

**– ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ**

### ಸ್ವಯಂ–ಪ್ರಾಧಾನ್ಯತೆಯ ಭಾವನೆಯಿಂದ ಹೊರಬನ್ನಿ

ಒಬ್ಬರು ತಮ್ಮನ್ನು ತಾವೇ ತುಂಬಾ ಪ್ರಾಮಾಣಿಕವಾಗಿ, ತುಂಬಾ ನಿಷ್ಕಪಟವಾಗಿ ಮತ್ತು ತುಂಬಾ ತೀವ್ರವಾಗಿ ನೋಡಿದರೆ, ನಿಖರವಾದ ಕೆಲವೇ ಕೆಲವು ಸಂಗತಿಗಳು, ಪ್ರಜ್ಞೆಯ ಕೆಲವೇ ಕೆಲವು ಕ್ರಿಯೆಗಳು ಬಯಕೆಗಳೊಂದಿಗೆ ಬೆರೆತಿಲ್ಲ ಎನ್ನುವುದನ್ನು ಬಹಳ ಬೇಗನೆ ಗ್ರಹಿಸುತ್ತಾರೆ. ಉನ್ನತ ಕ್ರಿಯೆಗಾಗಿ ನೀವು ಏನನ್ನು ಸ್ವೀಕರಿಸುತ್ತೀರೋ ಅದರಲ್ಲೂ ಸಹ, ಅಲ್ಲಿ ಯಾವಾಗಲೂ ಇರುತ್ತದೆ... ಇಲ್ಲ, ಯಾವಾಗಲೂ ಸಂತೋಷದಿಂದ ಅಲ್ಲ, ಆದರೆ ಸಾಮಾನ್ಯವಾಗಿ ಅಲ್ಲಿ ಬಯಕೆಯು ಮಿಶ್ರಣಗೊಂಡಿರುತ್ತದೆ. ಒಬ್ಬರ ಮಹತ್ವದ ಅರಿವಿನ ಬಯಕೆ, ಇದು ಮಾತ್ರವೇ, ಆ ರೀತಿಯ ಆತ್ಮ ತೃಪ್ತಿ, ಯಾರೋ ಒಬ್ಬರು ಶ್ರೇಷ್ಠರಾಗಿರುವ ತೃಪ್ತಿ.

ತಮ್ಮ ನೆರೆಹೊರೆಯವರನ್ನು ಆಶ್ಚರ್ಯಗೊಳಿಸಲು ಮತ್ತು ಇತರರ ಮೇಲೆ ಅಧಿಕಾರ ಚಲಾಯಿಸಲು, ಮತ್ತು ಇತರರು ಅವರಿಗಾಗಿ ಮೆಚ್ಚುಗೆ ಮತ್ತು ಗೌರವದಿಂದ ತುಂಬಿರಬಹುದಾದರೆ, ಯೋಗಿಗಳಾಗಲು ಬಯಸುವವರಿಗಿಂತ ಇದು ಖಂಡಿತವಾಗಿಯೂ ಉತ್ತಮವಾಗಿದೆ. ಎಷ್ಟು ವಿಷಯಗಳು ನಿಜವಾಗಿಯೂ ಶುದ್ಧವಾಗಿವೆ? ಶುದ್ಧ ಆಕಾಂಕ್ಷೆ? ನೀವು ಈಗಾಗಲೆ ತುಂಬಾ ಉನ್ನತ ಮಟ್ಟವನ್ನು ತಲುಪಿರಬೇಕು, ನಾನು ಹೇಳಿದ ಆ ಮಟ್ಟ, ಆ ಮಟ್ಟದಲ್ಲಿ ತನ್ನನ್ನು ತಾನು ನಗುವಿನೊಂದಿಗೆ (ಕೊಂಚ ವ್ಯಂಗದ ನಗುವಿನೊಂದಿಗೆ) ನೋಡಬಹುದಾದ

ಮಟ್ಟ, ಮತ್ತು ನಾವು ತುಂಬಾ, ತುಂಬಾ, ತುಂಬಾ ಕ್ಷುದ್ರ, ತುಂಬಾ ಕ್ಷುಲ್ಲಕ, ತುಂಬಾ ಅಲ್ಪ ಮತ್ತು ತುಂಬಾ ಮೂರ್ಖರಾಗಿದ್ದೇವೆ ಎನ್ನುವಂಥ ಭಾವನೆಯನ್ನು ಹೊಂದುತ್ತೇವೆ. ಅದರ ನಂತರ ವಿಷಯಗಳು ಉತ್ತಮವಾಗಿ ಸಾಗುತ್ತವೆ. ಆದರೆ ಎಷ್ಟು ಸಮಯದವರೆಗೆ ಎಲ್ಲಾ ಕ್ರಿಯೆಗಳು ಯಾವಾಗಲೂ ತಮ್ಮ ಮೇಲೆ ಹಿಂತಿರುಗುತ್ತವೆ! ನೀವು ಈ ವಿಶ್ವಕ್ಕೆ ಮುಖಾಮುಖಿಯಾಗಿ ಮುಂದಕ್ಕೆ ಹಾರುತ್ತಿರುವಂತೆ, ಒಂದು ಠೀವಿಯಿಂದ ಪ್ರಾರಂಭಿಸುತ್ತೀರಿ, ಮತ್ತು ಒಂದು ಸಣ್ಣ ಪರಿಣಾಮವನ್ನು, ಒಂದು ಚಿಕ್ಕ ತೃಪ್ತಿಯನ್ನು ನಿರೀಕ್ಷಿಸುತ್ತಾ, ನೀವು ಅಂತರ್ಮುಖಿಯಾಗುತ್ತೀರಿ, ಅದು ನಿಮ್ಮ ಸ್ವಂತ ಸ್ವಯಂ–ಮೆಚ್ಚುಗೆಯಾಗಿದ್ದರೂ ಸಹ: "ಓಹ್, ನಾನು ಎಂಥಾ ಒಳ್ಳೆಯ ಹಂಬಲವನ್ನು ಹೊಂದಿದ್ದೆ!"

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/337–338**

**ಖಿನ್ನತೆಗೆ ಬಾಗಿಲು ತೆರೆಯಬೇಡಿ ಖಿನ್ನತೆಯು ನಿಮ್ಮನ್ನು ಪ್ರವೇಶಿಸಲು ಬಿಡಬೇಡಿ**

ನೀವು ಬಲವಾದ ಇಚ್ಛೆಯನ್ನು ಹೊಂದಿರಬೇಕಾಗಿಲ್ಲ – ನೀವು ನನ್ನದನ್ನು ಮಾತ್ರ ಬಳಸಬೇಕು.

ಮಗು, ಜಾಗರೂಕರಾಗಿರು, ಖಿನ್ನತೆ, ಎದೆಗುಂದಿಸುವಿಕೆ ಮತ್ತು ಪ್ರತಿಭಟನೆಯು ನಿನ್ನನ್ನು ಪ್ರವೇಶಿಸಲು ಬಿಡಬೇಡ – ಇದು ಪ್ರಜ್ಞೆಯಿಂದ ಅನತಿ ದೂರ ಕರೆದೊಯ್ಯುತ್ತದೆ ಮತ್ತು ನಿನ್ನನ್ನು ಆನಂದವು ಎಂದಿಗೂ ಪ್ರವೇಶಿಸಲಾರದಂಥ ಅಸ್ಪಷ್ಟವಾದ ಆಳದಲ್ಲಿ ಮುಳುಗುವಂತೆ ಮಾಡುತ್ತದೆ. ನಿನ್ನ ಮಹಾಶಕ್ತಿಯು ನಿನ್ನ ನಗುವಾಗಿತ್ತು; ಏಕೆಂದರೆ, ಜೀವನದಲ್ಲಿ ಹೇಗೆ ನಗಬೇಕೆನ್ನುವುದು ನಿನಗೆ ತಿಳಿದಿತ್ತು, ಧೈರ್ಯದಿಂದ ಮತ್ತು ಸ್ಥಿರತೆಯಿಂದ ಕೆಲಸವನ್ನು ಹೇಗೆ ಮಾಡಬೇಕೆನ್ನುವುದು ಸಹ ನಿನಗೆ ತಿಳಿದಿತ್ತು, ಮತ್ತು ಇದರಲ್ಲಿ ನೀನು ಅಸಾಧಾರಣವಾಗಿದ್ದಿ. ಆದರೆ ನೀನು ಬೇರೆ ಜನರ ಉದಾಹರಣೆಯನ್ನು ಅನುಸರಿಸಿರುವೆ, ಅವರಿಂದ ನೀನು ಅತೃಪ್ತವಾಗಿರುವುದನ್ನು, ವಿದ್ರೋಹ ಮಾಡುವುದನ್ನು, ಖಿನ್ನತೆಗೊಳಗಾಗುವುದನ್ನು ಕಲಿತಿರುವೆ, ಮತ್ತು ಈಗ ನೀನು, ನಿನ್ನ ನಗೆಯು ಜಾರಿಹೋಗಲು ಬಿಟ್ಟಿರುವೆ, ಅದರೊಂದಿಗೆ ನನ್ನಲ್ಲಿ ಇಟ್ಟಿರುವ ನಿನ್ನ ನಂಬಿಕೆ ಹಾಗೂ ವಿಶ್ವಾಸವನ್ನೂ ಸಹ; ಈ ಸ್ಥೀತಿಯಲ್ಲಿ, ಎಲ್ಲ ದೈವೀ ಶಕ್ತಿಗಳು ನಿನ್ನ ಮೇಲೆ ಕೇಂದ್ರೀಕೃತವಾದರೆ, ಅದು

ವ್ಯರ್ಥವಾಗುತ್ತದೆ – ನೀನು ಅವುಗಳನ್ನು ಸ್ವೀಕರಿಸಲು ನಿರಾಕರಿಸುವಿ. ಅದಕ್ಕೊಂದು ಪರಿಹಾರವಿದೆ, ನೀನು ಅದನ್ನು ಒಪ್ಪಿಕೊಳ್ಳಲು ಸಮಯವನ್ನು ವ್ಯರ್ಥ ಮಾಡಬಾರದು: ನಿನ್ನ ನಗುವನ್ನು ಮರಳಿ ಪಡೆದುಕೊ, ನಿನ್ನ ನಂಬಿಕೆಯನ್ನು ಪುನಃ ಹೊಂದು, ನೀನು ಮೊದಲಿನಂತೆ ಮತ್ತೊಮ್ಮೆ ವಿಶ್ವಾಸವುಳ್ಳ ಮಗುವಾಗು, ನಿನ್ನ ಮಾಡಿದ ತಪ್ಪುಗಳ ಹಾಗೂ ತೊಂದರೆಗಳ ಬಗ್ಗೆ ಕೊರಗಬೇಡ – ನಿನ್ನ ನಗು ಅವುಗಳನ್ನು ಓಡಿಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/67–68**

**ಪರವಶವಾಗದಿರಿ**

ಅಶಾಂತಿ, ಹಿಂಸೆ, ಕ್ರೋಧ, ಇವೆಲ್ಲವುಗಳೂ ಯಾವಾಗಲೂ, ಯಾವುದೇ ವಿನಾಯಿತಿ ಇಲ್ಲದೆ, ದೌರ್ಬಲ್ಯದ ಲಕ್ಷಣಗಳಾಗಿವೆ. ಮತ್ತು ವಿಶೇಷವಾಗಿ ಒಬ್ಬರು ತಮ್ಮ ಮಾತುಗಳಲ್ಲಿ ಪರವಶರಾಗಿ, ಹೇಳಬಾರದ ವಿಷಯಗಳನ್ನು ಹೇಳಿದಾಗ, ಇದು ನಿಜವಾಗಿಯೂ ಅತಿ ಭಯಾನಕವಾದ ಮಾನಸಿಕ ಮತ್ತು ಜೀವನ ಶಕ್ತಿಯ ದೌರ್ಬಲ್ಯದ ಲಕ್ಷಣವಾಗಿದೆ. ಇಲ್ಲದಿದ್ದರೆ, ನೀವು ಈ ಜಗತ್ತಿನಲ್ಲಿ ಎಲ್ಲ ರೀತಿಯ ಅವಮಾನವಾಗುವ ಸಂಗತಿಗಳನ್ನು ಕೇಳಬಹುದು, ಜನರು ನಿಮಗೆ ಸಾಧ್ಯವಾದ ಎಲ್ಲ ರೀತಿಯ ಮೂರ್ಖತನದ ಸಂಗತಿಗಳನ್ನು ಹೇಳಬಹುದು; ನೀವು ದುರ್ಬಲರಾಗಿಲ್ಲದಿದ್ದರೆ, ಬಹುಶಃ ನೀವು ಬಾಹ್ಯದಲ್ಲಿ ನಗದಿರಬಹುದು, ಏಕೆಂದರೆ ಯಾವಾಗಲು ನಗುವುದು ಒಳ್ಳೆಯದಲ್ಲ, ಆದರೆ ನಿಮ್ಮಂತರಾಳದಲ್ಲಿ ನೀವು ನಗುತ್ತಿರುತ್ತೀರಿ, ನೀವದನ್ನು ಅಲಕ್ಷಿಸುವಿರಿ, ಅದು ನಿಮ್ಮನ್ನು ಸೋಕುವುದಿಲ್ಲ... ಸರಳವಾಗಿ ಹೇಳಬೇಕೆಂದರೆ, ನಿಮ್ಮ ಮನಸ್ಸು ಇಲ್ಲಿ ಸೂಚಿಸಿರುವಂತೆ ಶಾಂತವಾಗಿರುವ ಹವ್ಯಾಸವನ್ನು ರೂಪಿಸಿಕೊಂಡಿದ್ದರೆ, ಮತ್ತು ನಿಮ್ಮೊಳಗೆ ಸತ್ಯದ ಅರಿವನ್ನು ಹೊಂದಿದ್ದರೆ, ನೀವು ಏನನ್ನಾದರೂ ಆಲಿಸಬಹುದು. ಅದು ಕಂಪನದ ಹೋಲಿಕೆಯನ್ನೂ ಸಹ ಉಂಟುಮಾಡುವುದಿಲ್ಲ – ಎಲ್ಲವೂ ಸಂಪೂರ್ಣವಾಗಿ ನಿಶ್ಚಲವಾಗಿ ಮತ್ತು ಶಾಂತವಾಗಿ ಉಳಿಯುತ್ತದೆ. ನಾವು ಸ್ವಲ್ಪ ಹಿಂದೆ ಮಾತನಾಡುತ್ತಿದ್ದ ಪ್ರೇಕ್ಷಕ ಅಲ್ಲಿದ್ದರೆ, ಹಾಸ್ಯವನ್ನು ನೋಡುತ್ತಲಿದ್ದರೆ, ಆತ ಖಂಡಿತವಾಗಿಯೂ ನಗುತ್ತಾನೆ.

ಆದರೆ, ನಿನ್ನ ಮೇಲೆ ತನ್ನ ಎಲ್ಲ ಹಿಂಸೆ ಮತ್ತು ಕೋಪವನ್ನು ತೂರುವ ಮತ್ತೊಬ್ಬ ವ್ಯಕ್ತಿಯಿಂದ ಬರುವಂಥ ಕಂಪನಗಳನ್ನು ನೀನು ಅನುಭವಿಸಿದರೆ, ಇದನ್ನು ನೀನು ಅನುಭವಿಸಿದರೆ... ಮೊದಲಿಗೆ ಅದು ಮಾಡುತ್ತದೆ... ತದನಂತರ, ಹಠಾತ್ತನೆ, ಅಲ್ಲೊಂದು ಪ್ರತಿಕ್ರಿಯೆ ಇರುತ್ತದೆ; ಮತ್ತು ನೀನು ಸ್ವತಃ ಕೋಪಕ್ಕೆ ಒಳಗಾಗಲು ಶುರು ಮಾಡಿದರೆ, ನೀನು ಅವನಷ್ಟೇ ದುರ್ಬಲವೆಂದು ಖಚಿತವಾಗಿ ತಿಳಿದುಕೊಳ್ಳಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/372–373**

**ನೀವು ಗಲಾಟೆ ಮಾಡಲೇಬಾರದು**

...ನೀವು ಒಂದು ನಿರ್ದಿಷ್ಟ ವಿಷಯದ ಬಗ್ಗೆ ಸರಿಯಾದ, ಸ್ಪಷ್ಟವಾದ, ನಿಖರವಾದ, ನಿಶ್ಚಿತವಾದ ಆಲೋಚನೆ ಹೊಂದಲು ಯಶಸ್ವಿಯಾಗಬೇಕೆಂದು ಬಯಸಿದರೆ, ನೀವು ಪ್ರಯತ್ನ ಮಾಡಬೇಕು, ಮಾನಸಿಕವಾಗಿ, ಭಾವನಾತ್ಮಕವಾಗಿ ನಿಮ್ಮನ್ನು ನೀವು ಸಿದ್ಧಗೊಳಿಸಿಕೊಳ್ಳಬೇಕು, ಸ್ಥಿರವಾಗಿರಿ, ಏಕಾಗ್ರತೆಯಿಂದಿರಿ. ನೀವು ಮೊದಲ ಸಲ ಅದನ್ನು ಮಾಡಿದಾಗ, ಅದು ನಿಮಗೆ ಅಕ್ಷರಶಃ ನೋವುಂಟುಮಾಡುತ್ತದೆ, ಅದು ತೀವ್ರ ಬಳಲಿಕೆಯಾಗಿರುತ್ತದೆ! ಆದರೆ ನೀವು ಅದನ್ನು ಅಭ್ಯಾಸ ಮಾಡಿಕೊಳ್ಳದಿದ್ದರೆ, ನಿಮ್ಮ ಜೀವನದುದ್ದಕ್ಕೂ ನೀವು ಅನಿರ್ದಿಷ್ಟ ಸ್ಥಿತಿಯಲ್ಲಿ ಜೀವಿಸುತ್ತಿರುತ್ತೀರಿ. ಮತ್ತು ವಾಸ್ತವಿಕ ವಿಷಯಗಳಿಗೆ ಬಂದಾಗ, ಏಕೆಂದರೆ, ಎಲ್ಲವನ್ನೂ ಹೊರತುಪಡಿಸಿ, ನಾವು ಯಾವಾಗಲೂ ಹಲವಾರು ವಾಸ್ತವಿಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ, ಹಾಗಿದ್ದಾಗ, ಸಮಸ್ಯೆಯ ಅಂಶಗಳನ್ನು ತೆಗೆದುಕೊಂಡು, ಅವೆಲ್ಲವನ್ನೂ ಮುಖಾಮುಖಿ ಮಾಡಿ, ಪ್ರಶ್ನೆಯನ್ನು ಎಲ್ಲಾ ಕಡೆಯಿಂದ ನೋಡಿ, ಮತ್ತು ಅದನ್ನು ಮೀರಿ ಪರಿಹಾರವನ್ನು ಕಂಡುಕೊಳ್ಳುವುದು ಬದಲು, ಆಶಾದಾಯಕವಲ್ಲದ ಮತ್ತು ಅನಿಶ್ಚಿತವಾದ ಯಾವುದೋ ಸುಳಿಗಳಲ್ಲಿ ಅತ್ತಿತ್ತ ಎಸೆಯಲ್ಪಡುತ್ತೀರಿ, ಮತ್ತು ಅದು ನಿಮ್ಮ ತಲೆಯಲ್ಲಿ ಓಡಾಡುವ ಹಲವಾರು ಜೇಡಗಳಂತೆ ಇರುತ್ತದೆ – ಆದರೆ ನೀವು ಸಂಗತಿಯನ್ನು ಹಿಡಿಯುವಲ್ಲಿ ಯಶಸ್ವಿಯಾಗುವುದಿಲ್ಲ.

ನಾನು ಅತ್ಯಂತ ಸರಳವಾದ ಸಮಸ್ಯೆಗಳ ಬಗ್ಗೆ ಮಾತನಾಡುತ್ತಿದ್ದೇನೆ, ಗೊತ್ತೆ; ನಾನು ಪ್ರಪಂಚದ ಅಥವಾ ಮಾನವೀಯತೆಯ ಅಥವಾ ಒಂದು ದೇಶದ ಭವಿಷ್ಯವನ್ನು ನಿರ್ಧರಿಸುವ ಬಗ್ಗೆ ಮಾತನಾಡುತ್ತಿಲ್ಲ – ಅಂತಹದ್ದೇನೂ ಅಲ್ಲ.

ನಾನು ನಿಮ್ಮ ದೈನಂದಿನ ಜೀವನದ ಸಮಸ್ಯೆಗಳ ಬಗ್ಗೆ, ಪ್ರತಿದಿನದ ಸಮಸ್ಯೆಗಳ ಬಗ್ಗೆ ಮಾತನಾಡುತ್ತಿದ್ದೇನೆ. ಅವು ಸಂಪೂರ್ಣವಾಗಿ ಗೊಂದಲಮಯವಾಗುತ್ತವೆ.

ನೋಡಿ, ನಿಮ್ಮ ಮೆದುಳು ರೂಪುಗೊಳ್ಳುತ್ತಿರುವ ಕ್ರಮದಲ್ಲಿರುವಾಗ, ನಿಮಗೆ ಹೇಳಲಾಗುತ್ತದೆ, "ಅದನ್ನು ಇಂತಹ ಅಭ್ಯಾಸಗಳಿಂದ ಹಾಗೂ ಸಾಮರ್ಥ್ಯಗಳಿಂದ ರೂಪುಗೊಳ್ಳಲು ಬಿಡುವ ಬದಲು, ಅದಕ್ಕೆ ಕೊಂಚ ನಿಖರತೆಯನ್ನು, ಖಚಿತತೆಯನ್ನು, ಏಕಾಗ್ರತೆಯ, ಆಯ್ಕೆ ಮಾಡುವ, ನಿರ್ಧರಿಸುವ, ಕೆಲಸಗಳನ್ನು ಕ್ರಮದಲ್ಲಿ ಇಡುವ ಸಾಮರ್ಥ್ಯವನ್ನು, ನೀಡಲು ಪ್ರಯತ್ನಿಸಿ, ನಿಮ್ಮ ವಿವೇಚನೆಯನ್ನು ಬಳಸಲು ಪ್ರಯತ್ನಿಸಿ" – ಇದೆಲ್ಲವನ್ನು ತಪ್ಪಿಸಲು ಹೀಗೆ ಹೇಳಲಾಗುತ್ತದೆ.

ಹೌದು, ವಿವೇಚನೆಯು ಮನುಷ್ಯನ ಅತ್ಯುನ್ನತ ಸಾಮರ್ಥ್ಯವಲ್ಲ ಮತ್ತು ಅದನ್ನು ಮೀರಿಸಬೇಕು ಎಂದು ಚೆನ್ನಾಗಿ ಅರ್ಥವಾಗಿದೆ, ಆದರೆ ಅದು ನಿಮ್ಮಲ್ಲಿ ಇಲ್ಲದಿದ್ದರೆ, ನೀವು ಸಂಪೂರ್ಣವಾಗಿ ಅಸಂಬದ್ಧ ಜೀವನ ನಡೆಸುತ್ತೀರಿ ಎನ್ನುವುದು ಸ್ಪಷ್ಟವಾಗಿದೆ, ಮತ್ತು ತರ್ಕಬದ್ಧವಾಗಿ ಹೇಗೆ ವರ್ತಿಸಬೇಕು ಎನ್ನುವುದೂ ಸಹ ನಿಮಗೆ ಗೊತ್ತಿರುವುದಿಲ್ಲ. ಅತಿ ಚಿಕ್ಕ ವಿಷಯವೂ ನಿಮ್ಮನ್ನು ಸಂಪೂರ್ಣವಾಗಿ ಅಸಮಾಧಾನಗೊಳಿಸುತ್ತದೆ ಮತ್ತು ಹೀಗೇಕೆ ಎಂದು ನಿಮಗೆ ತಿಳಿಯುವುದಿಲ್ಲ, ಮತ್ತು ಅದನ್ನು ಹೇಗೆ ನಿವಾರಣೆ ಮಾಡಬೇಕು ಎನ್ನುವುದೂ ಇನ್ನೂ ಕಡಿಮೆ ತಿಳಿದಿರುತ್ತದೆ. ಯಾರು ತನ್ನೊಳಗೆ ಸಕ್ರೀಯ, ಸಷ್ಟವಾದ ತಾರ್ಕಿಕ ಸ್ಥಿತಿಯನ್ನು ಸ್ಥಿತಿಯನ್ನು ಸ್ಥಾಪಿಸಿಕೊಂಡಿರುವನೋ, ಅವನು ಎಲ್ಲ ರೀತಿಯ ಆಕ್ರಮಣಗಳನ್ನು ಎದುರಿಸಬಹುದು, ಭಾವನಾತ್ಮಕ ಆಕ್ರಮಣಗಳನ್ನು ಅಥವಾ ಯಾವುದೇ ಪರೀಕ್ಷೆಗಳಾಗಿರಲಿ; ಏಕೆಂದರೆ ಜೀವನವು ಸಂಪೂರ್ಣವಾಗಿ ಈ ವಿಷಯಗಳಿಂದ ಮಾಡಲ್ಪಟ್ಟಿದೆ – ಅಹಿತಕರತೆ, ಕಿರಿಕಿರಿಗಳು – ಅವುಗಳು ಚಿಕ್ಕದಾಗಿದ್ದರೂ ಅವುಗಳನ್ನು ಅನುಭವಿಸುವ ವ್ಯಕ್ತಿಗೆ ಅನುಗುಣವಾಗಿರುತ್ತವೆ, ಮತ್ತು ಹೀಗಾಗಿ ಅವನು ಸ್ವಾಭಾವಿಕವಾಗಿ ಅವುಗಳನ್ನು ತುಂಬಾ ದೊಡ್ಡದಾಗಿ ಅನುಭವಿಸುತ್ತಾನೆ, ಏಕೆಂದರೆ ಅವು ಅವನಿಗೆ ಅನುಗುಣವಾಗಿರುತ್ತವೆ. ಸರಿ, ವಿವೇಚನೆಯು ಸ್ವಲ್ಪ ಹಿಂದೆ ನಿಂತು, ಎಲ್ಲವನ್ನೂ ನೋಡಿ, ನಗುತ್ತಾ ಹೇಳಬಹುದು, " ಓಹ್! ಇಲ್ಲ, ಇಂತಹ ಚಿಕ್ಕ ವಿಷಯಕ್ಕೆ ಗೊಂದಲ ಮಾಡಬಾರದು."

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/182–183**

**ಪ್ರೀತಿಸಲು ಕಲಿಯಿರಿ**

ಸ್ವಾತಂತ್ರ್ಯ!... ಒಬ್ಬ ಹಳೆಯ ಗೂಢವಿದ್ಯಾ ತಜ್ಞ ಮತ್ತು ಜ್ಞಾನಿ ಯಾರೋ ಒಬ್ಬರಿಗೆ ನೀಡಿದ ಸುಂದರವಾದ ಉತ್ತರವನ್ನು ನಾನು ಕೇಳಿದ್ದನ್ನು ನೆನಪಿಸಿಕೊಳ್ಳುತ್ತೇನೆ. ಆ ವ್ಯಕ್ತಿ ಹೇಳಿದ್ದು, "ನಾನು ಸ್ವತಂತ್ರನಾಗಿರಲು ಬಯಸುತ್ತೇನೆ! ನಾನು ಸ್ವತಂತ್ರ ಜೀವಿ! ನಾನು ಸ್ವತಂತ್ರನಾಗಿದ್ದಾಗ ಮಾತ್ರ ಅಸ್ತಿತ್ವ!" ಮತ್ತು ಇನ್ನೊಬ್ಬರು ನಗುತ್ತಾ ಉತ್ತರಿಸಿದರು, "ಹಾಗಾದರೆ ಅದರ ಅರ್ಥ ಯಾರೂ ನಿಮ್ಮನ್ನು ಪ್ರೀತಿಸುವುದಿಲ್ಲ, ಏಕೆಂದರೆ ಯಾರಾದರೂ ನಿಮ್ಮನ್ನು ಪ್ರೀತಿಸಿದರೆ, ನೀವು ತಕ್ಷಣ ಆ ಪ್ರೀತಿಯ ಮೇಲೆ ಅವಲಂಬಿತರಾಗುತ್ತೀರಿ."

ಇದು ಒಂದು ಸುಂದರವಾದ ಉತ್ತರವಾಗಿದೆ, ಏಕೆಂದರೆ ನಿಜವಾಗಿಯೂ ಏಕತೆಯ ಕಡೆಗೆ ಕರೆದೊಯ್ಯುವುದು ಪ್ರೀತಿಯೇ ಆಗಿದೆ, ಮತ್ತು ಈ ಏಕತೆಯೇ ಸ್ವಾತಂತ್ರ್ಯದ ನಿಜವಾದ ಅಭಿವ್ಯಕ್ತಿಯಾಗಿದೆ. ಆದ್ದರಿಂದ, ಯಾರು ತಮ್ಮ ಸ್ವಾತಂತ್ರ್ಯದ ಹಕ್ಕಿನ ಹೆಸರಿನಲ್ಲಿ ಸ್ವಾತಂತ್ರ್ಯವನ್ನು ಬೇಡುತ್ತಾರೋ, ಅವರು ಈ ನಿಜವಾದ ಸ್ವಾತಂತ್ರ್ಯಕ್ಕೆ ಸಂಪೂರ್ಣವಾಗಿ ಬೆನ್ನು ತೋರಿಸುತ್ತಾರೆ, ಏಕೆಂದರೆ ಅವರು ಪ್ರೀತಿಯನ್ನು ನಿರಾಕರಿಸುತ್ತಾರೆ.

ವಿಕೃತಿಯು ನಿರ್ಭಂದದಿಂದ ಬರುತ್ತದೆ.

ಒಬ್ಬರು ಬಲವಂತದಿಂದ ಪ್ರೀತಿಸಲಾರರು, ನಿಮ್ಮನ್ನು ಪ್ರೀತಿಸಲು ಒತ್ತಾಯ ಮಾಡಲಾಗದು, ಅದೆಂದಿಗೂ ಪ್ರೀತಿಯಾಗಲು ಸಾಧ್ಯವಿಲ್ಲ. ಆದ್ದರಿಂದ, ಬಲವಂತವು ಮಧ್ಯ ಪ್ರವೇಶಿಸಿದ ತಕ್ಷಣವೇ ಅದು ಸುಳ್ಳಾಗುತ್ತದೆ. ಆದ್ದರಿಂದ ಒಳ ಮನಸ್ಸಿನ ಎಲ್ಲಾ ಕ್ರಿಯೆಗಳು ಸ್ವಯಂಪ್ರೇರಿತ ಕ್ರಿಯೆಗಳಾಗಿರಬೇಕು, ಆ ಸ್ವಯಂಪ್ರೇರಣೆ ಒಳಗಿನ ಸಾಮರಸ್ಯದಿಂದ ಬರಬೇಕು, ಒಂದು ತಿಳುವಳಿಕೆಯಿಂದ – ಸ್ವಯಂಪ್ರೇರಿತ ಆತ್ಮ ಸಮರ್ಪಣೆಯಿಂದ – ಆಳವಾದ ಸತ್ಯಕ್ಕೆ, ಅಸ್ತಿತ್ವದ ವಾಸ್ತವಕ್ಕೆ, ಮೂಲಕ್ಕೆ ಮತ್ತು ಗುರಿಗೆ ಮರಳುವುದರಿಂದ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/51–52**

## ಇಷ್ಟ–ಅನಿಷ್ಟಗಳನ್ನು ಸೋಲಿಸಿರಿ

....ಕೆಲವು ಸ್ವಭಾವಗಳು ಮೂಲತಃ ಕೆಟ್ಟದಾಗಿರುತ್ತವೆ, ಕೆಲವು ಜೀವಿಗಳು ಕೆಟ್ಟವರಾಗಿ ಹುಟ್ಟುತ್ತವೆ ಮತ್ತು ಹಾನಿ ಮಾಡಲು ಇಷ್ಟಪಡುತ್ತವೆ; ಮತ್ತು ತಾರ್ಕಿಕವಾಗಿ, ಒಬ್ಬರು ಸಂಪೂರ್ಣ ಸಹಜವಾಗಿದ್ದರೆ, ಅಸಾಧುವಾಗಿರದಿದ್ದರೆ, ಪ್ರಾಣಿಗಳಿರುವಂತೆ ಸಹಜವಾಗಿದ್ದರೆ – ಈ ದೃಷ್ಟಿಕೋನದಿಂದ ನೋಡಿದರೆ ಅವು ಮನುಷ್ಯರಿಗಿಂತ ಬಹಳ ಶ್ರೇಷ್ಠವಾಗಿರುತ್ತವೆ; ವಿಕೃತಿ ಮಾನವತೆಯೊಂದಿಗೆ ಶುರುವಾಗುತ್ತದೆ – ನಂತರ ಯಾವುದಾದರೂ ಮೂಲಭೂತವಾಗಿ ಅಪಾಯಕಾರಿಯಾದ ವಸ್ತುವಿನಿಂದ ದೂರ ನಿಲ್ಲುವಂತೆ, ಒಬ್ಬರು ಆ ದಾರಿಯಿಂದ ದೂರ ಸರಿಯುತ್ತಾರೆ. ಆದರೆ ಸಂತೋಷದ ವಿಷಯವೆಂದರೆ, ಈ ಪ್ರಕರಣಗಳು ಪದೇ ಪದೇ ಸಂಭವಿಸುವ ಪ್ರಕರಣಗಳಲ್ಲ; ಜೀವನದಲ್ಲಿ ನಾವು ಸಾಮಾನ್ಯವಾಗಿ ಎದುರಿಸುವಂಥ ಸ್ವಭಾವಗಳು ಅಂದರೆ, ಒಳ್ಳೆಯದು ಮತ್ತು ಕೆಟ್ಟದರ ನಡುವೆ ಒಂದು ರೀತಿಯ ಸಮತೋಲನವಿರುವ ಬಗೆಬಗೆಯ ಸ್ವಭಾವಗಳಾಗಿವೆ, ಮತ್ತು ನಾವು ಒಳ್ಳೆಯ ಮತ್ತು ಕೆಟ್ಟದಾದ ಎರಡೂ ಸಂಬಂಧಗಳನ್ನು ನಿರೀಕ್ಷಿಸಬಹುದು. ಅಲ್ಲಿ ಯಾವುದೇ ಗಹನವಾದ ಅನಿಷ್ಟವನ್ನು ಅನುಭವಿಸಲು ಕಾರಣವಿಲ್ಲ, ಏಕೆಂದರೆ, ಒಬ್ಬರು ಸ್ವತಃ ಸಂಪೂರ್ಣವಾಗಿ ಕಲೆತಿರುವುದರಿಂದ (ನಗುತ್ತಾ), ಇಷ್ಟವು ಇಷ್ಟವನ್ನು ಕೂಡುತ್ತದೆ!

ಕೆಲವು ಜನರು ಪ್ರೇತಗಳಂತೆ ಇರುತ್ತಾರೆಂದೂ ಸಹ ಹೇಳಲಾಗುತ್ತದೆ, ಮತ್ತು ಅವರು ಒಬ್ಬ ವ್ಯಕ್ತಿಯ ಹತ್ತಿರ ಬಂದಾಗ ಅವರು ಆತನ ಪ್ರಾಣ ಹಾಗೂ ಶಕ್ತಿಯನ್ನು ತಕ್ಷಣವೇ ಹೀರಿ ಬಿಡುತ್ತವೆ, ಹಾಗಾಗಿ ಒಂದು ಗಂಭೀರವಾದ ಅಪಾಯದಿಂದ ಎಚ್ಚರಿಕೆಯಿಂದ ಇರುವಂತೆ, ನಾವು ಅವುಗಳಿಂದ ಹುಷಾರಾಗಿರಬೇಕು. ಆದರೆ ಅದೂ ಕೂಡ ... ಅದು ಅಸ್ತಿತ್ವದಲ್ಲಿ ಇಲ್ಲವೆಂದಲ್ಲ, ಆದರೆ ಅದು ಪುನರಾವರ್ತನೆಯಾಗುವುದಿಲ್ಲ, ಒಬ್ಬರು ಇಂತಹ ವ್ಯಕ್ತಿಯನ್ನು ಭೇಟಿಯಾದಾಗ, ಖಂಡಿತವಾಗಿಯೂ ಅವರು ಓಡಿ ಹೋಗುವಷ್ಟು ಸಂಪೂರ್ಣವಲ್ಲ.

ಆದ್ದರಿಂದ, ಮೂಲತಃ, ಒಬ್ಬರು ಆಧ್ಯಾತ್ಮಿಕವಾಗಿ ಬೆಳೆಯ ಬಯಸಿದರೆ, ಅವರು ಮಾಡಬೇಕಾದ ಮೊದಲ ಕೆಲಸ, ತಮ್ಮ ಅನಿಷ್ಟಗಳನ್ನು ... ಮತ್ತು ತಮ್ಮ ಇಷ್ಟಗಳನ್ನು ಮೀರಿ ಬೆಳೆಯುವುದು. ಎಲ್ಲವನ್ನೂ ನಗುವಿನಿಂದ ನೋಡಿರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/181–182**

**ಒಂದು ನಿರ್ಣಾಯಕ ವಿಮೋಚನೆ**

.... ನೀವು ಆ ಪಥದ ಮೇಲೆ ಮುಂದುವರೆಯಲು ಬಯಸಿದರೆ, ಮೊದಲು ನೀವು ಬಹಳ ವಿನಮ್ರವಾಗಿ, ಹೊಸ ಹುಟ್ಟಿನೆಡೆಗೆ ನಿಮ್ಮ ಪಥದ ಮೇಲೆ ಪ್ರಯಾಣವನ್ನು ಆರಂಭಿಸಬೇಕು, ಮತ್ತು ನೀವು ಅಧಿಮಾನಸ ಅನುಭವವನ್ನು ಹೊಂದುಬಹುದೆನ್ನುವ ಭ್ರಮೆಯನ್ನು ಬೆಳೆಸಿಕೊಳ್ಳುವ ಮೊದಲು ಅದನ್ನು ಸಾಧಿಸಬೇಕು.

ನಿಮ್ಮನ್ನು ಸಮಾಧಾನ ಪಡಿಸಲು, ಈ ಸಮಯಕ್ಕೆ ನೀವು ಭೂಮಿಯ ಮೇಲೆ ಇರುವಿರಿ ಎನ್ನುವ ವಾಸ್ತವಾಂಶದಿಂದ ನಾನು ನಿಮಗೆ ಹೇಳಬಹುದು – ನಿಮಗೆ ಅದರ ಬಗ್ಗೆ ಅರಿವಿದ್ದರೂ ಇಲ್ಲದಿದ್ದರೂ, ನಿಮಗೆ ಅದು ಬೇಕಿದ್ದರೂ ಬೇಕಿಲ್ಲದಿದ್ದರೂ, ನೀವು ಉಸಿರಾಡುವ ಗಾಳಿಯೊಂದಿಗೆ, ಭೂಮಿಯ ಪರಿಸರದಲ್ಲಿ ಹರಡುತ್ತಿರುಂಥ ಈ ಅಧಿಮಾನಸ ಸತ್ವವನ್ನು ನೀವು ಹೀರಿಕೊಳ್ಳುತ್ತಿರುತ್ತೀರಿ. ಮತ್ತು ಅದು ನಿಮ್ಮಲ್ಲಿ ವಿಷಯಗಳನ್ನು ಸಿದ್ಧಪಡಿಸುತ್ತಿದೆ, ನೀವು ನಿರ್ಣಾಯಕ ಹೆಜ್ಜೆ ಹಾಕಿದ ತಕ್ಷಣವೇ ಅದು ಪ್ರಕಟವಾಗುತ್ತದೆ.

ಇದು ನಿಮಗೆ ನಿರ್ಣಾಯಕ ಹೆಜ್ಜೆಯನ್ನು ತೆಗೆದುಕೊಳ್ಳುವಲ್ಲಿ ಸಹಾಯ ಮಾಡುವುದೋ ಅಥವಾ ಇಲ್ಲವೊ ಎನ್ನುವುದು ಇನ್ನೂ ಅಧ್ಯಯನ ಮಾಡಬೇಕಾದ ಮತ್ತೊಂದು ಪ್ರಶ್ನೆಯಾಗಿದೆ, ಏಕೆಂದರೆ ಈಗ ಸಂಭವಿಸುತ್ತಿರುವಂಥ ಮತ್ತು ಮುಂದೆ ಪದೇ ಪದೇ ಸಂಭವಿಸುವ ಅನುಭವಗಳು, ಮೂಲಭೂತವಾಗಿ ಹೊಸ ಬಗೆಯಾಗಿರುವುದರಿಂದ, ಮುಂದೆ ಏನಾಗುತ್ತದೆ ಎನ್ನುವುದು ನಮಗೆ ಮುಂಚಿತವಾಗಿ ತಿಳಿಯಲು ಸಾಧ್ಯವಿಲ್ಲ; ನಾವು ಅಧ್ಯಯನ ಮಾಡಲೇಬೇಕು, ಮತ್ತು ಸಂಪೂರ್ಣ ಅಧ್ಯಯನದ ನಂತರ ಈ ಅಧಿಮಾನಸ ಭಾವವು ಹೊಸ ಹುಟ್ಟಿನ ಕಾರ್ಯವನ್ನು ಸುಲಭವಾಗಿಸುವುದೋ ಅಥವಾ ಇಲ್ಲವೋ ಎಂದು ನಿಶ್ಚಿತವಾಗಿ ನಾವು ಹೇಳಬಹುದು... ನಾನಿದನ್ನು ನಿಮಗೆ ಸ್ವಲ್ಪ ಸಮಯದ ನಂತರ ಹೇಳುತ್ತೇನೆ. ಈ ಕ್ಷಣಕ್ಕೆ ಈ ವಿಷಯಗಳ ಮೇಲೆ ಅವಲಂಬಿಸದೇ, ಬಹಳ ಸರಳವಾಗಿ, ಆಧ್ಯಾತ್ಮಿಕ ಜೀವನದಲ್ಲಿ ಹುಟ್ಟಲು ನಿಮ್ಮ ಪ್ರಯಾಣವನ್ನು ಶುರು ಮಾಡುವುದು ಉತ್ತಮ.

ಈ ರೀತಿ ನಿಮಗೆ ಆದಾಗ, ನೀವು ನಿಮ್ಮನ್ನೇ ಕೇಳುವ ಅಥವಾ ನನ್ನನ್ನು ಕೇಳುವ ಬಹುತೇಕ ಎಲ್ಲಾ ಪ್ರಶ್ನೆಗಳು ಪರಿಹಾರವಾಗುತ್ತವೆ.

ಅದೇನೆ ಆಗಿರಲಿ, ಜೀವನದ ಬಗ್ಗೆ ನಿಮ್ಮ ದೃಷ್ಟಿಕೋನ ತುಂಬಾ ಭಿನ್ನವಾಗಿರುತ್ತದೆ, ಆದ್ದರಿಂದ ಯಾರಾದರೂ ಆಧ್ಯಾತ್ಮಿಕವಾಗಿ ಜೀವಿಸುವುದರ ಬಗ್ಗೆ ಮಾತನಾಡಿದಾಗ ಅದರ ಅರ್ಥವೇನು ಎಂಬುದನ್ನು ನೀವು ಅರ್ಥಮಾಡಿಕೊಳ್ಳುತ್ತೀರಿ. ಮತ್ತು ಆ ಕ್ಷಣದಲ್ಲಿ ನೀವು ಒಂದು ಮಹತ್ವದ ವಿಷಯವನ್ನು, ಬಹಳ ಮಹತ್ವದ ವಿಷಯವನ್ನು ಅರ್ಥಮಾಡಿಕೊಳ್ಳುತ್ತೀರಿ: ಅಹಂಕಾರವಿಲ್ಲದೆ ಹೇಗೆ ಜೀವಿಸಬೇಕು ಎನ್ನುವ ವಿಷಯ.

ಅಲ್ಲಿಯವರೆಗೆ, ನೀವದನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ. ಇಡೀ ಜೀವನವು ಅಹಂಕಾರದ ಮೇಲೆ ಎಷ್ಟು ಅವಲಂಬಿತವಾಗಿದೆ ಎಂದರೆ, ಅಹಂಕಾರವಿಲ್ಲದೆ ಜೀವಿಸಲು ಮತ್ತು ಕಾರ್ಯ ನಿರ್ವಹಿಸಲು ಸಂಪೂರ್ಣ ಅಸಾಧ್ಯ ಎಂದು ಕಾಣುತ್ತದೆ, ಆದರೆ ಈ ಹೊಸ ಜನನದ ನಂತರ, ನೀವು ಅಹಂಕಾರದತ್ತ ನಗುತ್ತಾ ನೋಡಿ ಹೀಗೆ ಹೇಳಬಹುದು "ನನ್ನ ಗೆಳೆಯಾ, ನನಗೆ ಇನ್ನು ನಿನ್ನ ಅಗತ್ಯವಿಲ್ಲ".

ಇದು ನಿಮಗೆ ಅತ್ಯಂತ ನಿರ್ಣಾಯಕವಾದ ವಿಮೋಚನೆಯ ಭಾವವನ್ನು ತರುವ ಫಲಿತಾಂಶಗಳಲ್ಲಿ ಒಂದಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/337–338**

**ಅವಸರ ಮಾಡಬೇಡಿ**

ಜನರು ಆತುರದಲ್ಲಿದ್ದಾರೆ, ಅವರು ಫಲಿತಾಂಶಗಳನ್ನು ತಕ್ಷಣವೇ ನೋಡಬಯಸುತ್ತಾರೆ.

ಮತ್ತು ನಂತರ, ಅವರು ಅತಿಮಾನಸವನ್ನು ಕೆಳಗೆಳೆಯುತ್ತಿದ್ದೇವೆಂದು ನಂಬುತ್ತಾರೆ – ಅವರು, ಅವರನ್ನು ಅಪಹಾಸ್ಯ ಮಾಡುವಂಥ ಕೆಲವು ಸಣ್ಣ ಪ್ರಾಣಿಕ ವ್ಯಕ್ತಿತ್ವವನ್ನು ಕೆಳಗೆ ಎಳೆಯುತ್ತಾರೆ ಮತ್ತು ಕೊನೆಯಲ್ಲಿ ಅದು ಅವರನ್ನು ಮೂರ್ಖರ ಹಾಗೆ ವರ್ತಿಸುವಂತೆ ಮಾಡುತ್ತದೆ. ಇದು ಹೆಚ್ಚಾಗಿ ಸಂಭವಿಸುವುದು – ನೂರಕ್ಕೆ ತೊಂಬತ್ತೊಂಬತ್ತು ಬಾರಿ.

ಒಂದು ಚಿಕ್ಕ ವ್ಯಕ್ತಿತ್ವ, ಒಂದು ಮಹತ್ವದ ಕ್ರಿಯೆಯನ್ನು ಮಾಡುವಂಥ ಮತ್ತು ಬೆಳಕಿನಾಟಗಳ ಮಹಾಪ್ರದರ್ಶನ ಮಾಡುವ ಒಂದು ಪ್ರಾಣಿಕ ಅಂಶ. ಆಗ (ಅತಿಮಾನಸವನ್ನು) "ಎಳೆದಂಥ" ಬಡಪಾಯಿಯು ಬೆರಗಾಗುವನು; ಅವನು ಹೇಳುತ್ತಾನೆ, "ಅಲ್ಲಿ, ಇರುವುದು ಅತಿಮಾನಸ", ಮತ್ತು ಆತ ಗುಂಡಿಯಲ್ಲಿ

ಬೀಳುತ್ತಾನೆ. ನೀವು ನಿಜವಾದ ಬೆಳಕನ್ನು ಸ್ಪರ್ಶಿಸಿದಾಗ, ಅದನ್ನು ಕಂಡಾಗ, ಅದರೊಡನೆ ಸಂಪರ್ಕಕ್ಕೆ ಬಂದಾಗ ಮಾತ್ರ ನೀವು ಪ್ರಾಣವನ್ನು ಗುರುತಿಸಬಹುದು, ಮತ್ತು ಒಟ್ಟಿನಲ್ಲಿ ಅದು ವೇದಿಕೆಯ ಮೇಲಿನ ಬೆಳಕಿನಾಟ, ಒಂದು ಕೃತಕ ಬೆಳಕು ಎನ್ನುವುದನ್ನು ನೀವು ಗ್ರಹಿಸುವಿರಿ. ಇಲ್ಲದಿದ್ದರೆ ಉಳಿದವರು ಬೆರಗಾಗುವರು – ಅದು ಬೆರಗುಗೊಳಿಸುವಿಕೆಯಾಗಿದೆ, ಅದು "ಅದ್ಭುತ"ವಾಗಿದೆ, ಆಗ ಅವರು ಮೋಸಹೋಗುತ್ತಾರೆ. ನೀವು ಕಂಡಾಗ ಮತ್ತು ನೀವು ಸತ್ಯದೊಡನೆ ಸಂಪರ್ಕವನ್ನು ಹೊಂದಿದಾಗ ಮಾತ್ರ, ನೀವು ನಗುವಿರಿ, ಆಹ್!.

ಇದು ಕಪಟತೆಯಾಗಿದೆ, ಆದರೆ ಕಪಟತೆಯನ್ನು ಗುರುತಿಸಲು ನೀವು ಸತ್ಯವನ್ನು ತಿಳಿದಿರಲೇಬೇಕು.

ಮೂಲದಲ್ಲಿ, ಅದು ಎಲ್ಲಕ್ಕೂ ಒಂದೇ ತರಹ ಇರುತ್ತದೆ. ಪ್ರಾಣ ಎಂಬುದು, ಪ್ರದರ್ಶನ ನೀಡುವಂಥ ಒಂದು ಅತೀತ ವೇದಿಕೆಯಂತೆ – ತುಂಬಾ ಆಕರ್ಷಕವಾದ, ಕಣ್ಣು ಕುಕ್ಕುವಂತಹ, ಮೋಸಗೊಳಿಸುವಂತಹ; ನೀವು ಸತ್ಯ ಸಂಗತಿಯನ್ನು ತಿಳಿದಾಗ ಮಾತ್ರ ನೀವು ತಕ್ಷಣವೇ, ಸಹಜವಾಗಿ, ಯಾವುದೇ ತರ್ಕವಿಲ್ಲದೆ ಗುರುತಿಸುತ್ತೀರಿ, ಮತ್ತು "ಇಲ್ಲ, ನನಗೆ ಅದು ಬೇಡ," ಎಂದು ಹೇಳುವಿರಿ.

ಮತ್ತು ಎಲ್ಲದಕ್ಕೂ ಅದು ಹಾಗೆಯೇ ಆಗಿರುತ್ತದೆ. ಮಾನವ ಜೀವನದಲ್ಲಿ ಅದು ದೊಡ್ಡ ಪ್ರಾಮುಖ್ಯತೆಯನ್ನು ಪಡೆದಿರುವುದು ಪ್ರೀತಿಯ ವಿಷಯಕ್ಕೆ ಸಂಬಂಧಿಸಿದಂತೆ. ಪ್ರಾಣಿಕ ತೀವ್ರತೆಗಳು, ಮುಖ್ಯವಾದ ಆಕರ್ಷಣೆಗಳು ಬಹುತೇಕ ಎಲ್ಲೆಡೆ ನಿಜವಾದ (ಶಾಂತವಾಗಿರುವ) ಭಾವನೆಯ ಸ್ಥಾನವನ್ನು ತೆಗೆದುಕೊಂಡಿವೆ, ಆದರೆ ಇನ್ನೊಂದು ನಿಮ್ಮನ್ನು ಅಶಾಂತಿಯಲ್ಲಿರುವಂತೆ ಮಾಡುತ್ತದೆ, ನಿಮಗೆ "ಜೀವಂತ" ಎಂಬ ಭಾವನೆಯನ್ನು ನೀಡುತ್ತದೆ. ಇದು ತುಂಬಾ ಮೋಸದಾಯಕವಾಗಿದೆ. ಮತ್ತು ನೀವು ನಿಜ ಸಂಗತಿಯನ್ನು ತಿಳಿಯದೆ, ನೀವು ಅದನ್ನು ತಿಳಿಯುವುದಿಲ್ಲ, ಅದನ್ನು ಅನುಭವಿಸುವುದಿಲ್ಲ, ಅದನ್ನು ಸ್ಪಷ್ಟವಾಗಿ ಗ್ರಹಿಸುವುದಿಲ್ಲ. ನೀವು ನಿಸರ್ಗಾತೀತ ಮತ್ತು ದೈವೀ ಒಂದಾಗುವಿಕೆಯ ಮೂಲಕ ನಿಜವಾದ ಪ್ರೀತಿಯನ್ನು ಸ್ಪರ್ಶ ಮಾಡಿದ್ದರೆ, ಆಗ ಬೇರೆ ವಿಷಯವು ಜೊಳ್ಳಾಗಿ, ನಿಸ್ಸಾರವಾಗಿ, ಬರಿದಾಗಿ ತೋರುತ್ತದೆ – ಒಂದು ತೋರಿಕೆಯಾಗಿ ಮತ್ತು ಹಾಸ್ಯವಾಗಿ ಕಾಣುತ್ತದೆ, ಅದು ಹಾಸ್ಯಕ್ಕಿಂತ ಹೆಚ್ಚಾಗಿ ದಃಖಕರವಾಗಿರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/22–23**

**ಪ್ರಾಣದ ಪರಿವರ್ತನೆ**

ಅಗ್ನಿಯ ಪ್ರಭಾವದಿಂದಾಗಿ, ನಿಮ್ಮ ಪ್ರಾಣದ ಪರಿವರ್ತನೆಯ ಇನ್ನೊಂದು ಗಮನಾರ್ಹ ಲಕ್ಷಣವೆಂದರೆ, ನೀವು ನಿಮ್ಮ ಕಷ್ಟಗಳನ್ನು ಮತ್ತು ಅಡಚಣೆಗಳನ್ನು ನಗುವಿನೊಂದಿಗೆ ಎದುರಿಸುವುದು. ಇನ್ನು ನೀವು ನಿಮ್ಮ ತಪ್ಪುಗಳ ಬಗ್ಗೆ ದುಃಖಿಸುತ್ತಾ ಮತ್ತು ಈ ಕ್ಷಣದಲ್ಲಿ ಬೇಕಾದಂಥ ಗುಣಮಟ್ಟದಲ್ಲಿ ನೀವು ಇಲ್ಲವೆಂದು ಪೂರ್ತಿಯಾಗಿ ನಿರಾಶೆಗೊಂಡು ಪ್ರಾಯಶ್ಚಿತ್ತ ಪಡುತ್ತ ಕುಳಿತುಕೊಳ್ಳುವುದಿಲ್ಲ. ನೀವು ಕೇವಲ ನಗುವಿನ ಮೂಲಕ ಖಿನ್ನತೆಯನ್ನು ಓಡಿಸುತ್ತೀರಿ. ಒಂದು ನೂರು ತಪ್ಪುಗಳೂ ನಿಮಗೆ ಅಪ್ರಸ್ತುತವೆನಿಸುತ್ತವೆ: ನೀವು ತಪ್ಪು ಮಾಡಿದ್ದೀರಿ ಎಂದು ನಗುವಿನೊಂದಿಗೆ ಒಪ್ಪಿಕೊಳ್ಳುತ್ತೀರಿ ಮತ್ತು ಮುಂದಿನ ದಿನಗಳಲ್ಲಿ ಆ ಮೂರ್ಖತನವನ್ನು ಮತ್ತೆ ಮಾಡುವುದಿಲ್ಲ ಎಂದು ನಗುವಿನೊಂದಿಗೆ ನಿರ್ಧರಿಸುತ್ತೀರಿ. ಎಲ್ಲಾ ಖಿನ್ನತೆ ಮತ್ತು ಮ್ಲಾನತೆಗಳು ಪ್ರತಿಕೂಲ ಶಕ್ತಿಗಳಿಂದ ಸೃಷ್ಟಿಸಲ್ಪಟ್ಟಿವೆ, ಆ ಶಕ್ತಿಗಳು ನಿಮ್ಮ ಮೇಲೆ ವಿಷಣ್ಣ ಮನಃಸ್ಥಿಯನ್ನು ತಂದೊಡ್ಡುವಾಗ ಎಂದಿಗೂ ಆನಂದಿಸುವುದಿಲ್ಲ. ನಮ್ರತೆ ಎನ್ನುವುದು ನಿಜವಾಗಿಯೂ ಒಂದು ವಿಷಯ ಮತ್ತು ಖಿನ್ನತೆ ಎನ್ನುವುದು ಸಂಪೂರ್ಣ ಬೇರೆಯದೇ ಸಂಗತಿಯಾಗಿದೆ, ಮೊದಲನೆಯದು ದೈವೀ ಕ್ರಿಯೆ ಮತ್ತು ಎರಡನೆಯದು ನಿಗೂಢ ಶಕ್ತಿಗಳ ತುಂಬಾ ಕ್ರೂರವಾದ ಅಭಿವ್ಯಕ್ತಿ. ಆದ್ದರಿಂದ, ನಿಮ್ಮ ಸಮಸ್ಯೆಗಳನ್ನು ಸಂತೋಷದಿಂದ ಎದುರಿಸಿ, ಪರಿವರ್ತನೆಯ ಪಥದಲ್ಲಿ ಬರುವ ಅಡೆತಡೆಗಳನ್ನು ಯಾವಾಗಲೂ ಸಂತೋಷದಿಂದ ಎದುರಿಸಿ. ಶತ್ರುವನ್ನು ಓಡಿಸಲು ಉತ್ತಮ ಮಾರ್ಗವೆಂದರೆ ಅವನನ್ನು ನೋಡಿ ನಗುವುದು! ನೀವು ದಿನಪೂರ್ತಿ ಹೋರಾಡಿದರೂ ಆತನು ಕುಂದದ ಸತ್ವವನ್ನು ತೋರಿಸಬಹುದು; ಆದರೆ ಒಮ್ಮೆ ಆತನನ್ನು ನೋಡಿ ನಕ್ಕರೆ, ಆಗ ನೋಡಿ ಅವನು ತನ್ನ ಕಾಲಿಗೆ ಬುದ್ಧಿ ಹೇಳುತ್ತಾನೆ. ಆತ್ಮವಿಶ್ವಾಸದ ಒಂದು ನಗು ಮತ್ತು ದೇವರಲ್ಲಿ ನಂಬಿಕೆಯು ಸಾಧ್ಯವಿರುವ ಅತ್ಯಂತ ಶಕ್ತಿಶಾಲಿ ಬಲವಾಗಿದೆ – ಅದು ಶತ್ರುವಿನ ಹೊರ ವೇಷವನ್ನು ಭೇದಿಸುತ್ತದೆ, ಅವನ ಅಂತಸ್ತಿನಲ್ಲಿ ಅನಾಹುತವನ್ನು ಕವಿಸುತ್ತದೆ ಮತ್ತು ನಿಮ್ಮನ್ನು ವಿಜಯೋತ್ಸಾಹದಿಂದ ಮುಂದಕ್ಕೆ ಕೊಂಡೊಯ್ಯುತ್ತದೆ.

ಸಾಕ್ಷಾತಾರದ ಪ್ರಕ್ರಿಯೆಯಲ್ಲಿ ಪರಿವರ್ತನೆಯಾದ ಪ್ರಾಣವೂ ಸಹ ಆನಂದವನ್ನು ಅನುಭವಿಸುತ್ತದೆ. ಆ ಪ್ರಕ್ರಿಯೆಯಲ್ಲಿ ಇರುವ ಎಲ್ಲಾ ಕಷ್ಟಗಳನ್ನು

ಅದು ಉತ್ಸಾಹದಿಂದ ಸ್ವೀಕರಿಸುತ್ತದೆ, ಸತ್ಯವನ್ನು ತೋರಿಸಿದಾಗ ಮತ್ತು ಅದರ ನಿಮ್ಮ ಸ್ವಭಾವದಲ್ಲಿನ ಮಿಥ್ಯಾ ಆಟವನ್ನು ಬಯಲಿಗೆಳೆದಾಗ ಅದು ಪಡುವ ಆನಂದಕ್ಕಿಂತ ಹೆಚ್ಚು ಆನಂದದ ಅನುಭವ ಎಂದಿಗೂ ಆಗುವುದಿಲ್ಲ. ಅದು ಯೋಗವನ್ನು ಒಂದು ಭಾರವೆನ್ನುವಂತೆ ಮಾಡುವುದಿಲ್ಲ, ಆದರೆ ಅದು ತುಂಬಾ ಆನಂದದಾಯಕ ಕೆಲಸವೇನೊ ಎಂಬಂತೆ ಮಾಡುತ್ತದೆ. ಅದು ಪರಿವರ್ತನೆಯ ಶರತ್ತಾಗಿದ್ದರೆ, ನಗುವಿನೊಂದಿಗೆ ಅದು ಹೆಚ್ಚು ಕಷ್ಟವನ್ನು ಸಹಿಸಲು ಸಿದ್ಧವಾಗಿದೆ. ಯಾವುದೇ ತಕರಾರು ಮಾಡದೆ ಅಥವಾ ಗೊಣಗದೆ, ಅದು ಸಂತೋಷದಿಂದ ಸಹಿಸಿಕೊಳ್ಳುತ್ತದೆ ಏಕೆಂದರೆ ಅದು ದೇವರಿಗಾಗಿ ಹಾಗೆ ಮಾಡುತ್ತದೆ. ಜಯವು ಖಂಡಿತವಾಗಿ ಸಾಧಿಸಲ್ಪಡುತ್ತದೆ ಎಂಬ ಅಚಲ ನಂಬಿಕೆಯನ್ನು ಅದು ಹೊಂದಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/138–139**

**ಎಲ್ಲಾ ಯಾತನೆಯು ನಮ್ಮ ಶರಣಾಗತಿಯು ಸಂಪೂರ್ಣವಾಗಿಲ್ಲ ಎಂಬುದರ ಸಂಕೇತವಾಗಿದೆ**

ಕಷ್ಟಪಡುವವರಿಗೆಲ್ಲರಿಗೂ ಹೇಳಬೇಕಾದುದು ಒಂದೇ ಸಂಗತಿಯಾಗಿದೆ: ಎಲ್ಲಾ ಯಾತನೆಯು (ಕಷ್ಟವು) ನಮ್ಮ ಶರಣಾಗತಿಯು ಸಂಪೂರ್ಣವಾಗಿಲ್ಲ ಎಂಬುದರ ಸಂಕೇತವಾಗಿದೆ ಎನ್ನುವ ಸಂಗತಿ. ನಿಮ್ಮಲ್ಲಿ ಒಂದು "ಹೊಡೆತ"ವನ್ನು ಅನುಭವಿಸಿದಾಗ, "ಓಹ್, ಇದು ಚನ್ನಾಗಿಲ್ಲ" ಅಥವಾ "ಈ ಸನ್ನಿವೇಶವು ಕಷ್ಟಕರವಾಗಿದೆ" ಎಂದು ಹೇಳುವ ಬದಲು, "ನನ್ನ ಸಮರ್ಪಣೆಯು ಪರಿಪೂರ್ಣವಾಗಿಲ್ಲ," ಎಂದು ನೀವು ಹೇಳಬೇಕು. ಆಗ ಅದೆಲ್ಲವೂ ಸರಿ ಹೋಗುತ್ತದೆ. ಆಮೇಲೆ ನಿಮಗೆ ಸಹಾಯ ಮಾಡುವ ಮತ್ತು ನಿಮ್ಮನ್ನು ಮಾರ್ಗದರ್ಶನ ಮಾಡುವ ಅನುಗ್ರಹವನ್ನು ನೀವು ಅನುಭವಿಸುತ್ತೀರಿ, ಮತ್ತು ನೀವು ಮುಂದುವರೆಯುತ್ತೀರಿ. ಮತ್ತು ಒಂದು ದಿನ, ಯಾವುದೂ ತೊಂದರೆ ಮಾಡಲಾರದಂಥ ಆ ಶಾಂತಿಯಯೊಳಗೆ ನೀವು ಕಾಣಬುರುವಿರಿ. ನೀವು ಎಲ್ಲಾ ವಿರುದ್ಧ ಶಕ್ತಿಗಳಿಗೆ, ವಿರುದ್ಧ ಚಲನೆಗಳಿಗೆ, ಆಕ್ರಮಣಗಳಿಗೆ, ತಪ್ಪು ತಿಳುವಳಿಕೆಗಳಿಗೆ, ಕೆಟ್ಟ ಮನಸ್ಸುಗಳಿಗೆ, ದೈವೀ ಅನುಗ್ರಹದ ಮೇಲಿನ ಪೂರ್ಣ ನಂಬಿಕೆಯಿಂದ ಬರುವ ಅದೇ ನಗುವಿನೊಂದಿಗೆ ಉತ್ತರಿಸುತ್ತೀರಿ. ಮತ್ತು ಇರುವುದು ಅದೊಂದೇ ದಾರಿ, ಬೇರೆ ಯಾವುದೂ ಇಲ್ಲ.

ಈ ಜಗತ್ತು ಒಂದು ಸಂಘರ್ಷದ, ಯಾತನೆಯ, ಕಷ್ಟದ, ಶ್ರಮದ ಜಗತ್ತಾಗಿದೆ; ಇದು ಅದರಿಂದಲೇ ಮಾಡಲ್ಪಟ್ಟಿದೆ. ಅದು ಇನ್ನೂ ಬದಲಾವಣೆಯಾಗಿಲ್ಲ, ಬದಲಾವಣೆಯಾಗುವ ಮೊದಲು ಅದು ಸ್ವಲ್ಪ ಸಮಯ ತೆಗೆದುಕೊಳ್ಳುತ್ತದೆ. ಮತ್ತು ಪ್ರತಿಯೊಬ್ಬರಿಗೂ ಹೊರಬರುವ ಒಂದು ಸಾಧ್ಯತೆಯಿದೆ. ನೀವು ಪರಮ ಅನುಗ್ರಹದ ಇರುವಿಕೆಯ ಮೇಲೆ ಭಾರ ಹಾಕಿದರೆ, ಅದೊಂದೇ ಹೊರಬರುವ ಮಾರ್ಗ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/398–399**

## ಒಬ್ಬ ಯೋಗಿಯ ನಿಜವಾದ ಮನೋಭಾವ

ನೀವು ದೈವೀ ಸನ್ನಧಿಗೆ ಬಂದಾಗ, ನಿಮ್ಮ ಎಲ್ಲಾ ಮಾನಸಿಕ ಕಲ್ಪನೆಗಳನ್ನು ಬಿಟ್ಟುಬಿಡಬೇಕು; ಆದರೆ, ಹಾಗೆ ಮಾಡುವ ಬದಲು, ನೀವು ನಿಮ್ಮ ಕಲ್ಪನೆಗಳನ್ನು ದೈವಿಕದ ಮೇಲೆ ಹಾಕುತ್ತೀರಿ ಮತ್ತು ದೈವಿಕವು ಅವುಗಳನ್ನು ಅನುಸರಿಸಬೇಕೆಂದು ಬಯಸುತ್ತೀರಿ. ಒಬ್ಬ ಯೋಗಿಗೆ ಇರಬೇಕಾದ ನಿಜವಾದ ಮನೋಭಾವವೆಂದರೆ ನಮ್ಯವಾಗಿರುವುದು ಮತ್ತು ದೈವೀ ಆದೇಶ ಏನೇ ಆಗಿದ್ದರೂ ಅದನ್ನು ಪಾಲಿಸಲು ಸಿದ್ಧವಾಗಿರುವುದು; ಅವನಿಗೆ ಯಾವುದೂ ಅತ್ಯಗತ್ಯವಾಗಿರಬಾರದು, ಯಾವುದೂ ಹೊರೆಯಾಗಿರಬಾರದು. ಆಧ್ಯಾತ್ಮಿಕ ಜೀವನ ನಡೆಸಲು ಬಯಸುವವರ ಮೊದಲ ಪ್ರಚೋದನೆಯು, ಸಾಮಾನ್ಯವಾಗಿ ತಮ್ಮಲ್ಲಿರುವ ಎಲ್ಲವನ್ನೂ ಬಿಸಾಡುವುದಾಗಿರುತ್ತದೆ; ಆದರೆ ಅವರು ಹೀಗೆ ಮಾಡುವುದು ಒಂದು ಹೊರೆಯಿಂದ ಮುಕ್ತರಾಗಲು ಬಯಸುವುದರಿಂದ, ದೈವಕ್ಕೆ ಶರಣಾಗಲು ಅಲ್ಲ. ಸಂಪತ್ತನ್ನು ಹೊಂದಿರುವ ಮತ್ತು ವಿಲಾಸ ಮತ್ತು ಆನಂದ ನೀಡುವ ವಸ್ತುಗಳಿಂದ ಸುತ್ತುವರಿದಿರುವ ಮನುಷ್ಯರು ದೈವದ ಕಡೆಗೆ ಹೊರಳುತ್ತಾರೆ, ಮತ್ತು ತಕ್ಷಣವೇ ಅವರ ಕಾರ್ಯವು ಈ ವಸ್ತುಗಳಿಂದ ಓಡಿಹೋಗುವುದಾಗಿರುತ್ತದೆ – ಅಥವಾ, ಅವರು ಹೇಳುವಂತೆ, "ಅವುಗಳ ಬಂಧನದಿಂದ ತಪ್ಪಿಸಿಕೊಳ್ಳುವುದಾಗಿರುತ್ತದೆ". ಆದರೆ ಇದೊಂದು ತಪ್ಪಾದ ಕ್ರಿಯೆ; ನಿಮ್ಮ ಹತ್ತಿರ ಇರುವ ವಸ್ತುಗಳು ನಿಮಗೆ ಸೇರಿವೆ ಎಂದು ನೀವು ಭಾವಿಸಬಾರದು, – ಅವು ದೈವಕ್ಕೆ ಸೇರಿವೆ. ನೀವು ಏನಾದರೊಂದು ಸಂಗತಿಯನ್ನು ಆನಂದಿಸಲು ದೈವಿಕ ಶಕ್ತಿಯು ಬಯಸಿದರೆ, ಅದನ್ನು ಆನಂದಿಸಿ; ಆದರೆ ಮುಂದಿನ ಕ್ಷಣದಲ್ಲೇ ನಗುಮುಖದೊಂದಿಗೆ ಅದನ್ನು ಬಿಟ್ಟುಕೊಡಲು ಸಿದ್ಧರಾಗಿರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/54–55** **–ಶ್ರೀಮಾತೆ**

# ಶ್ರೀ ಅರವಿಂದರ
# 'ಗೀತಾ ಪ್ರಬಂಧಗಳು'

**– ಅನು: ಜಾನ್ವಿ**

## 39

## ಎರಡನೆಯ ಸರಣಿ:
## ಅಧ್ಯಾಯ – 5
## ದೈವೀ ಸತ್ಯ ಮತ್ತು ಮಾರ್ಗ (5/1)

ಇಲ್ಲಿಂದ ಮುಂದೆ ಗೀತೆಯು ತನ್ನ ಪರಮೋಚ್ಚ ಮತ್ತು ಸಮಗ್ರ ರಹಸ್ಯವನ್ನು ಅನಾವರಣ ಮಾಡಲು ಉಪಕ್ರಮಿಸುತ್ತದೆ. ಪರಿಪೂರ್ಣತೆ ಮತ್ತು ಮೋಕ್ಷವನ್ನು ಬಯಸುವ ಸಾಧಕನು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ಸತ್ಯ ವಿಚಾರವನ್ನು ಮತ್ತು ತನ್ನ ಎಲ್ಲ ಆಧ್ಯಾತ್ಮಿಕ ಘಟಕಗಳನ್ನು ಮತ್ತು ಅವುಗಳ ಚಲನೆಯನ್ನು ಪರಿಪೂರ್ಣತೆಯೆಡೆಗೆ ಎತ್ತರಿಸಲು ಅನುಸರಿಸಬೇಕಾದ ನಿಯಮವನ್ನು ತಿಳಿಸಿಕೊಡುವತ್ತ ಗೀತೆ ಮುಖ ಮಾಡುತ್ತದೆ. ಈ ಪರಮ ರಹಸ್ಯವೇ ವಿಶ್ವಾತೀತ ಪರಾತ್ಪರನ ಪರಮ ರಹಸ್ಯವಾಗಿದೆ. ಅವನೇ ಎಲ್ಲೆಡೆ ಇದ್ದಾನೆ, ಅವನೇ ಎಲ್ಲವೂ ಆಗಿದ್ದಾನೆ ಎಂಬುದನ್ನು ತಿಳಿಯಬಹುದು. ವಿಶ್ವಕ್ಕಿಂತ, ವಿಶ್ವದಲ್ಲಿನ ಎಲ್ಲ ವಸ್ತುಗಳಿಗಿಂತ ಬೃಹದಾಕಾರನಾಗಿದ್ದಾನೆ, ವಿಶ್ವದಲ್ಲಿನ ಯಾವ ವಸ್ತುವೂ ಅವನನ್ನು ಸಂಪೂರ್ಣವಾಗಿ ಒಳಗೊಂಡಿಲ್ಲ, ಯಾವ ಪ್ರಕಟ ವಸ್ತುವೂ ಅವ್ಯಕ್ತನಾಗಿರುವ ಅವನನ್ನು ಸಂಪೂರ್ಣವಾಗಿ ಪ್ರಕಟಿಸಲಾರದು, ದೇಶ ಕಾಲ ಪರಿಬದ್ಧ ಯಾವ ಶಬ್ದವೂ ಯಾವ ಭಾಷೆಯ ಎಂಥ ಸುಂದರ ವ್ಯಾಖ್ಯಾನವೂ ಅವನನ್ನು ವರ್ಣಿಸಲಾರವು, ಅವನ ಅವರ್ಣನೀಯ ಸತ್ಯವನ್ನು ಯಾರೂ ಅರಿಯಲಾರರು, ಶೃತಪಡಿಸಲಾರರು: ಇದೇ ಪರಮ ಸತ್ಯ, ಇದೇ ಪರಮ ರಹಸ್ಯ. ನಮ್ಮ ಪರಿಪೂರ್ಣತೆಯ ಏಕೈಕ ಮಾರ್ಗವೇನೆಂದರೆ, ನಮ್ಮ ಸತ್ತೆಯ, ನಮ್ಮ ಅಸ್ತಿತ್ವದ ಎಲ್ಲ ಘಟಕಗಳ ಮೂಲಕ ಅವನನ್ನು ಆರಾಧಿಸುವುದು, ದೈವೀ ಮೂಲನೂ, ದಿವ್ಯತೆಯ ಒಡೆಯನೂ ಆಗಿರುವ ಅವನಿಗೆ ನಾವು ಸಂಪೂರ್ಣವಾಗಿ ಸಮರ್ಪಿಸಿಕೊಳ್ಳಬೇಕು, ಇದೇ ಇದೊಂದೇ ಮಾರ್ಗ! ಈ ಪ್ರಪಂಚದಲ್ಲಿ ನಮ್ಮ ಅಸ್ತಿತ್ವವೆನ್ನುವುದೇನಿದೆಯೊ ಅದೆಲ್ಲವನ್ನೂ ಅವನ ಕಡೆಗೆ

ತಿರುಗಿಸಬೇಕು, ಅಲ್ಲೊಂದಿಷ್ಟು ಇಲ್ಲೊಂದಿಷ್ಟು, ಅದಿಷ್ಟು ಇದಿಷ್ಟು ಹೀಗೆ ಅಂಶಾತ್ಮಕವಾಗಲ್ಲದೆ, ಎಲ್ಲವನ್ನೂ ಒಂದೇ ಛಿಚಲನೆಯಾಗಿಸಿ ಆ ಪರಾತ್ಪರನೆಡೆಗೆ ಕರೆದೊಯ್ದುಬಿಡಬೇಕು, ಅವನಿಗೆ ಅರ್ಪಿಸಿಬಿಡಬೇಕು. ಅವನ ದಿವ್ಯ ಯೋಗ ಬಲ ಹಾಗೂ ಅಚಿಂತ್ಯ ರಹಸ್ಯದಿಂದ ನಾವು ಹೊರಬಂದಿದ್ದು ನಿಜ, ಅದರಿಂದಾಗಿಯೇ ದೃಶ್ಯ ಜಗತ್ತಿನ ಬಂಧನದಲ್ಲಿ ಸಿಲುಕಿದ್ದೇವೆ, ಈಗ ಅದೇ ಯೋಗ ಬಲದ ಹಿಮ್ಮುಖ ಚಲನೆಯನ್ನು ಆಧರಿಸಿ ಈ ಪ್ರಪಂಚದ ಸೀಮೆಯನ್ನು ಮೀರಿ ಅವನ ಕಡೆಗೆ ಹೋಗಬೇಕಾಗಿದೆ. ಆ ಅನಂತ, ಶಾಶ್ವತ ಪುರುಷನಲ್ಲಿ ಮರಳಿ ಪ್ರವೇಶಿಸಿ ಕಳೆದುಕೊಂಡ ಹಿರಿದಾದ ದಿವ್ಯ ಪ್ರಜ್ಞೆಯನ್ನು ಪುನಃ ಸಂಪಾದಿಸಿಕೊಳ್ಳಬೇಕಾಗಿದೆ.

ಪುರುಷೋತ್ತಮನ ಶ್ರೇಷ್ಠ ಸ್ವರೂಪ ಸತ್ತೆಯು ವ್ಯಕ್ತ ಪ್ರಪಂಚದ ಆಚೆಗಿದೆ. ಅವನ ನಿಜ ಸ್ವರೂಪವು ಭೌತಿಕದಲ್ಲಾಗಲಿ, ಮನದಲ್ಲಾಗಲಿ ಯಾವುದರಲ್ಲಿಯೇ ಆಗಲಿ ಪೂರ್ಣವಾಗಿ ಪ್ರಕಟವಾಗಿಲ್ಲ. ಅಂತೆಯೇ ನಾವು ಅವನನ್ನು ಪೂರ್ಣವಾಗಿ ಅರಿಯಲು ಸಾಧ್ಯವಾಗಿಲ್ಲ. ಅವನು ಅಚಿಂತ್ಯ ಮತ್ತು ಅವ್ಯಕ್ತ ಸ್ವರೂಪದವನು. ನಾವು ನೋಡುವುದು ಅವನು ತಾನಾಗಿ ಧರಿಸಿರುವ ರೂಪಾಕಾರವನ್ನು ಮಾತ್ರ, ಅವನ ನಿಜ ರೂಪವು ನಮ್ಮ ತಿಳುವಳಿಕೆಯ ಎಲ್ಲ ರೂಪ, ಆಕಾರಗಳನ್ನು ಮೀರಿದೆ. ಅವನ ದಿವ್ಯ ಸ್ವರೂಪವನ್ನು ನೋಡುವುದು ನಮ್ಮಿಂದ ಅಸಾಧ್ಯ. ಈ ಪ್ರಕಟ ವಸ್ತು ಪ್ರಪಂಚಕ್ಕಿಂತ ಅದು ತೀರಾ ಭಿನ್ನವಾಗಿದೆ, ಅಕಲ್ಪನೀಯವಾಗಿದೆ. ನಮ್ಮ ಅತಿ ಬೃಹತ್ ಅಥವಾ ಅತಿ ಸೂಕ್ಷ್ಮ ಯಾವ ಪರಿಕಲ್ಪನೆಗೂ ಮೀರಿದ ಒಂದು ತತ್ತ್ವ ಇದೆ, ಅದರ ಸ್ವರೂಪ ನಮ್ಮ ಕಲ್ಪನೆಗೆ ನಿಲುಕದು, ಅದು ಅಚಿಂತ್ಯ, ಅನಂತ. ಅದನ್ನು ನಾವು ವರ್ಣಿಸಲೂ ಆರೆವು, ನೋಡಲೂ ಆರೆವು. ಅತಿ ಸಂಕೀರ್ಣವಾದ ನಮ್ಮ ಕಲ್ಪನೆಗೆ ನಿಲುಕದಷ್ಟು ವಿಶಾಲವಾಗಿರುವ ವಸ್ತುವನ್ನೇ ನಾವು ಜಗತ್ತು ಎಂದು ಕರೆಯುತ್ತೇವೆ. ಈ ಅನಂತ ಚಲನೆಗೆ ಯಾವುದೇ ರೀತಿಯ ಸೀಮೆಯನ್ನು ನಿರ್ಧರಿಸಲಾರೆವು. ಇಂಥ ನಿರಂತರ ಚಲನೆಯ ನಡುವೆ ಒಂದು ಸ್ಥಿರ ಸ್ಥಿತಿ, ಸ್ಥಿರ ಸತ್ಯ ಹಾಗೂ ಬಿಂದುವಿನ ಕಲ್ಪನೆ ಅಸಾಧ್ಯ. ಹೀಗಿರುವಾಗ ವಿಶ್ವಾತೀತವಾದ ನಿಶ್ಚಲ ಸನ್ನೆಗೋಲು (leverage) ಹುಡುಕುವುದು ವ್ಯರ್ಥ ಪ್ರಯತ್ನ. ಇದೆಲ್ಲವೂ ಪರಾತ್ಪರನಾದ ಆ ಅನಂತ ಪುರುಷನು ರೂಪಿಸಿದ ಸತ್, ವಿಶ್ವೋತ್ತೀರ್ಣ ರಹಸ್ಯ ಆಧಾರವಾಗಿರುವುದೇ ಇದರ ಮೇಲೆ. ಅದು ಸ್ವಯಂ

ಅವ್ಯಕ್ತವಾಗಿರುವ ತತ್ತ್ವವು ಸ್ವಯಂವ್ಯಕ್ತ ಅಥವಾ ಪ್ರಕಟವಾದ ರೀತಿ. ಪ್ರಕಟವಾದುದೆಲ್ಲವೂ ನಿರಂತರ ಬದಲಾಗುತ್ತಲೇ ಇರುತ್ತದೆ, ಸದಾ ಚಲನೆಯಲ್ಲಿಯೇ ಇರುತ್ತದೆ, ಸಕಲ ಜೀವರಾಶಿಗಳು, ಸತ್ತೆಗಳು, ವಸ್ತುಗಳು, ಉಸಿರಾಡುವ ಜೀವಿಸುವ ಯಾವುವೂ ಪ್ರತ್ಯೇಕವಾಗಿಯೇ ಆಗಲಿ, ಎಲ್ಲವೂ ಸೇರಿಕೊಂಡೇ ಆಗಲಿ ಅವನನ್ನು ಪೂರ್ಣತಃ ಒಳಗೊಳ್ಳಲಾರವು. ಅವನು ಅವುಗಳಲ್ಲಿ ಇಲ್ಲ, ಅವುಗಳ ಮೂಲಕವೇ ಅವನು ಇರುತ್ತಾನೆ, ಜೀವಿಸುತ್ತಾನೆ, ಚಲಿಸುತ್ತಾನೆ, ಅಥವಾ ಅಸ್ತಿತ್ವದಲ್ಲಿರುತ್ತಾನೆ ಎಂಬುದು ಸುಳ್ಳು. ಅವನು ಸ್ವಯಂಭೂ, ಸಂಭೂತಿ ಅಲ್ಲ. ಇವೆಲ್ಲವೂ ಅವನಲ್ಲಿಯೇ ಇವೆ. ಅವನೊಳಗೆಯೇ ಚಲಿಸುತ್ತವೆ, ತಮ್ಮ ಸತ್ಯವನ್ನು ಪಡೆಯುವುದು ಅವನ ಮೂಲಕವೇ, ಎಲ್ಲವೂ ಅವನ ಸಂಭೂತಿಗಳೇ, ಅವನೇ ಎಲ್ಲವುಗಳಿಗೂ ಸತ್ ಆಗಿದ್ದಾನೆ "ಮತ್ಸ್ಥಾನಿ ಸರ್ವಭೂತಾನಿ ನ ಚಾಹಂ ತೇಷ್ವವಸ್ಥಿತಃ" ತನ್ನ ಅಚಿಂತ್ಯ, ಅವರ್ಣನೀಯ, ದೇಶ ಕಾಲಾತೀತ ಅನಂತ ಅಸ್ತಿತ್ವವನ್ನು ಅಂಶಾತ್ಮಕವಾಗಿ ಸ್ವಲ್ಪ ವಿಸ್ತರಿಸಿ ಈ ಅನಾದಿ ಅನಂತ ಪ್ರಪಂಚವನ್ನು ನಿರ್ಮಾಣ ಮಾಡಿದ್ದಾನೆ.

ಎಲ್ಲವೂ ಅವನೊಳಗೇ ಇದೆ, ಎಲ್ಲದರ ಅಸ್ತಿತ್ವವೂ ಅವನಲ್ಲಿಯೇ ಇದೆ ಎಂದು ಹೇಳಿಬಿಟ್ಟರೆ ನಿಜವಾದ ಪೂರ್ಣ ಸತ್ಯವನ್ನು ಹೇಳಿದಂತೆ ಆಗುವುದಿಲ್ಲ, ಸಂಪೂರ್ಣ ಸಂಬಂಧವನ್ನು ಹೇಳಿದಂತೆ ಆಗುವುದಿಲ್ಲ. ಏಕೆಂದರೆ ದೇಶ ಮತ್ತು ಕಾಲಗಳಿಗೆ ಅತೀತನಾಗಿರುವ ಅವನನ್ನು ದೇಶ ಕಾಲಗಳಿಗೆ ಒಳಪಡಿಸಿ ಮಾತನಾಡಿದಂತೆ ಆಗುತ್ತದೆ. ದೇಶ ಮತ್ತು ಕಾಲ, ಅಂತರ್ನಿಹಿತ ಮತ್ತು ಅಂತರ್ಯಾಮಿ ಮತ್ತು ಎಲ್ಲವನ್ನೂ ಮೀರಿ ಆಚೆಗೆ, ಎಂದೆಲ್ಲಾ ಮಾತನಾಡುವುದು ಈ ನಮ್ಮ ನಮ್ಮ ಪ್ರಜ್ಞೆಯ ಚಿತ್ರಣಗಳ ಮೂಲಕ ಎಂದಂತಾಗುವುದು. ತನ್ನ ಆಧ್ಯಾತ್ಮಿಕ ಯೋಗ ಶಕ್ತಿಯ ಮೂಲಕ "ಮೇ ಯೋಗಮೈಶ್ವರಂ" (9/5) ಅವನು ಈ ದೃಶ್ಯ ಪ್ರಪಂಚವನ್ನು ತನ್ನ ಸತ್ತೆಯಿಂದಲೇ ನಿರ್ಮಿಸುತ್ತಾನೆ, ಇದು ಆಧ್ಯಾತ್ಮಿಕವಾದ ರೀತಿಯಲ್ಲಿಯೇ ಹೊರತು ಭೌತಿಕವಾದ ರೀತಿಯಲ್ಲಿ ಅಲ್ಲ ಎಂಬುದು ಮುಖ್ಯ: ಸ್ವಯಂ ಪ್ರಕಟಣೆ, ಅವನ ಅನಂತ ಅಸ್ತಿತ್ವದ ವಿಸ್ತೃತ ರೂಪ, ಭೌತಿಕವೆಲ್ಲವೂ ಅವನ ಸ್ವ–ವಿಸ್ತರಣೆ ಎಂದು ಹೇಳುವುದೆಲ್ಲವೂ ಒಂದು ಮಾನಸಿಕ ಚಿತ್ರಣವಷ್ಟೇ. ಅವನು ಎಲ್ಲದರ ಜೊತೆ ಒಂದಾಗಿದ್ದಾನೆ, ತಾದಾತ್ಮ್ಯಹೊಂದಿದ್ದಾನೆ. ಅನಂತದ ಈ ಸ್ವ–ವೀಕ್ಷಣೆಯು ಅವನ ಪೂರ್ಣ ದರ್ಶವನ್ನು cover

ಮಾಡುವುದಿಲ್ಲ. ಅನೇಕ ದೇವತೆಗಳ ಜೊತೆಗೆ, ಸಮಗ್ರ ವಿಶ್ವದ ಜೊತೆಗೆ ಈಶ್ವರನು ಒಂದಾಗಿದ್ದಾನೆ ಎಂದು ಹೇಳುವುದಂತೂ ಇನ್ನೂ ಸಂಕುಚಿತವಾದುದು. ಅವನು ಏನೆಲ್ಲ ಇರುವುದೆಲ್ಲದರ ಜೊತೆಗೂ ಒಂದಾಗಿದ್ದಾನೆ, ಅದೆಲ್ಲವನ್ನು ಮೀರಿಯೂ ಅವನಿದ್ದಾನೆ. ವಿಶ್ವವೂ ಅವನೇ, ವಿಶ್ವಾತೀತನೂ ಅವನೇ. ಅವನ ಅನಂತ ವಿಶ್ವ – ಪ್ರಜ್ಞೆಯಲ್ಲಿ ಎಲ್ಲವೂ ಇದೆ, ಅವನ ಈ ಅನಂತಕ್ಕೂ ಅವನ ವಿಶ್ವಾತೀತ ಸತ್ಯದ ಆತ್ಮ ಸ್ವರೂಪವೇ ಆಧಾರವಾಗಿದೆ. ಈ ಆತ್ಮ ಸ್ವರೂಪದ ಪರಿಕಲ್ಪನೆಯು ಕೂಡ ವಿಶ್ವ, ಅಸ್ತಿತ್ವ, ರೂಪ, ಚೈತನ್ಯ ಈ ಶಬ್ದಗಳಂತೆ ನಮ್ಮ ಕಲ್ಪನೆಗೆ ನಿಲುಕದಂಥದೇ ಆಗಿದೆ. ಇದು ಪರಮ ಪುರುಷನ ಪರಮ ರಹಸ್ಯವಾಗಿದೆ. ಅವನು ವಿಶ್ವಾತೀತನಾದರೂ ಅವನು ವಿಶ್ವದಿಂದ ಭಿನ್ನನಲ್ಲ. ಸಮಗ್ರ ವಿಶ್ವವನ್ನು ತನ್ನ ಆತ್ಮ ಎಂಬಂತೆಯೇ ಅವನು ಅವರಿಸಿಕೊಂಡಿದ್ದಾನೆ. ಅವನ ಅಂಶವೊಂದು ವಿಶ್ವ ವ್ಯವಹಾರದಲ್ಲಿ ಸಿಲುಕಿರದಂಥದೂ ಆಗಿದೆ. ಅದು ಅವನ ಜ್ಯೋತಿರ್ಮಯ ಆತ್ಮ ಸ್ವರೂಪ "ಮಮ ಆತ್ಮಾ" ಇದು ಅಸ್ತಿತ್ವದಲ್ಲಿರುವ ಎಲ್ಲ ಜೀವಿಗಳ ಜೊತೆಗೆ, ಸಂಭೂತಿಗಳ ಜೊತೆಗೆ ಒಂದೇ ರೀತಿಯ ಸಂಬಂಧ ಹೊಂದಿರುವುದು "ಭೂತ ಭೃನ್ನಚ ಭೂತಸ್ಥಃ ಮಮಾತ್ಮಾ ಭೂತಭಾವನಃ" (9/5) ನಾವು ಬಳಸುವ ಜೀವಿಗಳು (ಸತ್ತೆಗಳು), ಸಂಭೂತಿಗಳು, ಸ್ವ–ಅಸ್ತಿತ್ವ, ಆತ್ಮನ್, ಅದರ ಮೇಲೆ ನಿರ್ಭರವಾಗಿರುವ ಸತ್ತೆಗಳು, ಭೂತಾನಿ, ಕ್ಷರ ಪುರುಷ ಮತ್ತು ಅಕ್ಷರ ಪುರುಷ ಇತ್ಯಾದಿ ಎಲ್ಲವೂ ಅಲ್ಲಿಂದಲೇ ಬಂದಿವೆ. ಇವೆರಡೂ ಸಂಬಂಧಗಳ ಪರಮೋಚ್ಚ ಸತ್ಯ ಮತ್ತು ಈ ಎರಡರ ನಡುವೆ ಇರುವ ವೈರುಧ್ಯವನ್ನು ಇವೆರಡನ್ನೂ ಮೀರಿದ ಅದರ ಅಸ್ತಿತ್ವದಲ್ಲಿ ಕಾಣಬೇಕು. ಪರಮೋಚ್ಚನಾದ ಆ ಪರಮಾತ್ಮನೇ ಎರಡೂ ಅಂದರೆ ಎಲ್ಲವನ್ನೂ ಒಳಗೊಂಡಿರುವ ಆತ್ಮ ಸತ್ತೆ ಮತ್ತು ಆತ್ಮ ಸಮಾವಿಷ್ಟ ಭೂತ ಜೀವಿಗಳನ್ನು ತನ್ನ ಆಧ್ಯಾತ್ಮಿಕ ಚೈತನ್ಯದ ಸಾಮರ್ಥ್ಯದಿಂದ ಅಥವಾ ತನ್ನ ಯೋಗ ಮಾಯೆಯಿಂದ ಪ್ರಕಟಮಾಡುತ್ತಾನೆ. ನಮ್ಮ ಆಧ್ಯಾತ್ಮಿಕ ಚೈತನ್ಯ ಆ ಆತ್ಮನೊಡನೆ ಒಂದಾಗುವುದರಿಂದ ಮಾತ್ರವೇ ಅವನ ಅಸ್ತಿತ್ವ ಅಥವಾ ಸತ್ತೆಯ ಜೊತೆಗೆ ನೈಜ ಸಂಬಂಧ ಹೊಂದಬಲ್ಲೆವು.

(ಸಶೇಷ...)

## ಶ್ರೀ ಅರವಿಂದರ
## 'ಊರ್ವಶಿ'

**– ಅನು: ಶ್ರೀ ಕಿಶೋರಕುಮಾರ ಕಾಸಾರ (ಸಮಷ್ಟಿ), ಕಲಬುರ್ಗಿ**

**8**

### ಅಧ್ಯಾಯ 2

ಕರಾರು–ಕಾಯಿದೆಗಳಿರದ ವರಗಳನು ಒಪ್ಪಿಸುತ ವಿಧಿಲಿಖಿತವನೆಂದೂ
ವರ್ಜಿತಗೊಳಿಸುವದಿಲ್ಲ.
ಒಂದೆಡೆಯಿಂದ ಒಪ್ಪಿಸುತದನು ಇನ್ನೊಂದೆಡೆಯಿಂದ ಇಸಿದುಕೊಂಡದನು
ಇತ್ಯರ್ಥಗೊಳಿಸುವನು.
ಆ ನಿಲಿಂಪ–ನಿಯತಿಗಳನೆಲ್ಲ ನೂರಡಿಗೆ ನೂಕಿ ಪ್ರಾಣಕಾಂತೆಯನು
ಪಡೆದುಕೊಂಡಿರುವಾ ಪುರೂರವನೇ,
ಸೃಷ್ಟಿಕರ್ತನಾ ಸಾನಿಧ್ಯದಲಿ ಸ್ವಾಮಿತ್ವವ ಸ್ವೀಕರಿಸಿಹ ಸತ್ಪುರುಷರಿಗೂ ಸಹ
ಸಲ್ಲದಾ ಸಾನಂದವನು
ಸಾಕಾರಗೊಳಿಸಿಕೊಂಡಿರುವಾ ಸುಂದರಾಂಗನೇ, ದೈವವಿತ್ತ ಕರುಣೆಯಿದನು
ಕಣ್ಣೊತ್ತಿಕೊಂಡು ಕಾಯ್ದುಕೊಂಡಿರು.
ಅಪ್ಸರಿಯಿವಳ ಅಂತರಾತ್ಮಾಯನದ ಅಂಗಳದೊಳು ಅನಂತವಿಹ ಆನಂದದ
ಆದ್ಯಬಾಧ್ಯಸ್ಥನಾಗಿರು.
ಆದರೂ ಭಾಗ್ಯವಿದು ಬರಿದಾಗುವದೆಂಬಾ ಭಯದಲೇ ಬದುಕಬಟ್ಟೆಯಲಿದನು
ಬೈಯ್ದಿಟ್ಟುಕೊಂಡಿರು.
ಮೊದಲೊಂದು ವರ್ಷದಲಿ ಒಪ್ಪಿತವಾದ ವಜ್ರಕನ್ಯೆಯೊಡನೆ ಶೈಲಾಗ್ರಸಮೂಹಗಳಲಿ
ಸಂಚರಿಸುವೆ,
ಗೂಢವಿಸ್ತಾರದಲಿ ಗೌಪ್ಯವಾಗಿರುವಾ ಪರ್ವತಗಳಲಿ ಮಡುವುಗಟ್ಟಿದ
ಏಕಾಂತದೊಡನೆ ಏಕೀಭವಿಸುವೆ,
ಹತ್ತಾರು ಹಾದಿಯೊರೆಗೆ ಹಾಸಿ–ಹೊದ್ದುಕೊಂಡಿರುವಾ ಹಿಮದ ಹುತ್ತದೊಳಗೆ
ಹತ್ತಿಳಿಯುವೆ,

ಮಂಜು ಮುಸುಕಿದಾ ಮಂದಾಕಿನಿಯರ ಮೂಲನೆಲೆಯೊಳಗೆ ಮನದನ್ನೆಯೊಡನೆ
ಮುನ್ನಡೆಯುವೆ;
ಸಂವತ್ಸರವಿನ್ನೊಂದರಲಿ ಜನಾಂತಿಕದಿಂದ ದೂರ–ಬಹುದೂರ ಸುತ್ತ ಗಿರಿನೆತ್ತಿಗಳ
ಗುಂಫದೆಡೆಯಲಿ
ವೃಕ್ಷರಾಜರಗಳಿಂದಲೂ–ಯಕ್ಷಕಾಯರುಗಳಿಂದಲೂ ಹರಿದ್ವರ್ಣವನೇ
ಹರ್ಮ್ಯನಿಲಯವಾಗಿಸಿಕೊಂಡ
ಅರಣ್ಯದೊಳಗೆ ಅಪ್ಸರಿಯೊಡನೆ ಅಲೆದು ಕಾಂತೆಯೊಡನೆ ಕಾಂತಾರಪಥಕೆ
ಕಾಲಿಡುವೆ,
ಬನಶಂಕರಿಯರ ಬಾಳ ಬೆಳಗಲೆಂದು ಬಾನಂಗಳದಿ ಬೆಳಗುತ ಬಂದ
ಭಗಸವಿತೃವಿನ ಬೆಳಕಿನಡಿಯಲಿ
ಮಂಜುಲಗಾನಗಳಿಂದ ಮೈಮರೆತು ಮುಂದೋಡುತಿಹ ಮುನ್ನೂರು
ಮಂದಾಕಿನಿಯರ ಮಗ್ಗುಲಿನಲಿ
ರತಿ–ಮನ್ಮಥರೊಲು ರಾತ್ರಿ–ಮುಂಜಾವುಗಳನು ಕಂದರ್ಪಕೇಳಿಯೊಳು ಕಳೆದು
ಕಾಮದೇವನನೇ ಕಣ್ಣೀರಾಗಿಸುವೆ.
ಮುಂದಿನ ಮೂರನೇ ಮುಂದೂಣಗಿಯಲಿ ಮರ್ತ್ಯಜೀವನದ ಜಡಜಂಜಡದೊಳು
ಜಲಜೆಯೊಡನೆ
ಬದುಕುತ ಬಾನಂಗಣದಾ ಭಾಮಿನಿಯನು ಭೂತಲದ ಬದುಕ ಬೇಸಾಯಕ್ಕೆ
ಬದ್ಧಗೊಳಿಸುವೆ. ಆದರೆ,
ಬರನೀಗಿಸುವ ಕೆರೆಯೊಡನೆ ಬರುವ ನೆರೆಯಂತೆ, ಸಂಕಷ್ಟವನು ಸಾಂತಗೊಳಿಸಿದಾ
ಸಂತಸದಲೇ ಸಂತಾಪವಿರುವಂತೆ
ವರದೊಡನೆ ಒಲಿದ ವಚನಕೆ ವಂಚಿತನಾಗದಿರು. ಅಪ್ಸರಿಯಿವಳ ಅಪ್ಪುಗೆಯಿಂದ
ಅದೃಶ್ಯನಾಗದಿರು.
ನಾಕನಿಲಿಂಪರಾ ನಿಯತ ನೇಮವನು ನಿನಗರುಹುತ್ತಿಹೆನು ನೋಡಿಲ್ಲಿ ಓ ನೃಪನೇ:
ನಿಮಗಿದು ನೆನಪಿರಲಿ
ಅವನಿತಲವೆಂದೂ ಅಮರಾಗ್ನಿರಾಜ್ಯವಾಗದು, ಆಣ್ಮರಿಗೆಂದೂ ಅಪ್ಸರಪತಿಯಾಗಿರಲು
ಅವಕಾಶವಿರದು.
ಅವನು ಅತಿಮಾನುಷ ದೇಹದೊಳಿರುವ ಅತೀಂದ್ರಿಯ ಆತ್ಮದ ಅವತಾರಿಯಾದರೂ,
ವಜ್ರವಿಭೂತಿಯಾದರೂ

ಅನೂಹ್ಯಳಿಹ ಆನಂದಕನ್ಯೆಯೊಡನೆಯ ಅನಂತಕಾಲದೊರೆಗಿನ ಆವಾಸವದು
ಅನುಚಿತವಿಹುದು.
ಮನೋಮಯಳೊಡನೆ ಮನೆಮಾಡಿಕೊಂಡಿರುವ ಮುನ್ನದಲಿ ಮನ್ನಿಸಬೇಕಿರುವ
ಮಾತೊಂದನು ಮನಗಾಣಿರು:
ಇಲಾಕಾನೀನನೇ, ಸಮಾಗಮದ ಸಮಯದಲಲ್ಲದೆ ಸ್ವರ್ಣೀಮಬಾಲೆಯ
ಸಮ್ಮುಖದಲಿ ನಗ್ನನಾಗದಿರು.
ವಿವಸ್ತ್ರವಾಗಿ ಒಬ್ಬರಿಗೊಬ್ಬರು ಒಪ್ಪಿತರಾಗದಿರಿ. ಬೆತ್ತಲಾಗಿರುವಾ ಭಾಮಿನಿಯ
ಬಳಿಸಾರಿ ನಿಲ್ಲದಿರು.
ಉಪದೇಶವಿದನು ಉಲ್ಲಂಘಿಸಿರೆ, ಉರ್ವಶಿಯವಳ ಊರ್ಧ್ವಗಮನವಾವುದು,
ವಿಪ್ರಲಂಬದ ವಿಜಯವಾವುದು!"
ಪ್ರೇಮಾತುರನಿಹ ಪುರೂರವನಿಗೆ ಉರ್ವಶಿಯನು ಉಡುಗೊರೆಯಾಗಿತ್ತ
ತಿಲೋತ್ತಮೆಯು ತಾರಾಲೋಕದೆಡೆಗೇರಿದಳು.
ಭಗನೆಡೆಗೇರುವ ಖಗದೊಲಾಗಿ ಖೇಖಮಧ್ಯಕ್ಕೇರಿದಳು. ಮದ್ಯಾಹ್ನದ
ಮೃಗತೃಷ್ಣದೊಲಾಗಿ ಮರೆಯಾಗಿಹಳು.
ನಾಗಲೋಕದ ನಿಧಿಯನು ನೋಡುವಾಸೆಯಿಂದ ನಡೆದ ನಾವಿಕಪಡೆಯೊಂದು
ನೂರುನಡುಗಡ್ಡೆಗಳ
ಚಕ್ರಭ್ರಮಣದಲಿ ಚಾರುದಿಶೆಗಳನೇ ಚರಿಸಿ ಅಂತಿಮದಲಿ ಅನಂತಶೇಷನಾ
ಅನರ್ಘ್ಯರತ್ನವ
ಕಂಡು ಕಣ್ಣಿರಾಗುವೊಂತೆ, ಬಹುದಿನಗಳ ಬಯಕೆಯದು ಕೈಗೂಡಿರಲು
ಕಣ್ಮುಂದಿರುವ ಕಾಂತೆಯನು
ಬರಸೆಳೆದು ಮುದ್ದಿಸಲೆಂದವಳ ಮುನ್ನೂಕಿದನು. ಮತ್ತೆನೋ ಮರೆತಂತೆ
ಮುಂಬರಿಯದಾದನು.
ಖಂಡಖಂಡಗಳನೆಲ್ಲ ತುಂಡರಿಸುವ ಭಂಡಧೈರ್ಯದಲಿ ಭವಿಸುತ ಬರುವ
ಚಂಡಮಾರುತವದು
ಬಿರುಗಾಳಿಯ ಭ್ರಮಿಸುತ್ತ, ದಿಕ್ಕುಗಳ ದ್ರವಿಸುತ್ತ ಗುಡುಗು–ಸಿಡಿಲಿನ ಕಾರ್ಗಾಲ
ಕರೆವ ಮುನ್ನ
ಮುಗ್ಧಮಾರುತವೊಂದು ಮಂದಾನೀಲವ ಮಿಡಿಯುತ್ತ ಘನಶಾಂತತೆಯನು
ಗುಂಭೀಕರಿಸುವೊಂತೆ

ಗಾಳಿಯೊಡನೇರುವ ಗಂಧರ್ವರಂತೆ, ಗಾಂಭೀರ್ಯನವ ಗೋಲೋಕದಾ
ಗೋಮಿನಿಯೆಡೆ ಗಮಿಸಿದನು.
ಕಾದ ಮರಳಿಗೆ ತಂಪೆರೆಯಲೆಂಬಂತೆ ಉಕ್ಕೇರುತ ಬಂದು ಬಲ್ದೆರೆಗಳ ಬೀಸೋಗೆವ
ಸಾಗರದಂತೆ
ಪುರೂರವನು ಉರ್ವಶಿಯನು ತುಂಬಿಕೊಳಲೆಂದು ತಡವರಿಸಿದನು.
ತಂದುಕೊಳಲೆಂದು ತವಕಿಸಿದನು.
ಬಾಹುಬಂಧನದಲಿ ಬಂಧಿಸಿದ ಭಾಮಿನಿಯ ಭುಜವಿಡಿದು ಬೆಚ್ಚಗಾಗಿಸಿದನು.
ಮುತ್ತಿಕ್ಕುತದನು ಮೆತ್ತಗಾಗಿಸಿದನು.
ಸಡಿಲಗೊಂಡು ಸುಳಿಯುತ್ತಿಹಳ ಕೇಶಬಂಧವನು ಕಟ್ಟಿಚ್ಚಿ ಕಾಮಿನಿಯ ಕೆನ್ನೆಗೆ
ಕಚಗುಳಿಯಾಡಿದನು.
ಪ್ರಕ್ಷುಬ್ಧ ಪಾರಾವಾರದ ತುಮುಲಗಳ ನಡುವೆ ನೌಕೆಗಳೆರಡು ಒಂದಕೊಂದನು
ಒತ್ತಿಕ್ಕಿ ನಡೆವಂತೆ
ವಜ್ರಕಾಯನ ವಿಶಾಲವಿಹ ವಕ್ಷಸ್ಥಲವದು ಮಂದಾಕಿನಿಯ ಮುತ್ತಿ–ಮೊಲೆಗೊತ್ತಿ
ಮುದ್ದಿಸಿತ್ತು.
ಪರಸ್ಪರರ ಎದೆಬಡಿತಗಳ ಸೂಕ್ಷ್ಮನಾದವದು ಸೆಳೆದಪ್ಪಿದವರೆದೆಯಲಿ
ಸೆಳೆಮಿಂಚಾಡಿಸಿತ್ತು.
ವಿವಸ್ತ್ರವಾಗಿ ತೆರೆದುಕೊಂಡವಳ ತೋಳದು ಕ್ಷಾತ್ರತೇಜನಾ ಅಂಗೈಯೊಳಗೆ
ಅದುಮಿ ಅಪ್ಪಚ್ಚಿಯಾಗಿತ್ತು.
ಕೊನೆಗೊಮ್ಮೆ ಕೆಳಲೋಕದಾ ಕಾರ್ಮಣನು ಕಾಂತೆಯನು ಕೂಗಿಕರೆದಿಹನು,
ಕಣ್ತೆರೆದು ಕೇಳಿದನು:
"ಓ ಪರಂಧಾಮಸುತೆಯೇ, ಈ ಪೃಥಿವಿಪುರುಷನ ಪ್ರೇಮಕೆ ಪ್ರಾಣಜಲವ
ಪೂರೈಸಿ ಪಾಣಿಗ್ರಹಣಗೈವೆಯಾ?"
ಅವನ ಎದೆಗೊತ್ತಿ ನಿಂತ ನಾರಿಮಣಿಯು ನಡೆದಿಹಳು. ನಿಶ್ಚಲ ನುಡಿಯೊಂದ
ನುಡಿದಿಹಳು:
"ಪೃಥಿವಿಪುರುಷನಾದೀ ಪುರೂರವನೇ ಎನಗಿಹನು ಪ್ರಕೃತಿಗಿಹ
ಪುರುಷೋತ್ತಮನು!"

**ಟಿಪ್ಪಣಿ:**

ಹಿಮಾದ್ರಿ ಶೃಂಗದ ಮೇಲೆ ಘಟಿಸಿದ ಆ ದ್ಯಾವಾ–ಪೃಥಿವಿ ಲೋಕದ ಪ್ರೇಮ ಸಂಗಮದ ನಂತರ ನಿಯತಿಯ ನೇಮಕೆ ತಲೆಬಾಗಿ ಊರ್ವಶಿಯು ದ್ಯೌಲೋಕಕ್ಕೂ, ಪುರೂರವನು ಮರ್ತ್ಯ ಲೋಕಕ್ಕೂ ಮರಳಿದರು. ಆದರೆ, ಅವರು ಮಾತ್ರ ಮೊದಲಿನಂತಲ್ಲದೇ ದಿವ್ಯ ಪ್ರೇಮದ ದಾವಾನಲದೊಳಗೆ ಮಿಡುಕುತ್ತಿರುವ ಮಧುಮಕ್ಷಿಕೆಗಳಂತೆ ಹೊಯ್ದಾಡಲಾರಂಭಿಸಿದ್ದರು. ಇದು ಅವರಲ್ಲಿ ವಿಪ್ರಲಂಬ ಶೃಂಗಾರವನ್ನೇ ಹರಿಸಿತ್ತು. ಅತ್ತ ಸರ್ವಸಖಿ ಬಳಗದೊಡನೆ ಸ್ವರ್ಗ ಲೋಕಕ್ಕೇರಿದ ಅಪ್ಸರೆ ಊರ್ವಶಿಯು ಮನೋಮಯದ ಮಾನಿನಿಯಾದರೂ ಅವಳಲ್ಲಿ ಪೃಥಿವಿಯೆಡೆಗಿನ ಸೆಳೆತವು ಆಕರ್ಷಿಸಲಾರಂಭಿಸಿತ್ತು. ಪುರಾಣ ಕಾಲದಿಂದಲೂ ಪ್ರತಿಷ್ಠಿತ ಅಪ್ಸರ ಬಳಗದ ನಾಯಕಿಯೆನಿಸಿದ್ದ ಅವಳು ಇಂದು ಭೂಲೋಕದ ಬಾಂಧವ್ಯಕ್ಕಾಗಿ ಬಯಸಿದ್ದಳು. ಅವಳು ಸ್ವರ್ಗ ಲೋಕದ ಸುಂದರಿಯಾದರೂ ಅಲ್ಲಿಯವರೆಗೂ ಅವಳ ನಿರ್ಮಲ ಮನವು ಯಾವ ದೇವತೆಗಳ ವಶಕ್ಕೂ ಸಿಗದೆ ಪಾವಿತ್ರ್ಯತೆಯನ್ನು ಕಾಪಾಡಿಕೊಂಡಿತ್ತು. ಪವಿತ್ರ ಮಂದಿರದಂತಿದ್ದ ಆ ಮನದ ಮಂದಿರದೊಳಗೆ ಯಾವ ದೇವ ಪುತ್ರನಿಗೂ ಸ್ಥಾನವಿರಲಿಲ್ಲ. ಅಂತಹ ಗರ್ಭಗುಡಿಯೊಳಗೆ ಅಂದು ಓರ್ವ ಮರ್ತ್ಯನ ಪ್ರತಿಷ್ಠಾಪನೆಯಾಗಿತ್ತು. ಪ್ರತಿಷ್ಠಾನಾಧಿಪತಿಯಾದ ಪುರೂರವಸ್ಸನೇ ಅವಳ ಆರಾಧ್ಯದೈವನಾಗಿ ನೆಲೆಸಿದ್ದನು. ಆದರೆ ವಿಧಿಯ ಕಟ್ಟಳೆಯಂತೆ ಮನೋದೇಹಿಗಳು ಕಾರ್ಮಣರೊಡನೆ ಕೂಡಿನೆಲೆಸುವುದು ಪ್ರಕೃತಿ ಧರ್ಮಕ್ಕೆ ವಿರುದ್ಧವೆನಿಸಿತ್ತು. ಹಾಗಾಗಿ ಅವಳ ಮರ್ತ್ಯ ಬದುಕಿನ ಬಯಕೆಯು ಸಫಲಗೊಳ್ಳದೆ ಸವೆಯುತ್ತಲೇ ಬಂದಿತ್ತು.

ಮನೋಲೋಕದ ಮಂದಾಕಿನಿಯಾಗಿ ಮಾನಸಾಧಿಪತಿಗಳ ಮನೋಲ್ಲಾಸಕ್ಕೆಂದು ಮುಡಿಪಾಗಿರುವ ಅಪ್ಸರ ಬಳಗದ ಸರ್ವ ಶ್ರೇಷ್ಠ ಸುಂದರಿಯ ದಿನನಿತ್ಯದ ಕಲಾಪಗಳು ಅಂದಿನಿಂದ ಅವಳಿಗೆ ಕೇವಲ ಯಾಂತ್ರಿಕ ಬದುಕಿನ ಬವಣೆಯಾಗಿ ಕಾಣಲಾರಂಭಿಸಿತ್ತು. ಇಂದ್ರ ಸಭೆಯ ನೃತ್ಯ, ಗಾನ–ಗೋಷ್ಠಿಗಳ ವೃಂದ, ದೇವಹಾಸದ ಛಂದ ಇದೆಲ್ಲವೂ ಅವಳಿಗೆ ವೈಭವೋಪೇತವಾದರೂ ಕೇವಲ ಜಡತೆಯ ಜಾತ್ರೆಯಂತೆ ತೋರಲಾರಂಭಿಸಿತ್ತು. ಹಾಗಾಗಿ ಅವಳು ಮಾನಸದ ದಿನಗಳನ್ನು ಕೇವಲ ನಾಮಕಾವಸ್ಥೆಗೆಂದು ಮಾತ್ರ ದೂಡಲಾರಂಭಿಸಿದ್ದಳು. ಅವಳ ಆಂತರ್ಯವು ಮಾತ್ರ ಬುವಿಯ ಬಂಧುವಿಗಾಗಿ ಹಾತೊರೆಯುತ್ತಲೇ ಇತ್ತು. ಆದರೆ, ಭೂ–ಭುವನಗಳ

ಬಾಂಧವ್ಯವದು ಕೇವಲ ಕಲ್ಪನೆಯ ಕೂಸೆಂಬುದನು ಅರಿತಿದ್ದ ಅವಳು ತನ್ನ ಮನೋವೇದನೆಗಳನ್ನು ಮರೆಯಲೆಂದು ನಂದನ ವನದೊಳಗೆ ಅಂಡಲೆಯುತಲಿದ್ದಳು. ಮನೋದಿನಗಳ ಮುಂಬೆಳಗಿನಿಂದ ಮುಚ್ಚಂಜೆಯವರೆಗಿನ ಸಮಯವನ್ನು ಕಲ್ಪವೃಕ್ಷಗಳಡಿಯಲ್ಲೇ ಕಳೆಯುತ್ತಿದ್ದಳು. ವೃಕ್ಷದೊಳಗಿನ ಯಕ್ಷಿಯಂತೆ ಸದಾ ವೃಕ್ಷಾದಿಲತೆಗಳಲ್ಲೇ ಭಾವನೆಯ ಬೆಸೆಯಲು ಪ್ರಯತ್ನಿಸುತ್ತಿದ್ದಳು. ಹೀಗಿರಲು ಮನೋಲೋಕದ ಮಾಸಗಳು ಕಳೆಯುತ್ತ ಬಂದು ವಸಂತವು ಸ್ವರ್ಗವನ್ನು ಸೂರೆಗೈದು ಸರಿದಿತ್ತು. ಸ್ವರ್ಗದಾ ಸುಡುವ ಬಿಸಿಲಿನ ಕಾಲದಲಿ ಮನೋಮಯದ ಮನೆಮಂದಿಯೆಲ್ಲ ಬೇಗೆಯ ಬೇನೆಯನು ಕಳೆಯಲೆಂದು ಗಾನ–ಗೋಷ್ಠಿಗಳಲ್ಲಿ ಮನವ ತೊಡಗಿಸುತ್ತಿದ್ದರು. ಸ್ವರ್ಗ ಲೋಕದ ಸೂರ್ಯ ಪೂಷಣನು ಪಡುಗಡಲಿಗೆಂದು ಪಯಣಿಸಿ ಮನೋಮಯದ ಮುಗಿಲಿನೊಳು ಮುಕ್ಕೋಟಿ ಮುತ್ತುಗಳ ಮೆರವಣಿಗೆಯು ನೆರೆದು ನಿಂತ ಸಮಯಕ್ಕೆ ದೇವ ಪುರುಷರೆಲ್ಲ ಒಂದೆಡೆ ನೆರೆದು ಪುರಾಣ ಪುಣ್ಯ ಕಥನಗಳ ಹಾಡುತ್ತ–ಕುಣಿಯುತ್ತ ಮನೋರಂಜನೆಯಲಿ ಮೈಮರೆಯುತ್ತಿದ್ದರು.

ಮನೋಮಯವನು ದಾಟಿ ವಿಜ್ಞಾನಮಯದ ಅಂಗಳದಲಿ ಚೇತನದ ಪಂಚದೇವಿಯರಿಂದ ಉದಿಸುವ ಲಲಿತ ಕಲೆಗಳ ಮೂಲ ಸಂವೇದನಾ ತಾಣವು ಇದೇ ಮಾನಸವಾಗಿದ್ದು, ಅಲ್ಲಿಯಿಂದಲೇ ಭೂಮಿಗೆ ಕಲೆಗಳ ಆಗಮನವಾಗುತ್ತದೆ. ಮರ್ತ್ಯದಲ್ಲಿ ಕಲೆಯು ಅದೆಷ್ಟೇ ಔನ್ನತ್ಯಕ್ಕೇರಿದರೂ ಅದರ ಸೂಕ್ಷ್ಮಸಂವಹನಾ ಕ್ಷೇತ್ರವಾದ ಸ್ವರ್ಗದ ಕಲಾಪ್ರವೀಣತೆಯನ್ನು ಮೀರಲು ಅದಿನ್ನೂ ಶಕ್ಯವಾಗಿಲ್ಲ. ಹೀಗಿರಲು ಆ ಲಲಿತ ಕಲೆಗಳಲ್ಲಿ ರಂಗಕಲೆಯ ರಾಜನಂತಿದ್ದ ಸ್ವರ್ಗ ಲೋಕದ ನಾಟ್ಯಾಚಾರ್ಯ ಭರತ ಮುನಿಯು 'ಲಕ್ಷ್ಮೀ ಸ್ವಯಂವರ'ವೆಂಬ ರೂಪಕವನ್ನು ರಚಿಸಿ ಅಪ್ಸರೆಯರ ಬಳಗದ ಕೆಲವಾರು ಪ್ರಮುಖ ಸುಂದರಿಯರನ್ನು ಆರಿಸಿ, ಅವರಿಗೆ ಆ ರೂಪಕದ ರಂಗಾಭಿನಯವನ್ನು ಕಲಿಸಿ ಸಿದ್ಧಗೊಳಿಸಿದ್ದನು. ಕೊನೆಗೆ ಒಂದು ದಿನ ಇಂದ್ರನ ಒಡ್ಡೋಲಗದಲ್ಲಿ ಅದರ ಪ್ರದರ್ಶನವನ್ನು ಏರ್ಪಡಿಸಿ ಮಾನಸಾಧಿಪತಿಗಳ ಮಾನಸವನ್ನು ಮಂತ್ರಮುಗ್ಧಗೊಳಿಸಲು ಇಚ್ಛಿಸಿದ್ದನು. ಪೂರ್ವದಲ್ಲೇ ನಿಶ್ಚಯಿಸಿದಂತೆ ರಂಗದ ಎಲ್ಲ ಸಿದ್ಧತೆಗಳು ಪೂರ್ಣಗೊಂಡ ನಂತರ ಸಮುದ್ರ ಕನ್ನಿಕೆಯಾದ ಶ್ರೀ ಲಕ್ಷ್ಮಿಯ ಪಾತ್ರಧಾರಿಯಾದ ಊರ್ವಶಿಯು ಮಾಲಾಹಸ್ತಳಾಗಿ ವೇದಿಕೆಯ ಮೇಲೆ ನೆರೆದ ನೂರೆಂಟು ನಿಲಿಂಪರನ್ನು ನೋಟದಲ್ಲೇ

ನಾಚಿಸುತ್ತ ನಡೆತಂದು ನಿಂತಳು. ಆ ಸಮಯಕ್ಕೆ ವಾರುಣಿಯ ಶೀರ್ಷಿಕೆಯಲ್ಲಿದ್ದ ಮೇನಕೆಯು ಕನ್ಯಾರ್ಥಿಯಾಗಿ ಬಂದ ಸರ್ವ ಶ್ರೇಷ್ಠರನ್ನು ತೋರಿಸುತ್ತ, ಶ್ರೀ ಲಕ್ಷ್ಮಿಯು ಯಾರನ್ನು ಪತಿಯಾಗಿ ಆರಿಸುವಳು ಎಂಬ ಪ್ರಶ್ನೆಯನ್ನು ಕೇಳಿದಳು. ರೂಪಕದ ಸಂಭಾಷಣೆಯ ನಿಯಮದಂತೆ ಶ್ರೀ ಲಕ್ಷ್ಮಿಯಾಗಿದ್ದ ಉರ್ವಶಿಯು ತಾನು 'ಪುರುಷೋತ್ತಮನಾಂತು ನಾರಾಯಣನನ್ನು ಪತಿಯಾಗಿಸಿಕೊಳ್ಳುವೆ' ಎನ್ನಬೇಕಿತ್ತು. ಆದರೆ ಅದರ ಬದಲಿಗೆ ಬಾಯಿ ತಪ್ಪಿ 'ಪುರೂರವನಾಂತು ನರನನ್ನು ಪತಿಯಾಗಿಸಿಕೊಳ್ಳುವೆ' ಎಂದು ನುಡಿದುಬಿಟ್ಟಳು. ಒಂದು ವಿಧದಲ್ಲಿ ವಿಧಿಯೇ ಅವಳ ಬಾಯಿಯಿಂದ ಈ ತಪ್ಪನ್ನು ಹೊರಡಿಸಿದಂತಿತ್ತು. ಆ ಕ್ಷಣಕ್ಕೆ ಕೋಪಾವಿಷ್ಟನಾದ ಭರತ ಮುನಿಯು ಉರ್ವಶಿಯಿಂದಾಗಿ ತನ್ನ ಪ್ರಯತ್ನವೆಲ್ಲ ವಿಫಲವಾಯಿತೆಂದು ಕ್ರೋಧಿಸುತ್ತ ಉರ್ವಶಿಗೆ, 'ಮಾನಸದಿಂದ ಚ್ಯುತಳಾಗಿ ಮರ್ತ್ಯ ಲೋಕಕ್ಕಿಳಿಯುವಂತೆ' ಶಾಪವಿತ್ತನು. ಅದೇ ಸಮಯಕ್ಕೆ ಇಂದ್ರನು ಮಧ್ಯ ಪ್ರವೇಶಿಸಿ ಮುನಿಗೆ ಶಾಂತವಾಗುವಂತೆ ಕೋರಿದನು. ಆದರೆ, ಭರತ ಮುನಿ ನುಡಿದ ನುಡಿಯನ್ನು ಹಿಂತೆಗೆದುಕೊಳ್ಳಲು ಸಾಧ್ಯವಿಲ್ಲದಾಗಿ ಒಂದು ರೀತಿಯಿಂದ ಅದು ವಿಧಿಯಾಡಿಸಿದ ನುಡಿಯೇ ಆಗಿದ್ದು, ಅದು ಭೂಲೋಕದ ಕಾಂತನಿಗಾಗಿ ಕಲಿವಿಲಿಗೊಳ್ಳುತ್ತಿದ್ದ ಉರ್ವಶಿಗೆ ಶಾಪವಲ್ಲದೆ ವರವಾಗಿ ಪರಿಣಮಿಸುವುದು ಎಂದು ನುಡಿದ ಭರತ ಮುನಿಯು ಉರ್ವಶಿಗೆ ಕೆಲ ಕಾಲದವರೆಗೆ ಭೂಲೋಕದ ಸುಖವನ್ನುಂಡು ಮತ್ತೆ ಮಾನಸಕ್ಕೆ ಮರಳುವಂತೆ ಆದೇಶಿಸುತ್ತ ಅಲ್ಲಿಂದ ನಡೆದನು.

ಇದೇ ದೃಶ್ಯವನ್ನು ಮಹಾಕವಿ ಕಾಳಿದಾಸನು ಚಿತ್ರಿಸುವಾಗ ಒಂದು ವಿಶಿಷ್ಟತೆಯನ್ನು ತೋರಿದ್ದಾನೆ. ಅದನ್ನು ಸೂಕ್ಷ್ಮವಾಗಿ ಗಮನಿಸಬೇಕಾಗುತ್ತದೆ. ಅದೇನೆಂದರೆ, ಸೂರ್ಯೋಪಾಸನೆಯನ್ನು ಮುಗಿಸಿ ಮರಳುತ್ತಿದ್ದ ಪುರೂರವನಿಗೆ ದೂರದಲ್ಲಿ ಅಪ್ಸರೆಯರ ಗುಂಪೊಂದು ಆರ್ತನಾದಗೈಯುತ್ತಿರುವುದು ಕೇಳಿ ಅತ್ತ ಕಡೆ ಸಾಗಿದಾಗ ಉರ್ವಶಿ ಮತ್ತವಳ ಸಖಿಯಾದ ಚಿತ್ರಲೇಖೆಯನ್ನು ಕೇಶಿಯೆಂಬ ದೈತ್ಯನು ಅಪಹರಿಸಿ ಕೊಂಡೊಯ್ಯುತ್ತಿರುವ ವಿಷಯವನ್ನು ತಿಳಿದು, ಆ ದೈತ್ಯನನ್ನು ಬೆನ್ನಟ್ಟಿ ಅವನನ್ನು ಸೋಲಿಸಿ ಉರ್ವಶಿ ಮತ್ತು ಚಿತ್ರಲೇಖೆಯನ್ನು ಅಪಹರಣದಿಂದ ರಕ್ಷಿಸಿ ಅವರನ್ನು ಮತ್ತೆ ಅಪ್ಸರ ಬಳಗಕ್ಕೆ ಒಪ್ಪಿಸುತ್ತಾನೆ. ಈ ಸಂದರ್ಭದಲ್ಲಿ ಪುರೂರವ ಮತ್ತು ಉರ್ವಶಿಯರ ಮಧ್ಯೆ ಪ್ರೇಮಾಂಕುರವಾಗುತ್ತದೆ. ಆದರೆ ಅದೇ ಸಮಯಕ್ಕೆ ಸ್ವರ್ಗದಿಂದಿಳಿದ ಗಂಧರ್ವ ರಾಜ ಚಿತ್ರರಥನ ಮಧ್ಯ ಪ್ರವೇಶವಾಗುತ್ತದೆ.

ಇಂದ್ರನಾಜ್ಞೆಗೆ ಮಣಿದು ಉರ್ವಶಿಯಾದಿಯಾದ ಸಕಲ ಅಪ್ಸರೆಯರು ಕೂಡಲೇ ಸ್ವರ್ಗಕ್ಕೆ ಮರಳುತ್ತಾರೆ.

ಮೊದಲ ಅಂಕ ಮುಗಿದ ನಂತರ ಎರಡನೆಯ ಅಂಕದಲ್ಲಿ ಪ್ರತಿಷ್ಠಾನ ಪುರದ ರಾಜ ವೈಭೋಗದ ವರ್ಣನೆಯನ್ನು ನೀಡಲಾಗಿದೆ. ಅದರಲ್ಲಿ ಪುರೂರವನ ರಾಜಪ್ರಾಸಾದ, ಅವನ ಪತ್ನಿಯಾದ ಕಾಶಿರಾಜನ ಪುತ್ರಿ ಔಶೀನರಿ ಮಹಾದೇವಿ, ರಾಣಿಯ ಆಪ್ತ ಚೇಟಿ ಮತ್ತು ನೃಪನ ಆಪ್ತಮಿತ್ರ ಮಾಣವಕನ ಕುರಿತ ದೀರ್ಘ ವಿವರಣೆಯನ್ನು ನೀಡಲಾಗಿದೆ. ಒಂದು ರೀತಿ ಇದನ್ನು ಕಾವ್ಯದ ಮಧ್ಯೆ ಬರುವ ಶಾಂತ ರಸದ ಚಿತ್ರಣವೆನ್ನಬಹುದು. ಈ ಅಂಕದ ನಡುವೆ ಪುರೂರವ ಮತ್ತು ಮಾಣವಕನೊಂದಿಗೆ ನಗರದ ಪ್ರಮದ ವನಕ್ಕೆ ತೆರಳಿ ಅಲ್ಲಿನ ಮಣಿಶಿಲಾ ಪಟ್ಟಾಸನದ ಮೇಲೆ ಕುಳಿತುಕೊಂಡು ಉರ್ವಶಿಯಿಂದ ದೂರವಾದ ತನ್ನ ವಿರಹ ವೇದನೆಯನ್ನು ಮರೆಯಲು ಪ್ರಯತ್ನಿಸುತ್ತಾನೆ. ಅದೇ ಸಮಯಕ್ಕೆ ಆ ಸ್ವರ್ಗ ಲೋಕದಿಂದ ಉರ್ವಶೀ ಮತ್ತವಳ ಸಖಿ ಚಿತ್ರಲೇಖೆಯರ ಆಗಮನವಾಗುತ್ತದೆ. ಅವರು ದೈತ್ಯರಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳಲೋಸುಗ ದೇವ ಗುರು ಬೃಹಸ್ಪತ್ಯಾಚಾರ್ಯರಿಂದ ಉಪದೇಶಿತವಾದ ಅಪರಾಜಿತೆ ಎಂಬ ಶಿಖಾಬಂಧನ ವಿದ್ಯೆಯನ್ನು ಪ್ರಯೋಗಿಸಿ ಅದೃಶ್ಯರಾಗಿ ಇಳಿದು ಬಂದು ಪ್ರತಿಷ್ಠಾನ ಪುರದ ಹೊರ ವಲಯದಲ್ಲಿನ ಪ್ರಮದ ವನಕ್ಕೆ ಬಂದಿಳಿಯುತ್ತಾರೆ. ಅಲ್ಲಿ ನಡೆದ ಭೂರ್ಜಪತ್ರದ ಘಟನೆಯ ನಂತರ ಉರ್ವಶಿ ಪುರೂರವರಿಬ್ಬರ ಸಮಾಗಮವು ಜರುಗಿ ಕೆಲ ಹೊತ್ತಿನಲ್ಲೇ ಮತ್ತೆ ಅವರಿಬ್ಬರು ಬೇರೆ ಬೇರಾಗುವ ಸಂದರ್ಭವು ಜರುಗುತ್ತದೆ. ಆಕಾಶ ಮಂಡಲದ ಮಧ್ಯದಿಂದ ಇಳಿದು ಬಂದ ಸ್ವರ್ಗದ ದೂತನೊಬ್ಬ, ಸ್ವರ್ಗದ ಸಭಾಂಗಣದಲ್ಲಿ ನಾಟ್ಯಾಚಾರ್ಯ ಭರತ ಮುನಿಗಳು ತಾವು ರಚಿಸಿದ ಲಕ್ಷ್ಮೀ ಸ್ವಯಂವರವೆಂಬ ನಾಟಕವನ್ನು ಇಂದೇ ದೇವತೆಗಳ ಮುಂದೆ ಆಡಿಸಿ ತೋರಿಸಬೇಕೆಂದು ನಿಶ್ಚಯಿಸಿದ್ದು, ಅದಕ್ಕೆ ಸಂಬಂಧಿಸಿದ ಪಾತ್ರಧಾರಿಗಳೆಲ್ಲ ಈಗಾಗಲೇ ರಂಗಾಭಿನಯಕ್ಕೆ ಸಿದ್ಧರಾಗಿದ್ದು, ಲಕ್ಷ್ಮಿ ಭೂಮಿಕೆಯಲ್ಲಿರುವ ಉರ್ವಶೀಯನ್ನು ತ್ವರಿತದಲ್ಲಿ ಕರೆತರಲು ಆಜ್ಞಾಪಿಸಲಾಗಿದೆ ಎಂದು ತಿಳಿಸುತ್ತಾನೆ. ಇಂದ್ರನಾಜ್ಞೆಗೆ ಮಣಿದು ಉರ್ವಶಿಯು ಮತ್ತೆ ಪುರೂರವನನ್ನು ತೊರೆದು ಹೋಗಬೇಕಾಗುತ್ತದೆ. ಇಲ್ಲಿ ಎರಡನೆಯ ಹಂತದ ವಿಪ್ರಲಂಬ ಶೃಂಗಾರದ ಅವತರಣಿಕೆಯಾಗುತ್ತದೆ. ಕಾಳಿದಾಸನ ಕಾವ್ಯದಲ್ಲಿ ಒಟ್ಟು ಮೂರು ಬಾರಿ

ವಿಪ್ರಲಂಬವು ಕಾಣಿಸಿಕೊಂಡರೆ, ಶ್ರೀ ಅರವಿಂದರ ಕಾವ್ಯದಲ್ಲಿ ಕೇವಲ ಎರಡು ಬಾರಿ ಮಾತ್ರ ಕಾಣಿಸಿಕೊಳ್ಳುತ್ತದೆ.

ಸ್ವರ್ಗ ಲೋಕಕ್ಕೆ ತೆರಳಿದ ಉರ್ವಶಿಯು ತನಗಾಗಿ ಮೀಸಲಿದ್ದ ಶ್ರೀ ಲಕ್ಷ್ಮಿ ಪಾತ್ರದಲ್ಲಿ ತೋರಿದ ತಪ್ಪಿನಿಂದಾಗಿ ಭರತ ಮುನಿಯಿಂದ ಶಪಿತಳಾಗಿ ನಂತರ ಇಂದ್ರನಿಂದ ಪ್ರೇಶಿತಳಾಗಿ ಮತ್ತೆ ಚಿತ್ರಲೇಖೆಯೊಡನೆ ಭೂಮಿಗೆ ಬರುತ್ತಾಳೆ. ದೇವಮಾನದ ಕಾಲಾವಧಿಯಲ್ಲಿ ನೋಡಹೊರಟರೆ ಸ್ವರ್ಗದಿಂದಿಳಿದ ಉರ್ವಶಿಯು ಭೂರ್ಜಪತ್ರದಿಂದ ನೃಪನಿಗೆ ಸಂದೇಶವನ್ನು ಕಳಿಸಿ, ಅವನಿಗೆ ದರ್ಶನವಿತ್ತು, ದೂತನ ನುಡಿಯಂತೆ ಪುನಃ ಸರ್ಗಕ್ಕೇರಿ ಅಲ್ಲಿ ಮುನಿಯಿಂದ ಸ್ವರ್ಗಚ್ಯುತಳಾಗಿ ಮರಳಿ ಪುರೂರವನಲ್ಲಿಗೆ ಬಂದದ್ದು ಕೇವಲ ಸ್ವರ್ಗಾವಧಿಯ ಒಂದು ದಿನದ ಘಟನೆಯಷ್ಟೇ ಆಗಿದೆ. ಆದರೆ, ಪ್ರತಿಷ್ಠಾನದಿಂದ ಉರ್ವಶಿಯು ಸ್ವರ್ಗಕ್ಕೇರಿದ ನಂತರ ಪುರೂರವನು ಪುನಃ ವಿರಹ ವೇದನೆಯಲ್ಲಿ ಬಳಲಿ ಬೆಂಡಾಗಿರುತ್ತಾನೆ. ಭೂರ್ಜಪತ್ರದ ಸನ್ನಿವೇಶದ ನಂತರ ಕುಗ್ಗಿಹೋದ ಅವನ ಪತ್ನಿ ಔಶೀನರಿ ಮಹಾದೇವಿಯು ಪತಿಗಾಗಿ ಪ್ರಿಯಾನುಪ್ರಸಾದವೆಂಬ ಕೌಮುದಿ ವ್ರತವನ್ನು ಕೈಗೊಂಡಿರುತ್ತಾಳೆ. ಅದರ ಸಮಾಪ್ತಿಯ ದಿನ ಮುಚ್ಚಂಜೆಯ ಸಮಯದಲ್ಲಿ ಮತ್ತೆ ಉರ್ವಶಿಯ ಆಗಮನವಾಗುತ್ತದೆ. ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ ಸ್ವರ್ಗದ ಒಂದು ದಿನಮಾನದಲ್ಲಿ ನಡೆದ ರೂಪಕದ ಸಮಯಕ್ಕಾಗಲೇ ಭೂಮಿಯಲ್ಲಿ ಸುಮಾರು ಆರು ತಿಂಗಳು ಕಳೆದುಹೋಗಿದ್ದವು. ವಿಭಿನ್ನ ಆಯಾಮಗಳಲ್ಲಿ ಜರುಗುವ ಈ ಕಾಲದ ವ್ಯತ್ಯಯವನ್ನು ಆಧುನಿಕ ವಿಜ್ಞಾನದಲ್ಲಿ "Time dilation" ಎಂದು ಎಂದು ಕರೆಯಲಾಗುತ್ತದೆ. ಅಂದರೆ ಭೂಮಿಯ ಕಾಲಮಾನಕ್ಕೂ ಬೇರೊಂದು ಗ್ರಹದ ಕಾಲಮಾನಕ್ಕೂ ಇರುವ ವ್ಯತ್ಯಾಸದಿಂದಾಗಿ ಇಂತಹ ಏರಿಳಿತವು ಘಟಿಸುತ್ತದೆ.

ಆದರೆ ಶ್ರೀ ಅರವಿಂದರು ಕಾವ್ಯದಲ್ಲಿ ಇಂತಹ ಸಂದಿಗ್ಧಕ್ಕೆ ಅವಕಾಶವೇ ಇಲ್ಲ. ಏಕೆಂದರೆ, ಹಿಮಾದ್ರಿ ಶೃಂಗದ ಮೇಲೆ ಜರುಗಿದ ಮಾನವ–ಮಾನಸರ ಭೇಟಿಯ ನಂತರ ಮನೋಮಯಕ್ಕೇರಿದ ಉರ್ವಶಿಯು ಅಲ್ಲಿ ವಿರಹ ವೇದನೆಯಿಂದ ಕಾಲವನ್ನು ಕಳೆಯುತ್ತಿರುತ್ತಾಳೆ. ಅಲ್ಲಿ ಶ್ರೀ ಅರವಿಂದರು ಭೂಮಿಯಂತೆಯೇ ಋತದ ಬದಲಾವಣೆಯ ಚಿತ್ರಣವನ್ನು ನೀಡಿದ್ದಾರೆ. ಹಾಗಾಗಿ ಅಲ್ಲಿ ಕಾಲ ವ್ಯತ್ಯಯದ ಪ್ರಸಂಗವೇ ಬರುವುದಿಲ್ಲ.

ಇನ್ನು ಕಾಳಿದಾಸನ ನಾಟಕದಲ್ಲಿ ಲಕ್ಷ್ಮೀ ಸ್ವಯಂವರದ ನೇರದ ಚಿತ್ರಣ ದೊರೆಯುವದಿಲ್ಲ. ಕೇವಲ ಇಬ್ಬರು ಶಿಷ್ಯಂದಿರಾದ ಗಾಲವ–ಪೇಲವರಿಂದಲೇ ಆ ದೃಶ್ಯದ ವರ್ಣನೆಯನ್ನು ಹೇಳಿಸಲಾಗುತ್ತದೆ. ಪ್ರೇಕ್ಷಕರು ಅವರ ಸಂವಾದದಿಂದಲೇ ಸ್ವರ್ಗದಲ್ಲಿ ಜರುಗಿರಬಹುದಾದ ಅದರ ಚಿತ್ರಣವನ್ನು ಕಲ್ಪಿಸಿಕೊಳ್ಳಬಹುದು. ಕಾಳಿದಾಸನು ನೇರವಾಗಿಯೇ ಆ ರೂಪಕದ ಚಿತ್ರಣವನ್ನು ಅಂಕದ ಮೇಲೆ ಮೂಡಿಸಬಹುದಾಗಿತ್ತು, ಆದರೆ, ಅವನ ಕಾಲಕ್ಕೆ ರಂಗವೇದಿಕೆಯು ಸ್ವರ್ಗದ ಚಿತ್ರಣವನ್ನು ನೀಡಲು ಮತ್ತು ಒಂದು ಅಂಕದ ಮೇಲೆ ಅಷ್ಟು ಕಲಾವಿದರನ್ನು ತೋರಿಸಿ ಆ ಸ್ವಯಂವರದ ವೈಭವವನ್ನು ಚಿತ್ರಿಸಲು ಸಾಧ್ಯವಿಲ್ಲದೇ ಹೋಗಿರಬಹುದು. ಆದ ಕಾರಣ ಅವನು ಆ ಇಬ್ಬರು ಕಾಲ್ಪನಿಕ ಶಿಷ್ಯರನ್ನು ಸೃಷ್ಟಿಸಿ ಅವರಿಂದ ಅದನ್ನು ವರ್ಣಿಸಿರಬಹುದು ಎಂದು ಊಹಿಸಬಹುದು!

ಶ್ರೀ ಅರವಿಂದರ ತಮ್ಮ ಕಾವ್ಯದಲ್ಲಿ ಉರ್ವಶಿಯ ಆಪ್ತಸಖಿಯಾಗಿ ಕಾಳಿದಾಸನ ಚಿತ್ರಲೇಖೆಯ ಬದಲಾಗಿ ತಿಲೋತ್ತಮೆಯನ್ನು ಪ್ರಸ್ತಾಪಿಸಿದ್ದಾರೆ. ಇಲ್ಲಿ ಇಂದ್ರನಿಂದ ಪ್ರೇಷಿತಳಾದ ಉರ್ವಶಿಯು ತಿಲೋತ್ತಮೆಯೊಡನೆ ಕಾರ್ಮಣ ಲೋಕಕ್ಕಿಳಿಯಲು ಸಿದ್ಧಳಾಗುತ್ತಾಳೆ. ಈ ಹಂತದಲ್ಲಿ ಶ್ರೀ ಅರವಿಂದರು ತೋರಿದ ಕಾವ್ಯದ ಶೈಲಿಯು ಅಮೋಘವಾದದ್ದು, ಅದು ಕೇವಲ ಪದ ಪ್ರಯೋಗವಲ್ಲ. ಬದಲಿಗೆ ಅದು ಎರಡು ವಿಭಿನ್ನ ಆಯಾಮಗಳ ಮಧ್ಯದ ಲೋಕಯಾನದ ತಂತ್ರದ ಅನಾವರಣವಾಗಿದೆ. ಅದು wormhole ಮತ್ತು Astral travelನ ಸಂಕೇತದ ಸೂತ್ರೀಕರಣವಾಗಿದೆ.

ಅತ್ತ ಉರ್ವಶಿ–ತಿಲೋತ್ತಮೆಯರಿಬ್ಬರು ಆಕಾಶ ಮಂಡಲದಿಂದ ಇಳಿಯುವ ದೃಶ್ಯವನ್ನು ತೋರಿಸಲಾಗುತ್ತದೆ. ಅದೇ ಸಮಯಕ್ಕೆ ಇತ್ತ ಇಲಾ ನಗರಿಯಲ್ಲಿ ವಿರಹ ವೇದನೆಯಿಂದ ತಪ್ತನಾದ ಪುರೂರವನು ರಾಜ್ಯ–ನಗರ–ಪಟ್ಟಗಳನೆನಲ್ಲ ತೊರೆದು ಏಕಾಕಿಯಾಗಿ ನಡೆದು ಹಿಮಾಲಯವನ್ನೇರಿದ ಸನ್ನಿವೇಶವನ್ನು ತೋರಿಸಲಾಗುತ್ತದೆ. ಇಲ್ಲಿ ಪುರೂರವನು ತಾನು ಬಯಸಿದ ಕನ್ನಿಕೆಗಾಗಿ ಮರುಗಿ ತಾಪಸನಾಗಿ ಹೊರಡುವ ಘಟನೆಯು ಅವನನ್ನು ಓರ್ವ ಉತ್ತಮ ಪ್ರೇಮಿ ಎಂಬುದನ್ನು ಸಾಕ್ಷೀಕರಿಸುತ್ತವೆ. ಆದರೆ ಇನ್ನೊಂದೆಡೆ ಸಕಲ ಸಾಮ್ರಾಜ್ಯವನ್ನು ಬಿಟ್ಟು, ಪ್ರಜಾ ಸಮೂಹದ ರಕ್ಷಣೆಯ ಜವಾಬ್ದಾರಿಯನ್ನು ಮರೆತು ಮುಂದೋಡಿದ ಅವನನ್ನು ಓರ್ವ ವಿಷಮ ನೃಪನಾಗಿ ಚಿತ್ರಿಸುತ್ತದೆ. ಈ ಎರಡನೆ ಅಧ್ಯಾಯದಲ್ಲಿ ಇಲಾ ಪಟ್ಟಣದ ಸೊಬಗು ಸೌಂದರ್ಯವನ್ನು, ಆಡಳಿತದ ವೈಖರಿಯನ್ನು, ಅಲ್ಲಿನ ಜನಾಂಗದ ಸೂಕ್ಷ್ಮ

ವರ್ಣನೆಯನ್ನು ನೀಡಲಾಗಿದೆ. ಮತ್ತು ಹಿಮಾದ್ರಿಯಿಂದಿಳಿದು ಇಲಾ ಪಟ್ಟಣವನ್ನು ಸುತ್ತಿ ಹರಿಯುವ ಗಂಗಾ ನದಿಯ ಚಿತ್ರಣವನ್ನು ಕೊಡಲಾಗಿದೆ. ಮೊದಲ ಅಧ್ಯಾಯದಲ್ಲಿ ಗಂಗಾ ನದಿಯ ಉಗಮದ ಕುರಿತು ಹೇಳಿದರೆ, ಇಲ್ಲಿ ಅವಳು ಹರಿಯುವ ಮಾರ್ಗವನ್ನು ಉಲ್ಲೇಖಿಸಲಾಗಿದೆ.

ಇನ್ನು ನಗರವನ್ನು ತೊರೆದು ಉತ್ತರ ಮಾರ್ಗವಾಗಿ ನಡೆದ ಪುರೂರವಸ್ಸನು ಬದರಿಕಾಶ್ರಮವನ್ನು ದಾಟಿ ಹಿಮಾದ್ರಿಯ ಅತ್ಯುಚ್ಚ ಶೃಂಗವನ್ನೇರಿ ಚರಿಸಿದನು. ಹೀಗೆ ಅವನು ಆ ಪರ್ವತ ಶೃಂಗಗಳಲ್ಲಿ ಸತತ ಆರು ತಿಂಗಳ ಕಾಲ ಪರಿವ್ರಾಜಕನಂತೆ ಅಲೆದಾಡಿದನು. ಆರನೆಯ ತಿಂಗಳಿನ ಆರಂಭಕ್ಕೆ ಹಿಮದ ಪ್ರಯಾಸಪಟ್ಟವನೇರಿದನು. ಏಳನೆಯ ತಿಂಗಳಿನಾರಂಭಕ್ಕೆ ಅವನು ಹಿಮಾಲಯವನ್ನು ಸುತ್ತುವದನ್ನು ನಿಲ್ಲಿಸಿದನು. ಆ ಉತ್ತುಂಗ ಗಿರಿಯಲಿರುವ ಒಂದು ಕಮರಿಯೊಳಗೆ ಕುಳಿತು ದಿನಗಳ ಕಳೆಯಲಾರಂಭಿಸಿದನು. ಸತತ ಆರು ದಿನಗಳು ಹುಟ್ಟಿ ಮರೆಯಾದವು. ಆ ಏಳನೆಯ ತಿಂಗಳಿನ ಏಳನೆಯ ದಿನ ಸ್ವರ್ಗ ಸುಂದರಿಯರ ಆಗಮನವಾಗಿತ್ತು.

ಆ ಅಪ್ಸರೆಯರು ತಮ್ಮ ಸಮ್ಯಕ್–ಜ್ಞಾನದಿಂದ ಪುರೂರವನ ಪೂವ ವೃತ್ತಾಂತಗಳನೆಲ್ಲ ಅರಿತುಕೊಂಡು ಅವನಿರುವ ತಾಣವನ್ನು ತಿಳಿದು ಆ ಹಿಮ ಕಂದರದೆಡೆ ದೌಡಾಯಿಸಿದರು. ಉರ್ವಶಿಯನ್ನು ಕೈಹಿಡಿದು ಕರೆತಂದ ತಿಲೋತ್ತಮೆಯು ಪುರೂರವನ ಕುರಿತು, "ಜಲಾಧಿನಿವಾಸಿಗಳಾದ ತಾವು ಯಾರ ಅಂಕೆಗೂ ಒಳಪಡದೆ ಹರಿಯುವ ನದಿಯಂತಿದ್ದು, ಯಾವುದೇ ಪ್ರಭುತ್ವಕ್ಕೆ ಸೇರಿದವರಲ್ಲ. ಅದಾಗ್ಯೂ ಇಂದು ಅಪ್ಸರೆ ಉರ್ವಶಿಯು ಕಾರ್ಮಣನೋರ್ವನ ಸಂಗವನ್ನು ಬಯಸಿ ಭೂ–ಭುವನಗಳ ಬೆಸೆಯಲೆಂದು ಧೇನಿಸುತ್ತಿದ್ದಾಳೆ. ಹಾಗಾಗಿ ನಿಯತಿಯೇ ಇಂದು ತನ್ನ ನಿಯಮವನ್ನು ಸಡಿಲಿಸಿ ದ್ಯಾವಾ–ಪೃಥಿವಿಗಳ ನಡುವೆ ಸಂಬಂಧವನ್ನು ಬೆಸೆಯಲು ಸಿದ್ಧವಾಗಿದೆ. ಆದರೆ ಮಾನಸವು ಕರಾರುಗಳಿಲ್ಲದೇ ಯಾವುದೇ ವರಗಳನ್ನು ಕರುಣಿಸುವದಿಲ್ಲ. ಹಾಗಾಗಿ ಉರ್ವಶಿಯು ಕೊನೆಗಾಲದವರೆಗೂ ನಿನ್ನವಳಾಗಿಯೇ ಇರಬೇಕಾದರೆ, ಯಾವುದೇ ಕಾಲಕ್ಕೂ ಅವಳೆದುರಿಗೆ ನಗ್ನನಾಗಿ ಕಾನಿಸಿಕೊಳ್ಳಬೇಡ! ಎಂದು ಹೇಳಿ ಉರ್ವಶಿಯನ್ನು ಅವನಿಗೆ ಒಪ್ಪಿಸಿ ಬೆಳ್ಳಿ ಚಿಕ್ಕೆಯಂತಾಗಿ ಏರಿ ಮನೋಲೋಕದೆಡೆ ಮಾಯವಾದಳು.

(ಸಶೇಷ)

## ಮುಖಪುಟದ ಕವನಗಳು

**2**

ಕಲ್ಯಾಣಕಾಗಿ ಉತ್ಕಂಠ ಸ್ಪಂದ ಅವನೀಗ ದರ್ಶಗೊಂಡು,
ತಾರಕದಿ–ಮುರಲಿ ನಾದವನು ಸೃಜಿಸಿ ಸಂಯೋಗ ಹೊಂದಲೆಂದು
ಮುದ–ಮೋದ – ಸ್ವನದ ಆತ್ಮ–ಸಂಗಾತಿಯಾಂತರ್ಯ ತುಡಿತ ಕಂಡು,
ನೀಲಕಂಠಗರಿ ಅವನ–ಶಿರ–ಕವಚ, ತರು–ಮರದಿ ಅರಳಿ ಇಂದು ॥ 1 ॥

ತಪ್ತ ಭಾವದಾ ಅವನ ಉಸಿರೀಗ ತೋಷಕ್ಕೆ ಕರೆಯ ಪೋಷ,
ನೀಲಲೋಹಿತದ ಘನಸಾಂದ್ರ ಭೋಗದಾಲೋಕವವನ ಕೋಶ.
ದಿವಿಜ–ಕೋಮಲದ ಭೂಮುದಾಭೀಪ್ಸೆ ರಕ್ತಕ್ಕು ರಂಗು ತಂದು
ಪ್ರಕೃತಿ ಸಹಜದಾ ದೇವ –ಇಂದ್ರಿಯದ– ತೋಷಗಳು ಘನದಿ ನಿಂದು. ॥ 2 ॥

ರಮಣೀಯವಾಗಿ ತಾ ದೃಷ್ಟವೀಗ, ಮೋಹನದ ಸ್ವರದ ತಾಲ
ಆರೋಹ ಮತ್ತೆ ಅವರೋಹದಲ್ಲಿ ಲೋಕಾತಿಲೋಕ ಲೀಲ
ಪರಮೋಚ್ಚ ಪುಲಕ ಹರ್ಷಾತಿರೇಕ ಜೀವನದಿ ಸಲಿಲವಾಗಿ
ಇದು ನಿಯತಿಲಿಖಿತ ಆಧಾರಭೂತ ಸಾರ್ಥಕಕೆ ಖಾತ್ರಿಯಾಗಿ ॥ 3 ॥

ಸಾವಿರದ ಚಲನಗಳು ತುಡಿತದಲ್ಲಿ ಸ್ಪರ್ಶಿಸಿತು ಘಳಿಗೆಗಳನು
ಶೀಘ್ರಾತಿಶೀಘ್ರದಲಿ ಚಲಿತ ಕ್ಷಣದ–ಭಂಗುರದ ಭಾವಗಳನು.
ಚಂಡವೇಗದಾ ಅರಿವಿಗೀಗಿಲ್ಲಿ ಆ–ಕವಚ ದೇವಸದೃಶ
ಆವರಿಸಿ ತಾನು ಅನುಭಾವಗೊಳಿಸೆ ಭವದ ನಿತ್ಯದಾವೇಶ ॥ 4 ॥

ಉಸಿರುಸಿರಿಗೀಗ ಅದ ಕುಸುರಿಗೊಳಿಸಿ ಸಂತೃಪ್ತಿ ಅಲೆಗಳಲ್ಲಿ
ಉತ್ಕಟದ ತೃಪ್ತಿಗಾ–ಕೃತಿಯ ಪ್ರತಿಮೆ ಪಡಿಮೂಡಿಸುತ್ತ ಅಲ್ಲಿ;
ಸರ್ವಾಂಗವೀಗ ಸರ್ವಾತಿಸರ್ವ ಸಾದೃಶ್ಯ ಪರ್ವವಾಗಿ
ಜೊತೆ ಸರ್ವ ನಾದ ಸಂಯೋಗವೀಗ ಏಕೈಕ್ಯ ಚಿತ್ತವಾಗಿ. ॥ 5 ॥

**– ಪುಟ್ಟು ಕುಲಕರ್ಣಿ**

**(ದಳ 4 ರೇಣು 1 ಪುಟ 352)**

**3**

ಪಾರಲೌಕಿಕದ ಚಿದ್ರೂಪ–ಶಕ್ತಿಗಳ ಕ್ಷಮತೆಗಳ ಧಾಮವಾಗಿ
ಧರ್ಮಸಂಕ್ರಾಂತ ನಾದ–ಮಂಡಳವು ವಿರಾಟ್–ಪೂರ್ಣವಾಗಿ,
ದೀಪ್ತಿಮಯ ತೇಜದಭಿಜಾತ ಗೀತ–ಸಂಗೀತ–ವಾದ್ಯ–ವೃಂದ
ಸ್ವರಗ್ರಾಮವೊಂದು ಅನುಸ್ಪಂದದಲ್ಲಿ ಪರಿವೃತ್ತಿ ನಾದ–ಛಂದ

ಏಕತಾಲದಲಿ ಸಂವಾದವಮಿತ ತಲ್ಲೀಯ ಘನವು ಇಲ್ಲಿ
ಧ್ವನ್ಯಾತ್ಮವೀಗ ಸ್ವರಕೂಟದಲ್ಲಿ ಆತ್ಮದಾ ಬಂಧದಲ್ಲಿ
ಕೊಡು–ಕೊಳುವ ಸ್ಪಂದದಲಿ ಪೂರ್ಣ ನಾದ–ಸ್ವರ–ಭಾವ–ಬಂಧದೊಳಗೆ
ಸಮನ್ವಯದಲ್ಲಿ ಸಮ್ಮಿಲಿತಗೊಂಡು ಏಕ–ಲಯ–ತಾಳದೊಳಗೆ

ಸಂಗಮದಿ ಮುದಿತ ತಲ್ಲೀನಪೂರ್ಣ, ಅಗಣಿತದ ಅಂತರಾಳ.
ಪ್ರಲಂಬಿತಗೊಂಡ ನವನವೋನ್ಮೇಷ ಈ ಲೋಕ–ಲೋಕಗಳಿಗೆ
ಅವನೀಗ ಉದಿತಗೊಳ್ಳುತಲಿ ಸ್ಪಂದ ಕಾಂತಿಯುಸಿರುಗಳಿಗೆ
ವೈಶ್ವಿಕದ ನಿತ್ಯದನಿಮೇಷ ದಿಟ್ಟಿಯಲಿ, ಬೆಳಗುಗೊಂಡ ಭಾಗ.

ಸರ್ವಸ್ವವೆಲ್ಲ ಹೊಳೆಹೊಳೆವ ಕಳೆಯ ಆ ದಿವ್ಯಜ್ಯೋತಿಯೀಗ
ಸುಸ್ಥಿರದಿ ನಿತ್ಯ–ನೆಲೆವಾಸಿಯಾಗಿ ಅವತಾರ ಕಂಡುದೀಗ
ಏಕೈಕ ಶಾಂತ ಘನಸಾಂದ್ರಮಯದ ಆರ್ಣವದ ವರ್ಣಗಳಲಿ
ಲಹರಿಯೊಂದುದಿತ ವಿಕಸನಕೆ ಮುದಿತ ನಾದ–ವರ್ಣದಲಿ ತೇಲಿ.

**– ಪುಟ್ಟು ಕುಲಕರ್ಣಿ**
**(ಸಾವಿತ್ರಿ; ದಳ 3 ರೇಣು 3 ಪುಟ 325)**

**4**

ಹೃದಯಾಂತರಾಳದಲ್ಲೀಗ ಗೂಢ ಘನಶಾಂತ ತೋಷವಿಲ್ಲಿ
ಚಿರಂತನದಲ್ಲಿ ರಹವಾಸಿಯಾಗಿ ತಾನಿರಲು ಬಯಸಿತಿಲ್ಲಿ,
ಅಜ್ಞಾತ ಮನುಜ ಅದನರಿಯದಾದ ಹಂಬಲಿಸಿ ಅರಸುತಲ್ಲಿ
ನಿನ್ನ ಪಡೆಯಲೆನೆ ಅಲೆದಲೆದ ಹೊರಗೆ, ಕಾಣನವ ಅದನು ಅಲ್ಲಿ.

**– ಪುಟ್ಟು ಕುಲಕರ್ಣಿ**
**(ದಳ 3 ರೇಣು 4 ಪುಟ 345)**

## ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್
## ಪ್ರಕಟವಾಗಿರುವ ಪುಸ್ತಕಗಳ ಪಟ್ಟಿ

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 1 | ಸಮಗ್ರ ಶಿಕ್ಷಣ |
| 2 | ಶ್ರೀ ಅರವಿಂದರು ದಿವ್ಯ ಜೀವನ |
| 3 | ಶ್ರೀ ಅರವಿಂದರು ಭಾರತೀಯ ಧರ್ಮ ಪರಂಪರೆ ಮತ್ತು ಭಗವಾನ್ ಶ್ರೀ ಅರವಿಂದರ ದರ್ಶನ |
| 4 | ಶ್ರೀ ಮಾತಾರವಿಂದರ ಪೂರ್ಣಯೋಗ |
| 5 | ಪ್ರಾರ್ಥನಾ ಪದ್ಯಗಳು |
| 6 | ರವಿ ಬೆಳಗಿದ ಪಥ (ಶ್ರೀಮಾತೆಯವರ ವಚನವೇದ ಸಂಕಲನ) |
| 7 | ನವ್ಹೆಂಬರ್ 24, 1926 ಅಧಿಮಾನಸ ಪ್ರಜ್ಞೆಯ ಅವರೋಹಣ ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ದೃಷ್ಟಿಯಲ್ಲಿ ಸಿದ್ಧಿದಿನದ ಮಹತ್ವ |
| 8 | ಶ್ರೀ ಅರವಿಂದರು (ಒಂದು ಸಂಕ್ಷಿಪ್ತ ಪರಿಚಯ) |
| 9 | ಶ್ರೀಮಾತೆ (ಒಂದು ಸಂಕ್ಷಿಪ್ತ ಪರಿಚಯ) |
| 10 | ಕೇಂಬ್ರಿಜ್‌ನ ಸುಗಂಧಿತ ಪುಷ್ಪ (ಮಾನವತೆಗೆ ಶ್ರೀ ಅರವಿಂದರ ಕೊಡುಗೆ) |
| 11 | ಅತಿಮಾನಸ ಹಾಗೂ ಹೊಸ ಜಗತ್ತೊಂದರ ಜನನ (ಶ್ರೀಮಾತೆ ಹಾಗೂ ಶ್ರೀ ಅರವಿಂದರ ಬರಹಗಳ ಸಂಕಲನ) |
| 12 | ಭಾರತ ಮತ್ತು ಭರತಮಾತೆಯ ದೈವನಿಯತಿ |
| 13 | ಆದರ್ಶ ಶಿಕ್ಷಕ |
| 14 | ಪೂರ್ಣಯೋಗ |
| 15 | ಶ್ರೀ ಅರವಿಂದರ ಧರ್ಮ ಹಾಗೂ ರಾಷ್ಟ್ರೀಯತ್ವ |
| 16 | ಶ್ರೀಮಾತೆಗೆ 72 (ಬಾಹತ್ತರ) ಕವನಗಳ ಅರ್ಪಣೆ |

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 17 | ಶ್ರೀಮಾತಾ (ದೇಹಧಾರಣ ಮಾಡಿದ ಅವರ ಆಧ್ಯಾತ್ಮಿಕ ಜೀವನಯಾತ್ರೆ ಹಾಗೂ ದೇಹದ ಯೋಗ) |
| 18 | ಶಿಕ್ಷಣ ಕುರಿತು ಶ್ರೀಮಾತಾರವಿಂದರ ವಿಚಾರಧಾರೆ |
| 19 | ಶ್ರೀ ಅರವಿಂದ ದರ್ಶನ |
| 20 | ಶ್ರೀಮಾತೆ ಭಾರತಮಾತೆ |
| 21 | ದುರ್ಗಾಸ್ತೋತ್ರ |
| 22 | ಚಿಂತನಗಳು ಮತ್ತು ಸೂಕ್ತಿಗಳು |
| 23 | ಯೋಗ ಸಮನ್ವಯ |
| 24 | ಶ್ರೀ ಅರವಿಂದಾಶ್ರಮ |
| 25 | ಪ್ರಸೂತಿ ಪೂರ್ವದ ಶಿಕ್ಷಣ ಶೋಭಾಯಮಾನ ಭವಿಷ್ಯತ್ತಿನೆಡೆಗೆ |
| 26 | ಮಗುವನ್ನು ಪೋಷಿಸುವುದು ಹೇಗೆ? |
| 27 | ಸುಪ್ರಮಾನಸದ ಶ್ರೀಮಾತೆ |
| 28 | ಸಾವಿತ್ರಿ (ಶ್ರೀ ಅರವಿಂದರ ಮಹಾಕಾವ್ಯದ ಸಾರಾಂಶ) |
| 29 | ಪೂರ್ಣಯೋಗದ ಪಥದಲ್ಲಿ |
| 30 | ಬೆಳಕಿನ ಕಿರಣಗಳು |
| 31 | 24th November 1926 (Descent of Overmental Consciousness) |
| 32 | ಶ್ರೀ ಅರವಿಂದರ ಸಾವಿತ್ರಿ |
| 33 | ಮಾನುಷ ಚಕ್ರ |
| 34 | ಚೈತ್ಯ ಪುರುಷ |
| 35 | ಭವಾನಿ ಭಾರತಿ |
| 36 | ಶಿಕ್ಷಣ |
| 37 | ಯೋಗಾರಂಭ |
| 38 | ಶ್ರೀ ಅರವಿಂದರು |
| 39 | ಶ್ರೀ ಅರವಿಂದರ ‘ಪ್ರೇಮ ಮತ್ತು ಮೃತ್ಯು’ |

## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 02ನೇ ಡಿಸೆಂಬರ್ 2025 ಮಂಗಳವಾರ ಬೆಂಗಳೂರಿನಲ್ಲಿರುವ ಮೀರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್, ಆರೋ ಮೀರಾ ಇಂಟರ್‌ನ್ಯಾಷನಲ್ ಸ್ಕೂಲ್ ಮತ್ತು ದಿ ಆರೋ ಸ್ಕೂಲ್ – ಶಾಲೆಗಳ ವಿದ್ಯಾರ್ಥಿಗಳು ಒಟ್ಟಾಗಿ ಸೇರಿ ದಿ ಆರೋ ಶಾಲೆ ಮೈದಾನದಲ್ಲಿ ವಾರ್ಷಿಕ ದೈಹಿಕ ಶಿಕ್ಷಣ ದಿನವನ್ನು ಆಚರಿಸಲಾಯಿತು. ಜ್ಯೋತಿ ಬೆಳಗುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಸಮಾರಂಭಕ್ಕೆ ಅತಿಥಿಗಳಾಗಿ ಶ್ರೀ ಶ್ರೀನಿವಾಸ ಭಾಗವತುಲ ರವರು ಆಗಮಿಸಿ ತಮ್ಮ ಭಾಷಣದಲ್ಲಿ ವಿದ್ಯಾರ್ಥಿಗಳಿಗೆ ದೈಹಿಕ ಶಿಕ್ಷಣದ ಪ್ರಾಮುಖ್ಯತೆ ಬಗ್ಗೆ ಸವಿಸ್ತಾರವಾಗಿ ತಿಳಿಸಿ ಮಕ್ಕಳನ್ನು ಹುರಿದುಂಬಿಸಿದರು. ಆರೋಸ್ಕೂಲ್ಸ್ ಸಮೂಹದ ಅಧ್ಯಕ್ಷರಾದ ಡಾ॥ ಅಜಿತ್ ಸಬ್ನೀಸ್, ಸದರಿ ಮೂರು ಶಾಲೆಯ ಪ್ರಾಂಶುಪಾಲರು, ದಿ ಆರೋ ಶಾಲೆಯ ಕಾರ್ಯದರ್ಶಿಗಳು ವೇದಿಕೆ ಮೇಲೆ ಉಪಸ್ಥಿತರಿದ್ದರು. ಈ ಮೂರು ಶಾಲೆಯ ವಿದ್ಯಾರ್ಥಿಗಳು ಉತ್ಸಾಹದಿಂದ ಪಥ ಸಂಚಲನದಲ್ಲಿ ಭಾಗವಹಿಸಿ ಸಭಿಕರ ಮೆಚ್ಚುಗೆಗೆ ಪಾತ್ರರಾದರು. ಆನಂತರ ಯೋಗ, ಜಿಮ್ನಾಸ್ಟಿಕ್, ಟೇಕ್ವಾಂಡೋ ಇವುಗಳನ್ನು ವಿದ್ಯಾರ್ಥಿಗಳು ಉತ್ತಮವಾಗಿ ಪ್ರದರ್ಶಿಸಿ ಪ್ರಶಂಸೆಗೆ ಪಾತ್ರರಾದರು. ಇದಾದ ನಂತರ, ಮೂರು ಶಾಲೆಯ ಮಕ್ಕಳು ಪ್ರತ್ಯೇಕವಾಗಿ ನೃತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ಪ್ರದರ್ಶಿಸಿದರು. ವಂದೇಮಾತರಂ ಮತ್ತು ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಸಮಾಪ್ತಿಯಾಯಿತು. ಆನಂತರ, ಮಕ್ಕಳು ಭೋಜನವನ್ನು ಸವಿದು ಆನಂದಿಸಿದರು.

ದಿನಾಂಕ 05ನೇ ಡಿಸೆಂಬರ್ 2025ರ ಶುಕ್ರವಾರ "ಶ್ರೀ ಅರವಿಂದರ ದೇಹ ತ್ಯಾಗ" ದಿನವನ್ನಾಗಿ ಆಚರಿಸಲಾಯಿತು. ತತ್ಸಂಬಂಧ ಬೆಳಿಗ್ಗೆ 10.00 ಗಂಟೆಯಿಂದ 10.20ರ ವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ಸಂಜೆ 5.00 ರಿಂದ 5.30 ಗಂಟೆಯವರೆಗೆ "The Genius of India" ಎಂಬ ವಿಷಯದ ಬಗ್ಗೆ ವೀಡಿಯೋ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ದಿನಾಂಕ 09ನೇ ಡಿಸೆಂಬರ್ 2025 ಮಂಗಳವಾರ "ಶ್ರೀ ಅರವಿಂದರ ಸಮಾಧಿ" ದಿನ ಆಚರಿಸಲಾಯಿತು. ತತ್ಸಂಬಂಧ ಬೆಳಿಗ್ಗೆ 10.00 ಗಂಟೆಯಿಂದ 10.20ರ ವರೆಗೆ ಸಾಮೂಹಿಕ ಧ್ಯಾನವನ್ನು ಏರ್ಪಡಿಸಲಾಯಿತು. ಸಂಜೆ 5.00 ರಿಂದ 6.00 ಗಂಟೆಯವರೆಗೆ "Integral Yoga of Sri Aurobindo" ಎಂಬ ವಿಷಯದ ಬಗ್ಗೆ ವೀಡಿಯೋ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ಈ ಎರಡೂ ಕಾರ್ಯಕ್ರಮಗಳಲ್ಲಿ ಅನೇಕ ಗುರು–ಬಂಧುಗಳು, ಸಾಧಕರು ಮತ್ತು ಇತರರು ಹಾಜರಿದ್ದರು. ಜೂಮ್ ಹಾಗೂ ಯೂಟ್ಯೂಬ್ ಮುಖಾಂತರ ಸಹ ಪ್ರಸ್ತುತ ಪಡಿಸಲಾಯಿತು.



ಫೋಟೊ: ಇಮೇಜಿಂಗ್ ಸಾವಿತ್ರಿ

**RNI No. 22511/1971**
No. of Pages **60 + 4 (Cov. Page)**
KAR Reg No.: RNP/KA/BGS/368/2024-2026
Licensed to post without prepayment License No.PMG BG/WPP-409/2024-2026
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2026
Licensed to Post at BG PSO, Mysuru Road, Bengaluru - 560 026



ಫೋಟೊ: ಇಮೇಜಿಂಗ್ ಸಾವಿತ್ರಿ

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.